# ಅಕ್ಕಮಹಾದೇವಿಯವರ “ಅ” ಅಕ್ಷರದ ವಚನದ ಅರ್ಥ

1) ಅಂಗದ ಭಂಗವ ಲಿಂಗಮುಖದಿಂದ ಗೆಲಿದೆ.

ಮನದ ಭಂಗವ ಅರಿವಿನ ಮುಖದಿಂದ ಗೆಲಿದೆ.

ಜೀವದ ಭಂಗವ ಶಿವಾನುಭಾವದಿಂದ ಗೆಲಿದೆ.

ಕರಣದ ಕತ್ತಲೆಯ ಬೆಳಗನುಟ್ಟು ಗೆಲಿದೆ.

ಜವ್ವನದ ಹೊರಮಿಂಚಿನಲ್ಲಿ ನಿಮ್ಮ ಕಣ್ಣಿಂಗೆ ತೋರುವ ಕಾಮನ ಸುಟ್ಟುರುಹಿದ ಭಸ್ಮವ ನೋಡಯ್ಯ.

ಚೆನ್ನಮಲ್ಲಿಕಾರ್ಜುನ ಕಾಮನ ಕೊಂದು ಮನಸಿಜನಾಗುಳುಹಿದರೆ

ಮನಸಿಜನ ತಲೆಯ ಬರಹವ ತೊಡೆದೆನು.

ಪದಗಳ ಅರ್ಥ

ಅಂಗದಭಂಗ- ಶರೀರ ವಿಡಿದು ಬಂದ ದುಃಖಗಳು. ಭಂಗ-ದುಃಖ,

ಲಿಂಗಮುಖ -ಶಿವದ ಕಡೆ ಮುಖ ಮಾಡುವುದು, ಸದ್ವರ್ತನೆಗಳುಂಟಾಗುವುದು

ಅರಿವಿನಮುಖ- ಜ್ಞಾನದ ಬೆಳಕು,

ಜೀವದ ಭಂಗ-ಜನ್ಮಜನ್ಮದ ದುಃಖ,

ಶಿವಾನುಭಾವ -ಅನುಭಾವ ಗೋಷ್ಠಿ, ಆತ್ಮ ವಿಚಾರದ ಮಂಥನ,

ಕತ್ತಲೆ-ಅಜ್ಞಾನ,

ಹೊರ ಮಿಂಚು-ರೂಪದ ವೈಭವ,

ಉರುಹು-ಸುಡು, ಭಸ್ಮ, ವಿಭೂತಿ.

ತಲೆಯಬರಹ-ಹಣೆಬರಹ, ವಿಧಿಲಿಖಿತ.

ವಚನದ ಅರ್ಥ

ಅಂಗದ ಭಂಗವ ಲಿಂಗಮುಖದಿಂದ ಗೆಲಿದೆ. ಮನದ ಭಂಗವ ಅರಿವಿನ ಮುಖದಿಂದ ಗೆಲಿದೆ. ಈ ದೇಹಕ್ಕೆ ಬಂದೊದಗಿದ ಕಷ್ಟಗಳನ್ನು ಲಿಂಗಪರಮಾತ್ಮನಿಗೊಪ್ಪಿಸಿ ಗೆದ್ದೆ ಮನಸ್ಸಿಗೆ ಒದಗಿದ ಘಾತಗಳನ್ನು ಅರಿವಿನ ಮೂಲಕ ಗೆದ್ದೆ-ಜೀವದ ಭಂಗವ ಶಿವಾ ನುಭಾವದಿಂದ ಗೆಲಿದೆ. ಕರಣದ ಕತ್ತಲೆಯ ಬೆಳಗನುಟ್ಟು ಗೆಲಿದೆ. ಈ ಪ್ರಾಣನಿಗೆ ಬಂದೊದಗಿದ ದುಃಖಗಳನ್ನು ಶರಣರ ಜೊತೆ ಶಿವಾನುಭಾವಗೋಷ್ಟಿ ಅನುಭಾವ ನಡೆಸಿ ಗೆದ್ದೆ. ಇಂದ್ರಿಯಗಳಿಗೆ ಕತ್ತಲೆ, ವಿಕಾರ ಆವರಿಸಿದ ಕಾಲಕ್ಕೆ ಬೆಳಗನ್ನು ಅರಿವನ್ನುಟ್ಟು ಗೆದ್ದೆ. ಜವ್ವನದ ಹೊರಮಿಂಚಿನಲ್ಲಿ ನಿಮ್ಮ ಕಣ್ಣಿಂಗೆ ತೋರುವ ಕಾಮನ ಸುಟ್ಟು ರುಹಿದ ಭಸ್ಮವ ನೋಡಯ್ಯ. ಯೌವನದ ವೈಭವವೇನು ನಿಮ್ಮ ಕಣ್ಣಿಗೆ ಕಾಣುತ್ತಿದೆ.

ಅಲ್ಲಿಯೆ ಕಾಮನನ್ನು ಸುಟ್ಟ ಭಸ್ಮಧಾರಣೆ ಕಾಣಬರುತ್ತಿದೆ ನೋಡಯ್ಯ. ತಾರುಣ್ಯದ ವೈಭವದ ಸೊಗಸಿನಲ್ಲೂ ಅಕ್ಕಮಹಾದೇವಿಯವರು ವಿರಕ್ತಿಯ ಮೂರೆಳೆ ಭಸ್ಮಧಾರಣೆ ಮಾಡಿ

ಚೆನ್ನಮಲ್ಲಿಕಾರ್ಜುನ ಕಾಮನ ಕೊಂದು ಮನಸಿಜನಾಗುಳುಹಿದರೆ ಮನಸಿಜನ ತಲೆಯಬರಹವ ತೊಡೆದೆನು. ನನ್ನ ಗಂಡ ಚೆನ್ನಮಲ್ಲಿಕಾರ್ಜುನದೇವನು ಕಾಮ ದ ಹನದ ಸಂದರ್ಭದಲ್ಲಿ ಕಾಮನ ಭಸ್ಮ ಮಾಡಿದರು. ಆದರೆ ಮನಸಿಜನಾಗುಳುಹಿದರು. ನಾನು ಅಂತಹ ಮನಸಿಜನ ಹಣೆಬರೆಹವನ್ನೆ ತೊಡೆದು ಹಾಕಿದೆನು. ಅಕ್ಕಮಹಾದೇ ವಿಯವರು ತಪಸ್ಸಿನ ಜೀವನಕ್ಕೆ ಬಂದ ಮೇಲೆ ಧ್ಯಾನದ ಮೂಲಕ ಮನಸ್ಸಿನ ನೆಲೆಗಳನ್ನು, ಭವದ ಕಾರಣಗಳನ್ನು ಬಹಳವಾಗಿ ಅನ್ವೇಷಣೆ ನಡೆಸಿದರು. ದೇಹ ಮನಸ್ಸು. ಇಂದ್ರಿಯ, ಪ್ರಾಣ ಇವುಗಳ ಸ್ವರೂಪದ ವಿಶ್ಲೇಷಣೆ ನಡೆಸಿದರು. ದುಃಖದ ಕಾರಣಗಳು ಮತ್ತೆ ಮತ್ತೆ ಸತ್ಯಶೋಧನೆಗೆ ಪ್ರೇರಣೆಯಾದವು. ಯಾವ ಯಾವ ಇಂದ್ರಿಯಗಳು ಯಾವ ಯಾವ ದುಃಖಗಳಿಗೆ ಪ್ರಲೋಭನೆಗಳಿಗೆ ವಶವಾಗುತ್ತವೆ ಎಂಬುದನ್ನು ತಿಳಿದು ವಿಶ್ಲೇಷಿಸಿದರು. ಬಹಳ ಆಳವಾಗಿ ಅವರು ಸತ್ಯಶೋಧನೆ ನಡೆಸಿದರು. ಅವರು ಒಬ್ಬ ಪರಿಪೂರ್ಣ ಗುರುವಾಗಿ ಆಕಾರ ಗೊಂಡರು. ಅಂಗದ ಭಂಗವ ಲಿಂಗಮುಖದಿಂದ ಗೆಲಿದೆ. ನಾನು ಶರೀರವಿಡಿದು ಬಂದೆ. ಇದು ಕಾರಣ ಹುಟ್ಟು ಸಾವಿನ ದುಃಖ ಬಂತು. ಈ ದೇಹವು ಪರಿಭವಕ್ಕೆ ತಂದ ಕಾರಣವಾಗಿ ಭಕ್ತಳಾದೆನು. ಇಷ್ಟಲಿಂಗದೀಕ್ಷೆ ಪಡೆದು ಅನುಭಾವದತ್ತ ಮನಸ್ಸು ಕೊಟ್ಟೆ. ಮನದ ಭಂಗವ ಅರಿವಿನ ಮುಖದಿಂದ ಗೆಲಿದೆ. ಮನಸ್ಸು ದುಃಖ ಗಳಿಗೆ ಒಳಗಾಗುತ್ತದೆ. ಈದುಖಗಳಿಗೆ ಅಜ್ಞಾನವೆಕಾರಣವಾಗಿದೆ. ಮನಸ್ಸು ಕಂಡಿದ್ದು ಕಾಣದ್ದು, ಬೇಕಿದ್ದು ಬೇಡದ್ದು ಕೇಳಿದ್ದು ಎಲ್ಲವನ್ನು ಬಯಸುತ್ತದೆ. ಸಿಗಲಿಲ್ಲ ಎಂದು ಸುಮ್ಮನೆ ದುಃಖಕ್ಕೊಳಗಾಗುತ್ತದೆ. ಈದುಃಖಕ್ಕೆ ಕಾರಣವೂ ಇಲ್ಲ ಅರ್ಥವೂ ಇಲ್ಲ ದುಃಖದ ಕಾರಣ ಅಜ್ಞಾನ. ನಮಗೆ ಅಜ್ಞಾನ ಕಾರಣವಾಗಿ ದುಃಖವಿದೆ. ಅಜ್ಞಾನ ಹೋದರೆ ದುಃಖವೂ ಹೋಗುತ್ತದೆ. ಅರಿವು ಆನಂದಕ್ಕೆ ಮೂಲ. ಭಕ್ತಿ, ಜ್ಞಾನ ವನ್ನು ಬೆಳೆಸಿಕೊಂಡೆ. ಇದು ನನ್ನನ್ನು ಆನಂದದ ಕಡೆಗೆ ಹೊರಳಿಸಿದೆ. ಜೀವದ ಭಂಗವ ಶಿವಾನುಬಾವದಿಂದ ಗೆಲಿದೆ. ದೇಹ ಮನಸ್ಸುಗಳು ಸುಖ, ದುಃಖಕ್ಕೊಳ ಗಾದಂತೆ ಜೀವಾತ್ಮನೂ ದೇಹಕಾರಣವಾಗಿ ಸುಖದುಃಖದಲ್ಲಿ ಸಿಕ್ಕಿಬಿದ್ದಿದ್ದಾನೆ. ಈದೇಹ ಮನಸ್ಸುಗಳು ತಮ್ಮ ಅವಿವೇಕದಿಂದ ಅಪಾರ ರಾಗ ಭೋಗಾದಿಗಳನ್ನು ಬೇಕು ಬೇಕು ಎಂದು ಬಯಸುತ್ತವೆ. ಇದರಿಂದ ದುಃಖಗಳು ಹೆಚ್ಚುತ್ತವೆ. ಈ ದೇಹವು ಯಾವಾಗಲೂ ಸುಖವನ್ನೆ ಬಯಸುತ್ತದೆ. ಹಸಿವು, ತೃಷೆ ವಿಷಯ, ಮುಪ್ಪು ಸಾವು ಇವು ದೇಹಕ್ಕಿವೆ ಮನಸ್ಸಿಗೆ ಮುಪ್ಪು ಇಲ್ಲ. ಜೀವನಿಗಾದರೊ ಈಯಾವ ದುಃಖಗಳೂ ಇಲ್ಲ. ಆದರೂ ಈ ಜೀವನು ಎಲ್ಲ ದುಖಗಳನ್ನು ಅನುಭವಿಸಬೇಕು

ಅಂಗದ ಭಂಗವ ಲಿಂಗಮುಖದಿಂದ ಗೆಲಿದೆ. ದೇಹದ ದುಃಖವನ್ನು ಪರಮಾತ್ಮನ ಕಡೆಗೆ ಮುಖ ಮಾಡಿ ಗೆದ್ದೆ. ಅಂಗ ಕಾರಣವಾಗಿ ಹುಟ್ಟು ಸಾವುಗಳು ಬಂದವು. ಈ ದುಃಖ ಯಾಕೆ? ಇದರಿಂದ ಪಾರಾಗುವುದು ಹೇಗೆ? ಈ ಕಾರಣ ತಿಳಿದು ನಾನು

ಲಿಂಗ'ಭಕ್ತಳಾದೆನು. ಮನದ ಭಂಗವ ಆರಿವಿನ ಮುಖದಿಂದ ಗೆಲಿದೆ. ಈಮನಸ್ಸು ದೇಹ: ದಂತೆಯೆ ಸುಖ ದುಃಖಗಳಿಗೆ ಒಳಗಾಗುತ್ತದೆ. ಈದುಃಖದ ಬಿಡುಗಡೆಗಾಗಿ ಮನಸ್ಸನ್ನು ಅರಿವಿನ ಕಡೆಗೆ ಹೊರಳಿಸಿದೆ. ಈದೇಹ, ಮನಸ್ಸುಗಳು ಜ್ಞಾನಕ್ಕಿಂತ ವಿಷಯದ ಕಡೆಗೆ ಯಾಕೆ ಹೊರಳುತ್ತವೆ. ಇದನ್ನು ತಿಳಿಯಲು ಭಕ್ತಿ ಜ್ಞಾನದ ಕಡೆಗೆ ಹೆಚ್ಚು ಹೊರಳಿದೆ. ಜೀವದ ಭಂಗವ ಶಿವಾನುಭಾವದಿಂದ ಗೆಲಿದೆ. ಈಜೀವನು ಯಾಕೆ ದುಃಖದಲ್ಲಿ ಸಿಕ್ಕಿದ್ದಾನೆ ಇದು ದುಃಖ ಎಂದು ತಿಳಿದೂ ಇವನು ಯಾಕೆ ಈ ಪರಿಭವದಲ್ಲಿ ಬರುತ್ತಿದ್ದಾನೆ. ಇದನ್ನು ತಿಳಿಯಲು ಶರಣರ ದಾರಿಯಲ್ಲಿ ಹೊರಳಿದೆ. ಶಿವಾನುಭಾ ವವೊಂದೆ ದುಃಖವನ್ನು ಗೆಲ್ಲುವ ದಾರಿ ಎಂದು ತಿಳಿದುಕೊಂಡೆ. ಈ ಜೀವನು ತನ್ನ ಗುರಿ ಸಾಧಿಸಿಕೊಳ್ಳಲು ದೇಹ, ಮನವನ್ನು ಆಶ್ರಯಿಸಬೇಕು

ಅದೊಂದೆ ಕಾರಣ ವಾಗಿ ದೇಹ ಮನಸ್ಸುಗಳು ತಮ್ಮ ಆಶೆಯ ಕಡೆಗೆ ಒಲವು ತೋರುತ್ತವೆ. ಅವುಗಳಿಗೆ ವಿಷಯ ಬಹಳ ಸೊಗಸಾಗಿ ಕಾಣುತ್ತದೆ. ಕರಣದ ಕತ್ತಲೆಯ ಬೆಳಗನುಟ್ಟು ಗೆಲಿದೆ. ಕರಣಗಳು ವಿಷಯದಿಂದಾಗಿ ಕುರುಡಾಗಿವೆ. ಅಲ್ಲಿಗೆ ಬೆಳಕನ್ನು ತಂದು ಕತ್ತಲೆಯನ್ನು ಒಡಿಸಿದೆ. ಕಿವಿ, ಚರ್ಮ, ಕಣ್ಣು, ನಾಲಿಗೆ, ಮೂಗು ಇವು ಐದು ಜ್ಞಾನೇಂದ್ರಿಯಗಳು, ಮನಚಿತ್ತ ಬುದ್ಧಿ, ಅಹಂಕಾರ ಇವು ನಾಲ್ಕು ಅಂತಃಕರಣಗಳು. ಇವು ನಮಗೆ ಅರಿವಿನ ಬಾಗಿಲು ತೆರೆಯುತ್ತವೆ. ಇವು ವಿಷಯಮುಖವಾದರೆ ನಮಗೆ ಅರಿವು ದೊರೆಯುವುದಿಲ್ಲ. ದುಃಖಕ್ಕೆ ಇತಿ ಮಿತಿಗಳೇ ಇಲ್ಲ. ಇದನ್ನರಿತೇ ಅರಿವಿನ ಕಡೆಗೆ ಮುಖ ಮಾಡಿದ್ದಾರೆ. ಜವ್ವನದ ಮಿಂಚಿನಲ್ಲಿ ನಿಮ್ಮ ಕಣ್ಣಿಂಗೆ ತೋರುವ ಕಾಮನ ಸುಟ್ಟುರುಹಿದ ಭಸ್ಮವ ನೋಡಯ್ಯ, ಅಕ್ಕ ಅಂಗದ ಮೇಲೆ ಧರಿಸಿರುವ ಭಸ್ಮ ಹೊರಗೆ ದಿಗಂಬರವೆ ದಿವ್ಯಾಂಬರವಾದ ಎತ್ತರ, ವಿರಾಗಿಯಾಗಿ ಲೋಕದ ಸುಖವನ್ನು ದೂರಮಾಡಿ ತಪಸ್ಸಿಗೆ ನಡೆದ ಅವರ ಆಯ್ಕೆ ಇವೆಲ್ಲವೂ ಅವರು ಅರಿವಿನ ಪಥದಲ್ಲಿ ನಡೆದವರು ಎಂಬುದನ್ನು ಹೇಳುತ್ತವೆ. ಚೆಲುವು, ತಾರುಣ್ಯವನ್ನು ಭಕ್ತಿ ಜ್ಞಾನಗಳಿಗೆ ಮೀಸಲಿರಿಸಿದ್ದಾರೆ. ಚೆನ್ನಮಲ್ಲಿಕಾರ್ಜುನ ಕಾಮನ ಕೊಂದು ಮನಸಿಜನಾಗುಳು ಹಿದರೆ ಮನಸಿಜನ ತಲೆಯಬರೆಹವ ತೊಡೆದೆನು. ತಪಸ್ಸಿಗೆ ಕುಳಿತಿದ್ದ ಶಿವನ ತಪಸ್ಸು ಕೆಡಿಸಿದ ಕಾಮನನ್ನು ಶಿವನು ತನ್ನ ಹಣೆಗಣ್ಣಿನಿಂದ ಸುಟ್ಟನು. ಆದರೆ ಮನಸಿಜನಾ ಗು ಎಂದು ವರ ನೀಡಿದನು. ಎಲ್ಲರ ಮನಸ್ಸಿನಲ್ಲಿ ಹುಟ್ಟುವ ಈ ಕಾಮನು ನನ್ನ ದಿನಚರಿಯಲ್ಲಿ ಹುಟ್ಟದಂತೆ ಅವನ ವಿಧಿ ಲಿಖಿತವನ್ನೆ ಅಳಿಸಿಹಾಕಿದೆನು. ಹೀಗೆ ಹೇಳ ಬೇಕಾದರೆ ಅಕ್ಕನವರು ಅದೆಷ್ಟು ಹಿರಿದಾದ ಸಾಧನೆ ಮಾಡಿರಬೇಕು ಆಶ್ಚರ್ಯವಾ ಗುತ್ತದೆ. ನಾನು ಮೈತುಂಬ ಧರಿಸಿರುವ ಭಸ್ಮವು ಅವನನ್ನು ಸುಟ್ಟ ಬೂದಿಯೆ ಆಗಿ ದೆ.

ಲಗ್ನ ಮಾಡಿಕೊ ಎಂದು ಬರುವ ಉದ್ದಾರದ ಸೋಗಿನಲ್ಲಿರುವ ಗಂಡುಗಳಿಗೆ ಚೆನ್ನಾಗಿಯೆ ಮಾತಿನ ಬಾರುಕೋಲಿನಿಂದ ಬಾರಿಸಿದ್ದಾರೆ. ಅಕ್ಕಮಹಾದೇವಿಯವರ ಈ ವಚನ ಅವರ ವ್ಯಕ್ತಿತ್ವಕ್ಕೆ ಕಲಶಪ್ರಾಯವಾದುದು. ಅವರ ಆತ್ಮವಿಶ್ವಾಸ,

ವೈರಾಗ್ಯ ಅನುಪಮವಾದುದು. ಇಂದಿನ ಸ್ತ್ರೀವಾದಿಗಳು ಕೂಡ ನಡೆಸಲಾಗದ ಸ್ತ್ರೀತ್ವದ ಚಿಂತನೆಗಳು ಇಲ್ಲಿ ಸೊಗಸಾಗಿ ಮೂಡಿಬಂದಿವೆ. ಮಹಿಳಾ ಸ್ವಾತಂತ್ರ್ಯದ ಧೋರ ಣೆಗಳು ಇಲ್ಲಿ ಅಮೋಘವಾಗಿವೆ. ಆಯ್ಕೆಗಳು ಒತ್ತಾಯ ಆಗಬಾರದು. ಅದು

ಆಂತರ್ಯದಿಂದ ಮೂಡಬೇಕು. ಮಹಿಳಾ ಸ್ವಾತಂತ್ರ್ಯ ತಂದು ಕೊಟ್ಟವರು ಅಕ್ಕ ಮಹಾದೇವಿಯವರು. ಮಹಿಳಾ ಸ್ವಾತಂತ್ರ್ಯ ದ ಮೊದಲಹೋರಾಟಗಾರ್ತಿ ಅಕ್ಕ ಮಹಾದೇವಿಯವರು. ಮಹಿಳಾ ಸ್ವಾತಂತ್ರ್ಯ, ಅಕ್ಕನವರಿಗೆ ಯಾರೊ ತಂದುಕೊಟ್ಟ ದಲ್ಲ. ಅಕ್ಕನವರೆ ಮೊದಲ ಸ್ತ್ರೀ ವಿಮೋಚನಾ ಶಕ್ತಿ.

2) ಅಂಗದೊಳಗೆ ಅಂಗವಾಗಿ ಅಂಗವ ಲಿಂಗೈಕ್ಯವ ಮಾಡಿದೆ

ಮನದೊಳಗೆ ಮನವಾಗಿ ಮನವ ಲಿಂಗೈಕ್ಯವ ಮಾಡಿದೆ.

ಭಾವದೊಳಗೆ ಭಾವವಾಗಿ ಭಾವವ ಲಿಂಗೈಕ್ಯವ ಮಾಡಿದೆ.

ಅರಿವಿನೊಳಗೆ ಅರಿವಾಗಿ ಅರಿವ ಲಿಂಗೈಕ್ಯವ

ಮಾಡಿದೆ.

ಕ್ರೀಗಳೆಲ್ಲವ ನಿಲಿಸಿ ಕ್ರಿಯಾತೀತನಾಗಿ ನಿಃಪತಿ ಲಿಂಗೈಕ್ಯವ ಮಾಡಿದೆ.

ನಾನೆಂಬುದ ನಿಲಿಸಿ ನೀನೆಂಬುದ ಕೆಡಿಸಿ ಉಭಯಲಿಂಗೈಕ್ಯವ ಮಾಡಿದೆ.

ಚೆನ್ನಮಲ್ಲಿಕಾರ್ಜುನಯ್ಯನೊಳಗೆ ನಾನಳಿದೆನಾಗಿ

ಲಿಂಗವೆಂಬ ಘನವು ಎನ್ನಲ್ಲಿ ಅಳಿಯಿತ್ತು ಕಾಣಾ.

ಪದಗಳ ಅರ್ಥ

ಅಂಗದೊಳಗೆ ಅಂಗವಾಗಿ ಅಂಗವ ಲಿಂಗೈಕ್ಯವ ಮಾಡಿದೆ. ಮನದೊಳಗೆ ಮನವಾಗಿ ಮನವ ಲಿಂಗೈಕ್ಯವ ಮಾಡಿದೆ. ಅಂಗದೊಳಗೆ ಅಂಗವಾದೆ ಈ ಅಂಗವನ್ನು ಲಿಂಗದಲ್ಲಿ ಲಿಂಗೈಕ್ಯಗೊಳಿಸಿದೆ. ಮನಸ್ಸಿನೊಳಗೆ ಮನಸ್ಸಾದೆ. ಈ ಮನಸ್ಸನ್ನು ಲಿಂಗಲ್ಲಿ ಲಿಂಗೈಕ್ಯಗೊಳಿಸಿದೆ. ಅಂಗ, ಮನಗಳು ತಾವು ತಮ್ಮಂತೆ ವರ್ತಿಸಲು ಬಿಡದೆ, ಅಂಗ, ಮನಗಳಲ್ಲಿ ನಾನು ಲೀನವಾದೆ. ಈ ಅಂಗ, ಮನಗಳಿಗೆ ತಿಳಿವಳಿಕೆ ಹೇಳಿದೆ. ಇವು ಗಳನ್ನು ಲಿಂಗಧ್ಯಾನದಲ್ಲಿ ಲೀನವಾಗುವಂತೆ ಮಾಡಿದೆ. ಭಾವದೊಳಗೆ ಭಾವವಾಗಿ ಭಾವವ ಲಿಂಗೈಕ್ಯವ ಮಾಡಿದೆ. ಅರಿವಿನೊಳಗೆ ಅರಿವಾಗಿ ಅರಿವ ಲಿಂಗೈಕ್ಯವ ಮಾಡಿದೆ.

ನನ್ನ ಭಾವದಲ್ಲಿ ಏನೇನೊ ವಿಚಾರಗಳು ಸುಳಿಯುತ್ತಿದ್ದವು. ನನ್ನ ಅರಿವಿನಲ್ಲಿ ಏನೇನೋ ತಿಳಿವಳಿಕೆ ಉಂಟಾಗುತ್ತಿತ್ತು. ಈ ಭಾವಕ್ಕೆ, ಅರಿವಿಗೆ ತಿಳಿವಳಿಕೆ ಹೇಳಿದೆ. ನೀವು ಏನೇನೊ ಭಾವನೆಗಳನ್ನು ಬೆಳೆಯಲು ಬಿಡಬೇಡಿರಿ. ನಿಮ್ಮ ಅರಿವಿನಲ್ಲಿ ಏನೇನೊ ವಿಚಾರ ಮಾಡಲು ಬಿಡಬೇಡಿರಿ. ಭಾವದ ತುಂಬ ಚೆನ್ನಮಲ್ಲಿಕಾರ್ಜು ನನೆ ತುಂಬಿರಲಿ. ಅರಿವಿನ ತುಂಬ ಚೆನ್ನಮಲ್ಲಿಕಾರ್ಜುನನ ಬೆಳಕೆ ತುಂಬಿರಲಿ. ಹೀಗೆ ಭಾವ, ಅರಿವಿಗೆ; ಚೆನ್ನಮಲ್ಲಿಕಾರ್ಜುನನೆ ತುಂಬಿಕೊಳ್ಳುವಂತೆ ಸೂಚಿಸಿದೆ. ಈಗ ಭಾವವುಚೆನ್ನಮಲ್ಲಿಕಾರ್ಜುನ ಲಿಂಗದಲ್ಲಿ ತನ್ಮಯವಾಗಿದೆ. ಅರಿವು ಚೆನ್ನಮಲ್ಲಿಕಾ ರ್ಜುನನ ಬಯಲನ್ನೆ ತುಂಬಿಕೊಂಡಿದೆ. ಕ್ರೀಗಳೆಲ್ಲವ ನಿಲಿಸಿ, ಕ್ರಿಯಾತೀತವಾಗಿ,

ನಿ: ಪತಿ ಲಿಂಗೈಕ್ಯವ ಮಾಡಿದೆ. ಇನ್ನು ಕ್ರಿಯೆಗಳು ದೇಹಕಾರಣವಾಗಿ ದೇಹಾಧೀನವಾಗಿ ದೇಹದ ಬೇಕುಬೇಡಗಳನ್ನು ಪೂರಯಿಸುತ್ತಿದ್ದವು. ಅದರಲ್ಲೂ ಇಂದ್ರಿಯದ ಕ್ರಿಯೆಗಳು ವಿಷಯಾಭಿಮುಖವಾಗಿಯೇ ಇದ್ದವು, ಇವುಗಳಿಗೆ ಈಗ ಕ್ರಿಯಾತೀತವಾಗುವಂತೆ ಮಾಡಿದೆ. ದೇಹ, ಇಂದ್ರಿಯದ ಬೇಡಿಕೆಗಳು ಅರಿವಿನ ಇಚ್ಛೆಯನ್ನು ನೆರವೇ ರಿಸುವಂತೆ ಕ್ರಿಯೆಗಳಿಗೆ ಲಿಂಗಕೀಗಳಲ್ಲಿ ಪ್ರೀತಿ ಉಂಟಾಗುವಂತೆ ಮಾಡಿದೆ. ಈಗ ಕ್ರೀಗಳು ಲಿಂಗಾಧೀನವಾಗಿವೆ. ನಾನೆಂಬುದ ನಿಲಿಸಿ, ನೀನೆಂಬುದ ಕೆಡಿಸಿ ಉಭಯ ಲಿಂಗೈಕ್ಯವ ಮಾಡಿದೆ. ನಾನು ಇದು ಉಪದ್ರವಕಾರಿ. ಇದನ್ನು ನಿಲಿಸಿದೆ. ನೀನು ಎಂಬುದನ್ನು ಕೆಡಿಸಿದೆ. ಈದ್ವಂದ್ವ ಇರುವವರೆಗೆ ನನಗೆ ಬಿಡುಗಡೆ, ನಿಲು ಗಡೆ ಇಲ್ಲ. ಅದಕ್ಕೆ ನಾನು, ನೀನು ನಿಲಿಸಿದೆ. ಚೆನ್ನಮಲ್ಲಿಕಾರ್ಜುನಯ್ಯನೊಳಗೆ ನಾನ ಳಿದೆನಾಗಿ ಲಿಂಗವೆಂಬ ಘನವು ಎನ್ನಲ್ಲಿ ಅಳಿಯಿತ್ತು. ನಾನು ಬಂದುದು ಚೆನ್ನಮಲ್ಲಿಕಾ ರ್ಜುನನಿಂದ. ನನಗೆ ಕಾರಣ ಅವನು. ಅವನಲ್ಲಿ ನಾನು ಈಗ ನಿಲಗಡೆ ಹೊಂದಿದೆ. ನಾನು ಅವನಲ್ಲಿ ಅಳಿಯಲಾಗಿ ಅವನು ನನ್ನಲ್ಲಿ ನಿರ್ವಯಲಾದ. ಇದು ಕಿರಿದು, ಹಿರಿದು ಒಂದಾದ ಇರವು. ಅಂಗ-ಲಿಂಗ ಒಂದಾದ ಘನ. ಅಕ್ಕಮಹಾದೇವಿಯವರು ಏನನ್ನು ಭೌತಿಕವಾಗಿ ಪಡೆಯಬೇಕೆಂದು ಬಂದರೊ ಈಗ ಅದನ್ನು ಅನುಭಾವದ ಅರಿವಿನಲ್ಲಿ ಸಾಧ್ಯಮಾಡಿಕೊಂಡಿದ್ದಾರೆ. ಉರಿ ಕರ್ಪೂರದಲ್ಲಿ ಅಡಗಿದರೆ ಕರ್ಪೂರ ಉರಿಯಲ್ಲಿ ಅಡಗಿತು.

3) ಅಂಗವ ಲಿಂಗಮುಖದಲ್ಲಿ ಅರ್ಪಿಸಿ ಅಂಗ ಅನಂಗವಾಯಿತ್ತು,

ಮನವ ಅರಿವಿಂಗರ್ಪಿಸಿ ಮನ ಲಯವಾಯಿತ್ತು.

ಭಾವವ ತೃಪ್ತಿಗರ್ಪಿಸಿ ಭಾವ ಬಯಲಾಯಿತ್ತು. ಅಂಗಮನಭಾವವಳಿದ ಕಾರಣ ಕಾಯ ಅಕಾಯವಾಯಿತ್ತು,

ಎನ್ನ ಕಾಯದ ಸುಖಭೋಗವ ಲಿಂಗ ಭೋಗಿಸುವನಾಗಿ ಶರಣಸತಿ ಲಿಂಗಪತಿಯಾದನು. ಇದು ಕಾರಣ ಚೆನ್ನಮಲ್ಲಿಕಾರ್ಜುನನೆಂಬ ಗಂಡನ ಒಳಹೊಕ್ಕು ಬೆರಸಿದನು.

ಪದಗಳ ಅರ್ಥ

ಅನಂಗ-ಅಂಗಗುಣ ನಷ್ಟ.

ಅಕಾಯ-ಕಾಯವಿಲ್ಲ.

ವಚನದ ಅರ್ಥ

ಅಂಗವ ಲಿಂಗಮುಖದಲ್ಲಿ ಅರ್ಪಿಸಿ ಅಂಗ ಅನಂಗವಾಯಿತ್ತು. ಈ ಅಂಗವು ಇಂದ್ರಿಯಾದಿಗುಣ ಪಡೆದಿದೆ. ಇಂತಹ ದೇಹವನ್ನು ಲಿಂಗಕ್ಕೆ ಅರ್ಪಿಸಿದೆ. ಇದರಿಂದ ಅಂಗಗುಣಗಳನ್ನು ಕಳೆದುಕೊಂಡೆ. ಅಂದರೆ ಭಾವ, ಇಚ್ಛೆ, ಮನಸ್ಸು ಪರ ಮಾತ್ಮನ ಕಡೆಗೆ ಮುಖಮಾಡಿತು. ವಿಷಯಾದಿಗಳಿಂದ ದೂರವಾಯಿತು. ಮನದ ಅರಿವಿಂಗರ್ಪಿಸಿ ಮನ ಲಯವಾಯಿತ್ತು. ಮನಸ್ಸು ಅರಿವು ಇಲ್ಲವಾದಾಗ ಅಜ್ಞಾನ, ಕಾರಣವಾಗಿ ವಿಷಯಮುಖದಲ್ಲಿ ಭವದತ್ತ ಹೋಗುತ್ತದೆ. ಈ ಮನಸ್ಸಿಗೆ ಅರಿವು ಕೊಟ್ಟರೆ ಅರಿವಿನ ಕಡೆಗೆ ಮನಸ್ಸು ಹೋಗುತ್ತದೆ. ಇದರಿಂದ ಮನಸ್ಸು ನಷ್ಟವಾದಂತೆಯೆ. ಅಂದರೆ ಭವ ಕಳೆದುಕೊಂಡಂತೆಯೆ. ಭಾವವತೃಪ್ತಿಗರ್ಪಿಸಿ ಭಾವ ಬಯ ಲಾಯಿತ್ತು. ಭಾವವು ಬಂದ ಹಾಗೆಯೆ ಇದ್ದರೆ ಬಯಕೆಗಳು ಬಹಳ ಇರುತ್ತವೆ. ಈ ಭಾವದಲ್ಲಿ ತೃಪ್ತಿ ನೆಲೆ ಗೊಂಡರೆ ಬಯಕೆಗಳು ನಷ್ಟವಾಗುತ್ತವೆ. ಅಂಗಮನಭಾವವಳಿದ ಕಾರಣ ಕಾಯ ಅಕಾಯವಾಯಿತ್ತು. ಅರಿವಿನ ಮುಖದಲ್ಲಿ ಹೋದಾಗ ಅಂಗ ಮನಭಾವಗಳು ಹೋದವು. ಅಂದರೆ ಕಾಯವು ಅಕಾಯಸ್ವರೂಪ ಪಡೆಯಿತ್ತು. ಅಂದರೆ ಇಲ್ಲಿ ದೇಹದಿಚ್ಛೆಹೋಯಿತು. ಅರಿವಿನ ದಾರಿಯೆ ಆಯಿತು. ಎನ್ನ ಕಾಯದ ಸುಖಭೋಗವ ಲಿಂಗಭೋಗಿಸುವನಾಗಿ ಶರಣಸತಿ ಲಿಂಗಪತಿಯಾದೆನು. ಯಾವಾಗ ಮನಸ್ಸು ಅರಿವಿನ ಕಡೆಗೆ ಹೋಯಿತು. ಅಲ್ಲಿ ನಡೆಯುವ ಕ್ರಿಯೆಗಳೆಲ್ಲ ಲಿಂಗಕ್ರಿಯೆಗಳೆ ಆದವು. ಅಲ್ಲಿ ತನಗಾಗಿ ಎಂಬುದು ಏನೂ ಇಲ್ಲ. ಆಗ ಅಂಗಮನಭಾವ ಗಳು ಸ್ವೀಕರಿಸಿದ್ದು. ಲಿಂಗದ ಸ್ವೀಕಾರವೆ ಆಗುತ್ತದೆ. ಇದರಿಂದ ಅಂಗವು ಸತಿಯಾಗುವುದು. ಅರಿವು ಪತಿಯಾಗುವುದು. ಇದುಕಾರಣ ಚೆನ್ನಮಲ್ಲಿಕಾರ್ಜುನನೆಂಬ ಗಂಡನ ಒಳಹೊಕ್ಕು ಬೆರಸಿದೆನು. ಅರಿವಿನ ಪಥದಲ್ಲಿ ನಡೆದುದು ಬಯಲನ್ನು ಬೆರೆಯಲು ದಾರಿಯಾಯಿತು.

ಈವಚನದಲ್ಲಿ ಶರಣಸತಿ ಲಿಂಗಪತಿ ಭಾವದ ವಿಚಾರಗಳು ವ್ಯಕ್ತವಾಗಿವೆ. ಅಂತರಂಗ ಬಹಿರಂಗವನ್ನು ದೈವೀಕರಣಗೊಳಿಸಿದ ಪ್ರಕ್ರಿಯೆ ಇಲ್ಲಿದೆ. ಲೌಕಿಕರು ದೇಹಭಾವದಿಂದ ವ್ಯವಹರಿಸಿದರೆ ಅನುಭಾವಿಗಳು ಪರಮತ್ಮಭಾವದಿಂದ ವ್ಯವಹ ರಿಸುತ್ತಾರೆ. ದೇಹ ಇಂದ್ರಿಯಗಳ ಮೇಲೆ ಹತೋಟಿ ಸಾಧಿಸಲು ಪ್ರಯತ್ನಿಸುತ್ತಾರೆ. ಜೀವನವನ್ನು ಗುಣಾತ್ಮಕ ದೃಷ್ಟಿಯಿಂದ ನೋಡುವ ಪ್ರಯತ್ನ ಇಲ್ಲಿದೆ. ಆಗು ವುದಿಲ್ಲ ಎಂಬುದು ಋಣಾತ್ಮಕವಾದ ಚಿಂತನೆ. ಆಗುತ್ತ ದೆ ಎಂಬುದು ಧನಾತ್ಮಕ ಚಿಂತನೆ. ನನ್ನದೇನೂ ಇಲ್ಲ ಎಂಬುದು ನಿಸ್ವಾರ್ಥವಾದ ಪರಮಾತ್ಮ ಚಿಂತನೆ.

4). ಅಂಗ ಲಿಂಗವ ವೇದಿಸಿ ಅಂಗಲಿಂಗದೊಳಗಾಯಿತ್ತು.

ಮನ ಲಿಂಗವ ವೇದಿಸಿ ಮನ ಲಿಂಗದೊಳಗಾಯಿತ್ತು.

ಭಾವ ಲಿಂಗವ ವೇದಿಸಿ ಭಾವ ಲಿಂಗದೊಳಗಾಯಿತ್ತು. ಚೆನ್ನಮಲ್ಲಿಕಾರ್ಜುನಾ ನಿಮ್ಮ ಒಲುಮೆಯ ಸಂಗದಲ್ಲಿರ್ದು ಸ್ವಯ ಲಿಂಗವಾದನು.

**ವಚನದ ಅರ್ಥ**

ಅಂಗ ಲಿಂಗವ ವೇದಿಸಿ ಅಂಗ ಲಿಂಗದೊಳಗಾಯಿತ್ತು. ಅಂಗವು ಲಿಂಗದ ಹಂಬಲದಲ್ಲಿ ಅಂಗ ಲಿಂಗದೊಳಗಾಯಿತ್ತು. ಮನ ಲಿಂಗವ ವೇದಿಸಿ ಮನ ಲಿಂಗದೊಳಗಾ ಯಿತ್ತು. ಮನಸ್ಸು ಲಿಂಗವನ್ನೆ ಧ್ಯಾನಿಸಿ ಮನಸ್ಸು ಲಿಂಗದಲ್ಲಿ ಮಗ್ನವಾಯಿತ್ತು. ಭಾವ ಲಿಂಗವ ವೇದಿಸಿ ಭಾವ ಲಿಂಗದೊಳಗಾಯಿತ್ತು. ಭಾವವು ಲಿಂಗವನ್ನು ಧ್ಯಾನಿಸಿ ಭಾವವು ಲಿಂಗದೊಳಗಾಯಿತ್ತು. ನಿಮ್ಮ ಒಲುಮೆಯ ಸಂಗದಲದಲ್ಲಿರ್ದು ಸ್ವಯ ಲಿಂಗವಾದೆನು. ಪರಮಾತ್ಮನೆ ನಿಮ್ಮ ಪ್ರೀತಿಯ ಸಂಗದಲ್ಲಿರ್ದು ನಿಮ್ಮಂತಾದೆನು. ಮಹಾದೇವಿಯಕ್ಕನವರಿಗೆ ಪರಮಾತ್ಮನನ್ನು ಬಿಟ್ಟು ಇನ್ನೊಂದು ವಿಚಾರವಿಲ್ಲ.

ಅಂಗಕ್ಕೂ ಲಿಂಗದ ಕಾತುರ. ಕೈಗಳು ಪೂಜಿಸುತ್ತ ಕಾಲುಗಳು ಸ್ಥಿರವಾಗುತ್ತ ಇಡೀ ಶರೀರವೆ ಅವನಿಗೆ ಕಾತರಿಸಿ ಅವನೊಳಗಾಗಿವೆ. ಮನವು ಲಿಂಗವನ್ನು ತಿಳಿದು ಮನಸ್ಸು ಲಿಂಗಧ್ಯಾನದಲ್ಲಿ ಲೀನವಾಗಿದೆ. ಭಾವವು ಚೆನ್ನಮಲ್ಲಿಕಾರ್ಜುನನನ್ನೆ ತುಂಬಿ ಕೊಂಡಿದೆ. ಹೀಗೆ ಸರ್ವಾಂಗದಲ್ಲೂ ಅವನನ್ನೆ ತುಂಬಿಕೊಂಡು ಪೂಜಿಸುವ, ಧ್ಯಾ ನಿಸುವ, ಕಾಣುವ ಕೇಳುವ ಎಲ್ಲವೂ ಲಿಂಗಮಯವೆ ಆಯಿತು. ಪರಮಾತ್ಮನ ಪ್ರೀತಿ ಯ ಅನುಗ್ರಹದಲ್ಲಿ ಎಲ್ಲವೂ ದೈವೀಮಯವಾಯಿತು.

5) ಅಂಗಸಂಗದಲ್ಲಿ ಲಿಂಗಸಂಗಿಯಾದೆನು. ಲಿಂಗಸಂಗದಲ್ಲಿ ಅಂಗಸಂಗಿಯಾದೆನು.

ಉಭಯ ಸಂಗವನು ಅರಿಯದೆ ಪರಿಣಾಮಿಯಾದೆನು.

ನುಡಿಯಗಡಣವ ಮರೆದು ತೆರಹಿಲ್ಲದಿರ್ದೆನು. ಎನ್ನ ದೇವ ಚೆನ್ನಮಲ್ಲಿಕಾರ್ಜುನನ ಬೆರಸಿದ ಬಳಿಕ

ಎನ್ನ ನಾನು ಏನೆಂದೂ ಅರಿಯೆನಯ್ಯ.

**ಪದಗಳ ಅರ್ಥ**

ಪರಿಣಾಮಿ-ಪರಮಸಂತೋಷಿ ಪರಮಾನಂದ ಸ್ಥಿತಿ. ಲಿಂಗಸಂಗ-ಲಿಂಗಾನುಸಂಧಾನ

**ವಚನದ ಅರ್ಥ**

ಅಂಗಸಂಗದಲ್ಲಿ ಲಿಂಗಸಂಗಿಯಾದೆನು ಲಿಂಗಸಂಗದಲ್ಲಿ ಅಂಗಸಂಗಿಯಾದೆನು.

ಅಂಗವು ವ್ಯವಹರಿಸುವ ಕ್ರಿಯೆಗಳಲ್ಲಿಲಿಂಗ

ವಿಚಾರವನ್ನೆ ತುಂಬಿದೆ. ಲಿಂಗ ಪರಮಾತ್ಮನನ್ನು ಪೂಜಿಸಿ, ಪ್ರಾರ್ಥಿಸಿ, ಭಕ್ತಿಮಾಡುವ ಕಾಲಕ್ಕೆ ನಾನು ಅಮಗಧರಿಸಿದ ಆತ್ಮಳಾಗಿ

ಲಿಂಗ ಕೃಪೆ ಪಡೆದುಕೊಳ್ಳುವ ಭಕ್ತಿ ಮಾಡಿದೆ. ಉಭಯಸಂಗವನೂ ಅರಿಯದೆ ಪರಿಣಾಮಿಯಾದೆನು. ಈ ಉಭಯಸಂಗವನ್ನು ದಾಟಿ ಪರಮಾನಂದದಲ್ಲಿದ್ದೆನು.

ನುಡಿಯ ಗಡಣ ಮರೆದು ತೆರಹಿಲ್ಲದಿರ್ದೆನು. ಮಾತಿನ ಹೂಮಾಲೆ ಕಟ್ಟುವುದು ನಿರಸನ ವಾಯಿತು. ಶಬ್ದಮುಗ್ಧಳಾಗಿರ್ದೆನು. ಮಾತಿಗೆ ಮೌನದ ತೂಕ ಬಂತು. ಎನ್ನ ದೇವ ಚೆನ್ನಮಲ್ಲಿಕಾರ್ಜುನಯ್ಯನ ಬೆರಸಿದ ಬಳಿಕ ಎನ್ನ ನಾನು ಏನೆಂದೂ ಅರಿಯೆನಯ್ಯ. ಚೆನ್ನಮಲ್ಲಿಕಾರ್ಜುನನಲ್ಲಿ ನದಿ ಕಡಲು ಸೇರಿದಂತಾಗಿ ಅಲೆ, ಹರಿದಾಟವಿಲ್ಲದೆ ಏನೊಂದು ಇಲ್ಲದೆ ಎಲ್ಲವೂ ಅಲ್ಲಿ ಸಮರಸವಾಗಿರ್ದೆ. ಇದುವರೆಗೆ ಅಕ್ಕನವರು ಅನಂತ ಹಂಬಲದಲ್ಲಿ ಹಾಡಿದರು. ಕರೆದರು. ಅತ್ತರು. ಪ್ರೀತಿಸಿದರು ಕನಸಿದರು ಕಲ್ಪಿಸಿದರು. ಈಗ ಎಲ್ಲವೂ ಕರಗಿದವು. ಅಲ್ಲಿ ಈಗ ಎಲ್ಲವೂ ನಿರ್ಲಿಪ್ತ ಬೇಕು ಗಳೂ ಇಲ್ಲ. ಬೇಡಗಳು ಇಲ್ಲ. ಎಲ್ಲವನ್ನು ಮೀರಿದ ಮೌನ. ಶಬ್ದಮುಗ್ಧ. ಈಗ ಅಕ್ಕಮಹದೇವಿಯವರು ಮೌನ ಸಮುದ್ರ.

6) ಅಂಗೈಯೊಳಗಣ ಲಿಂಗವ ಪೂಜಿಸುತ್ತ ಮಂಗಳಾರತಿಗಳನು ತೊಳಗಿ ಬೆಳಗುತ್ತಿರ್ದ ನೋಡಯ್ಯ. ಕಂಗಳ ನೋಟ, ಕರುವಿಟ್ಟ ಭಾವ, ಹಿಂಗದ ಮೋಹ ತೆರಹಿಲ್ಲದಿರ್ದ ನೋಡಯ್ಯ. ಚೆನ್ನಮಲ್ಲಿಕಾರ್ಜುನಯ್ಯ.

ಪದಗಳ ಅರ್ಥ

ಕರುವಿಟ್ಟಭಾವ-ತನ್ಮಯ ಮನಸ್ಸು

ಹಿಂಗದ ಮೋಹ- ಅವ್ಯಾಜ ಲಿಂಗಭಕ್ತಿ

, ಕಡಿಮೆಯಾಗದ ಲಿಂಗ ಭಕ್ತಿ,

ತೆರಹು-ಬಿಡುವು,

ಅಗಲು-ದೂರ,

ವಚನದ ಅರ್ಥ

ಅಂಗೈಯೊಳಗಣ ಲಿಂಗವ ಪೂಜಿಸುತ್ತ ಮಂಗಳಾರತಿಗಳನ್ನು ತೊಳಗಿ ಬೆಳಗುತಲಿರ್ದ ನೋಡಯ್ಯ. ಅಂಗೈಯಲ್ಲಿರುವ ಇಷ್ಟಲಿಂಗವನ್ನು ಪೂಜಿಸುತ್ತ, ಆರತಿ ಬೆಳಗುತ್ತಿರ್ದ ಕಂಗಳ ನೋಟ ಕರುವಿಟ್ಟ ಭಾವ ಹಿಂಗದ ಮೋಹ ತೆರಹಿಲ್ಲದಿರ್ದ ನೋಡಯ್ಯ. ಕಣ್ಣುಗಳು ನೋಡುತ್ತಿವೆ. ಭಾವ ತುಂಬುತ್ತಿದೆ. ನಿನ್ನನ್ನು ಪಡೆಯುವ ಪ್ರೀತಿ ಹೆಚ್ಚುತಿದೆ. ನಿಮ್ಮನಗಲದ ಪೂಜೆ ಅನುವಾಯಿತ್ತೆನಗೆ. ಪರಮಾತ್ಮನೆ ಯಾವಾಗಲೂ ನಿಮ್ಮನ್ನು ಪೂಜಿಸುವ ಭಾಗ್ಯ ನನಗೆ ದೊರೆತಿದೆ. ಶ್ರೀಗುರುಲಿಂಗದೇವರಿಂದ ಇಷ್ಟಲಿಂಗ ದೀಕ್ಷೆ ಪಡೆದ ನಂತರ ಸಾಧನೆಯಲ್ಲಿಪ್ರೀತಿ ಉಂಟಾಗಿ ಭಕ್ತಿ ಉತ್ಸಾಹದಿಂದ ಪೂಜೆ ನಡೆದಿದೆ. ಅಕ್ಕಮಹಾದೇವಿಯವರ ದಿನಚರಿ ತಂದೆ ತಾಯಿಗಳ ಮನೆಯಲ್ಲಿ ಏನಿತ್ತು ಎಂಬುದನ್ನು ಈವಚನ ತಿಳಿಸುತ್ತದೆ. ಮಜ್ಜನಾದಿಗಳಿಂದ

ಶುಚಿರ್ಭೂತರಾಗಿ ಪೂಜಾ ಮನೆಯಲ್ಲಿ ಇಷ್ಟಲಿಂಗಪೂಜೆಯಲ್ಲಿ ನಿರತರಾಗಿದ್ದಾರೆ. ಅಂಗೈಯಲ್ಲಿ ಇಷ್ಟಲಿಂಗವಿರಿಸಿಕೊಂಡಿದ್ದಾರೆ. ಪತ್ರೆ, ಪುಷ್ಪ ಅಷ್ಟವಿಧಾರ್ಚನೆ ಆರಂಭಿಸಿದ್ದಾರೆ. ಆರತಿ ಬೆಳಗಿದ್ದಾರೆ. ದೃಷ್ಟಿಯಿಟ್ಟು ಇಷ್ಟ ಲಿಂಗವನ್ನ ನೋಡುತ್ತಾರೆ. ಭಾವವು ಅಲ್ಲಿಯೇ ತನ್ಮಯವಾಗು ಇದೆ. ಈ ಭಕ್ತಿ ಪೂಜೆ ನೋಟಗಳನ್ನು ಹೀಗೆಯೆ ನಡೆಸುತ್ತಿರಬೇಕೆಂಬ ಹಂಬಲ ಹೆಚ್ಚು ತ್ತಿದೆ. ಪರಮಾತ್ಮನಲ್ಲಿ ಮೋಹ, ಪ್ರೀತಿಗಳು ಬೆಳೆಯುತ್ತಿವೆ. ಚೆನ್ನಮಲ್ಲಿಕಾರ್ಜುನನನ್ನು ಕಾಣಬೇಕೆಂಬ ಹಂಬಲ ಅಧಿಕವಾಗುತ್ತಿದೆ.

7) ಲಿಂಗವನ್ನೆ ಲಿಂಗೈಕ್ಯವೆನ್ನೆ ಸಂಗವೆನ್ನೆ ನಿಸ್ಸಂಗವೆನ್ನೆ ಆಯಿತ್ತೆನೆ ಆಗದೆನ್ನೆ ನೀನೆನ್ನೆ ನಾನೆನ್ನೆ ಚೆನ್ನಮಲ್ಲಿಕಾರ್ಜುನನಲ್ಲಿ ಘನ ಲಿಂಗೈಕ್ಯವಾದ ಬಳಿಕ ಏನೂ ಎನ್ನೆ ಏನು ಎನ್ನೆ. .

ವಚನದ ಅರ್ಥ

ಲಿಂಗವೆನ್ನೆ ಲಿಂಗೈಕ್ಯವೆನ್ನೆ ಸಂಗವೆನ್ನೆ ನಿಸ್ಸಂಗವೆನ್ನೆ, ಆಯಿತನ್ನೆ ಆಗದೆನ್ನೆ ನೀನೆನ್ನೆ ನಾನೆನ್ನೆ ಲಿಂಗ ಪರಮಾತ್ಮ ಎಂದು ಹೇಳುವುದಿಲ್ಲ. ಲಿಂಗದಲ್ಲಿ ಒಂದಾದೆ ಎಂದು ಹೇಳುವುದಿಲ್ಲ. ಕೂಡಿದೆ ಎನ್ನುವುದಿಲ್ಲ. ನಿರ್ವಯಲಾದೆ ಸಂಗ ಮೀರಿದೆ ಎನ್ನುವುದಿಲ್ಲ. ಮುಗಿಯಿತು ಎನ್ನುವುದಿಲ್ಲ. ಆಗಲಿಲ್ಲ ಎನ್ನುವುದಿಲ್ಲ. ನೀನುಎನ್ನು ವುದಿಲ್ಲ. ನಾನು ಎನ್ನುವುದಿಲ್ಲ. ಇತ್ತು ಎನ್ನುವುದು, ಇಲ್ಲ ಎನ್ನುವುದು ಮೌನದಲ್ಲಿ ನಿರಸನವಾಗತೊಡಗಿದೆ. ಚೆನ್ನಮಲ್ಲಿಕಾರ್ಜುನನಲ್ಲಿ ಘನಲಿಂಗೈಕ್ಯವಾದ ಬಳಿಕ ಏನು ಎನ್ನೆ ಏನು ಎನ್ನೆ. ಚೆನ್ನಮಲ್ಲಿಕಾರ್ಜುನನನು ಘನ. ಅಲ್ಲಿ ಲಿಂಗ ಐಕ್ಯವಾಯಿತು. ಏನೂ ಎನ್ನುವುದು ಇಲ್ಲ. ಇರುವುದು ಇಲ್ಲ ಎನಿಸಿ ಕೊಂಡಿತು. ಕ್ರಿಯೆಯೆ ಘನವಾದ ಇರವು. ಲಿಂಗೈಕ್ಯದ ಇರವು. ಪರಮಾತ್ಮ ಎನ್ನುವುದು ಇಲ್ಲ. ಅಕ್ಕಮಹಾದೇವಿ ಎನ್ನುವುದೂ ಇಲ್ಲ. ನಾನು ಇಲ್ಲ. ನೀನು ಇಲ್ಲ. ಉಭಯ ದಾಟಿದ ಇರವು. ಘಟ ನೀರಿನ ಕೆರೆಯಲ್ಲಿ ಇತ್ತು. ಕೊಡದ ಒಳಗು ನೀರು. ಕೊಡದ ಹೊರಗೂ ನೀರು. ಹೊರಗೂ ನೀರು. ಒಳಗೂ ನೀರು. ನೀರನ್ನು ಬೇರೆ ಮಾಡಿದ್ದು ಘಟ. ಘಟದಿಂದ ಒಳಗಿನ ನೀರು ಘಟದೊರಗಿನ ನೀರು ಎಂದು ಕರೆಸಿಕೊಂಡಿತು. ಎಲ್ಲ ನೀರೆ. ನಡುವಿನ ಘಟ ಹೋಯಿತು. ಹೊರಗಿನ ನೀರು ಒಳಗಿನ ನೀರು ಬೆರೆದು ಒಂದಾದವು. ನೀರು ನೀರ ಕೂಡಿತು. ಬಯಲು ಬಯಲು ಸೇರಿತು. ಹೊರ ಆ ಆತ್ಮ ಒಳ ಈ ಆತ್ಮ ಸೇರಿದವು. ಅಲ್ಲಿ ಈಗ ಬರಿ ಆತ್ಮ ಅದು ಬ್ರಹ್ಮದ ಆತ್ಮ. ಪರದ ಆತ್ಮ.

8) ಲಿಂಗಸುಖಸಂಗದಲ್ಲಿ ಮನ ವೇದ್ಯವಾಯಿತ್ತು.

ಇನ್ನೆಲ್ಲಿ ಅಯ್ಯ ಎನಗೆ ನಿಮ್ಮಲ್ಲಿ ನಿರವಯವವು.

ಪರಮಸುಖ ಪರಿಣಾಮ ಮೇರೆದಪ್ಪಿ ನಾನು

ನಿಜವನ್ನೈದುವ ಠಾವಹೇಳಾ ಚೆನ್ನಮಲ್ಲಿಕಾರ್ಜುನ ಪ್ರಭುವೆ.

ಪದಗಳ ಅರ್ಥ

ವೇದ್ಯ-ತಿಳಿ.

ನಿರವಯ-ಬಯಲಾಗುವುದು.

ನಿಜ-ಮೋಕ್ಷ

ಠಾವು-ಸ್ಥಳ

ಪರಿಣಾಮ-ಐಕ್ಯ.

ಸಂಗ-ಪೂಜಾನಂದ

**ವಚನದ ಅರ್ಥ**

ಲಿಂಗ ಸುಖ ಸಂಗದಲ್ಲಿ ಮನ ವೇದ್ಯವಾಯಿತ್ತು. ಇನ್ನೆಲ್ಲಿ ಅಯ್ಯಾ ಎನಗೆ ನಿರವ ಯವವು? ಲಿಂಗಪೂಜಾನಂದದಲ್ಲಿ ಮನಸ್ಸು ಶಾಂತಿ ಪಡೆಯಿತು. ನಾನುಇನ್ನು ಎಲ್ಲಿ ಬಯಲಾಗಲಿ? ದೇಹದ ಹಂಗನ್ನು ಎಲ್ಲಿ ಬಿಡುಗಡೆಗೊಳಿಸಲಿ? ಪರಮಸುಖ ಪರಿ ಣಾಮ ಮನ ಮೇರೆದಪ್ಪಿ ನಾನು ನಿಜವನೈದುವ ಠಾವ ಹೇಳಾ ಚೆನ್ನಮಲ್ಲಿಕಾರ್ಜುನಾ. ನಾನು ಅತಿಶಯವಾದ ಪರಮಾನಂದ ಪ್ರಾಪ್ತಿ ಮಾಡಿಕೊಂಡು ಪರಿಣಾಮಿಸುವುದು ಎಲ್ಲಿ? ಮನಸ್ಸು ಪರಮಸುಖವನ್ನು ಹೊಂದಿ ಮುಕ್ತಾತ್ಮನಾಗುವ ಸ್ಥಳವನ್ನು ತಿಳಿಸಿ ಗುರುವೆ. ಎಲ್ಲೆ ಮೀರಿದ ನಿಜಾನಂದವನ್ನು ನಾನು ಎಲ್ಲಿ ಪಡೆಯುವೆನು. ನಾನು ಎಲ್ಲಿ ಬಯಲಾಗಲಿ? ಅಕ್ಕಮಹಾದೇವಿಯವರು ನೇರವಾಗಿ ತಮ್ಮ ನಿರ್ವಾಣಕ್ಕೆ ಮಾರ್ಗದರ್ಶನ ಕೇಳಿದ್ದಾರೆ. ಇದುವರೆಗೆ ನಡೆಸಿದ ಅನುಭಾವ ಶರಣರ ಸಂಗ ತಪ ಸ್ಸು ಧರ್ಮೋಪದೇಶ ಎಲ್ಲವು ಅಕ್ಕಮಹಾದೇವಿಯವರಲ್ಲಿ ಧನ್ಯತಾಭಾವವನ್ನು ತಂದುಕೊಟ್ಟವು. ದೇಹವಿಡಿದು ಏನು ಸಾಧಿಸಬೇಕಿತ್ತೋ ಅದನ್ನು ಸಾಧಿಸಿದ್ದಾಯಿತು. ಇನ್ನು ದೇಹವಿಡಿದು ಬದುಕುವುದು ತೊಡಕಿನದು ಎನಿಸಿರಬೇಕು. ಈ ದೇಹವನ್ನು ಇನ್ನು ವಿಸರ್ಜಿಸ ಬೇಕೆಂದು ಅವರಿಗೆ ಭಾವನೆಯಾಯಿತು. ಕೂಡಲೆ ಪ್ರಭುದೇವ ರನ್ನು ಈ ವಿಚಾರದಲ್ಲಿ ಮಾರ್ಗದರ್ಶನ ಮಾಡುವಂತೆ ಕೇಳಿದ್ದಾರೆ. ಮನುಷ್ಯನಿಗೆ ಎಲ್ಲಿ ಮಾಯೆ ಹಿಡಿಯುತ್ತದೆ ಅಲ್ಲಿಯವರೆಗೆ ಮನುಷ್ಯ ದೇಹವಿಡಿದು ಬರಲು ಇರಲು ಇಷ್ಟಪಡುತ್ತಾನೆ. ಮಾಯೆ ಹೋಯಿತು ಮನುಷ್ಯ ಈಜಗತ್ತು ಸಾಕು ಎಂದು ಬಿಡುತ್ತಾನೆ. ಒಂದು ಒಳ್ಳೆಯ ಕಾರ್ ಮಾಡಬೇಕಾದರೂ ಮನುಷ್ಯ ಒಂದಿಷ್ಟಾದರೂ ಮಾಯೆಗೆ ಒಳಗಾಗುತ್ತಾನೆ. ಇದೆಲ್ಲ ನಾನು ಮಾಡುತ್ತೇನೆ. ನನ್ನಿಂದ ಆಯಿತು ಈ ಭಾವವನ್ನು ಕೂಡ ಮಾಯೆ ಯೆಂದು ಹೇಳುವುದಾದರೆ ಇಂತಹ ಮಾಯೆಯನ್ನು ಗೆಲ್ಲುವುದು ತುಂಬ ಕಠಿನವೇ ಸರಿ. ಅಕ್ಕಮಹಾದೇವಿಯಂತಹ ಪರಿಪೂರ್ಣ ಚೇತ ನಗಳು ಚಿಕ್ಕ ವಯಸ್ಸಿನಲ್ಲಿ ಪರಿಪೂರ್ಣತೆ ಸಾಧಿಸಿಬಿಡುತ್ತರೆ. ಇಂತಹ ಚೇತನಗಳು ತಾವೆಲ್ಲಿರುತ್ತವೆ ಅಲ್ಲಿಂದಲೆ ಜಗತ್ತನ್ನು ಇಲ್ಲಿನ ಬದ್ಧಜೀವಿಗಳನ್ನು ಬುದ್ಧಜೀವಿಗಳನ್ನಾಗಿ ಮಾಡುತ್ತ ಉದ್ಧಾರಪಥದಲ್ಲಿ ನಡೆಸುತ್ತಿರುತ್ತಾರೆ.

## 9) ಅಳಿಸಂಕುಲವೇ ಮಾಮರವೇ ಬೆಳದಿಂಗಳೇ ಕೋಗಿಲೆಯೇ ನಿಮ್ಮ ನಿಮ್ಮ ನೆಲ್ಲರನು ಒಂದು ಬೇಡುವನು, ಎನ್ನ ಒಡೆಯ ಚೆನ್ನಮಲ್ಲಿಕಾರ್ಜುನ ದೇವರ ಕಂಡರೆ ಕರೆದು ತೋರಿರೇ.

**ಪದಗಳ ಅರ್ಥ**

ಅಳಿಸಂಕುಲ-ದುಂಬಿಗಳ ಸಮೂಹ.

ವಚನದ ಅರ್ಥ

ಅಳಿಸಂಕುಲವೇ ಮಾಮರನೇ ಬೆಳದಿಂಗಳೇ, ಕೋಗಿಲೆಯೇ. ಏ ದುಂಬಿಗಳ ಸಮೂಹವೇ, ಮಾವಿನ ಮರಗಳೇ, ಹಾಲುಬೆಳಕು ಚೆಲ್ಲುವ ಬೆಳದಿಂಗಳೇ, ಕುಹೂ ಕುಹೂ ಕೂಗುವ ಕೋಗಿಲೆಯೇ. ನಿಮ್ಮ ನಿಮ್ಮ ನೆಲ್ಲರನು ಒಂದು ಬೇಡುವೆನು. ನಿಮ್ಮೆಲ್ಲರಲ್ಲಿ ಒಂದು ವಿಚಾರ ಪ್ರಾರ್ಥಿಸುತ್ತಿದ್ದೇನೆ. ಎನ್ನ ಒಡೆಯ ಚೆನ್ನಮಲ್ಲಿಕಾರ್ಜುನ ಎಲ್ಲಿದ್ದಾನೆಂದು ಕರೆದು ತೋರಿರೇ ಕರೆದು ತೋರಿರೇ. ಎನ್ನ ಪ್ರೀತಿಯ ನಲ್ಲನಾದ ಚೆನ್ನಮಲ್ಲಿಕಾರ್ಜುನ ದೇವರು ಎಲ್ಲಿ ಇರುವರೆಂಬುದನ್ನು ನಿಮಗೆ ಗೊತ್ತಿದ್ದರೆ ನನಗೆ ಕೂಡಲೆ ಕರೆದು ತಿಳಿಸಿರಿ. ಪರಮಾತ್ಮನ ವಿರಹ, ಹಂಬಲ ಎಷ್ಟು ದೂರ ಹೋಗುತ್ತ

ಎನ್ನುವುದಕ್ಕೆ ಈ ವಚನ ಸಾಕ್ಷಿಯಾಗಿದೆ. ಅಕ್ಕಮಹಾದೇವಿಯವರ ಒಂದೊಂದು ವಚನವೂ ಒಂದೊಂದು ಭಾವಗೀತ ಮಕ್ಕಳ ಆನಂದದಲ್ಲಿ ಭಾಗಿಯಾಗದೆಂದು ಹುಚ್ಚರ ಮಾತುಗಳಲ್ಲಿ ನಗು ವಿಷಾದ ವ್ಯಕ್ತವಾಗಬಹುದು. ಇಲ್ಲಿ ಅಕ್ಕನವರು ಮಗುವೂ ಅಲ್ಲ. ಹುಚ್ಚರೂ ಅಲ್ಲ. ಅವರ ಮಾತುಗಳು ವ್ಯಾಕರಣ ಬದ್ಧವಾಗಿದ್ದು ವಾಕ್ಯರಚನೆಯೂ ಸುಂದರ ಮನೋಜ್ಞವಾಗಿದೆ. ವಚನಗಳು ಒಂದೊಂದು ಭಾವದ ಘಟಕವಾಗಿದೆ. ಹಾಲಿನಕೆನೆಯಂತೆ ಹೃದ್ಯಭಾವನೆಗಳು ಮಡುಗಟ್ಟಿವೆ ಕೆನೆಗಟ್ಟಿವೆ. ಈ ವಚನಗಳಲ್ಲಿ ಸೊಗಸಿದೆ. ಹೊಸತನವಿದೆ. ಅಪೂರ್ವವಾದ ನೋಟವಿದೆ. ಪ್ರಕೃ ತಿಯೊಂದಿಗೆ ತಾದಾತ್ಮ್ಯವಿದೆ. ದುಂಬಿ, ಬೆಳದಿಂಗಳು, ಹಕ್ಕಿ ಮರ ಇವುಗಳನ್ನೆಲ್ಲ ಮಾತನಾಡಿಸುವುದೆ ಒಂದು ಅಪೂರ್ವಕ್ರಿಯೆ. ಇಲ್ಲಿನ ಪದ, ವಾಕ್ಯದ ಜೋಡಣೆ ಯಲ್ಲಿ ಒಂದು ಲಯವಿದೆ, ನಾದವಿದೆ. ಇಲ್ಲಿ ಒಂದು ಶಕ್ತಿಯಿದೆ. ಇವು ಕೇವಲ ಪದ ಗಳ ಜೋಡಣೆಯಲ್ಲ. ಇವೆಲ್ಲವುಗಳನ್ನು ಜೋಡಿಸಿ ಮಾತನಾಡಿಸಿದಾಗ ಒಂದು ಹೊಸ ಧ್ವನಿ, ಅರ್ಥಪರಂಪರೆಯೇ ಹೊರಡುತ್ತದೆ. ಒಂದೊಂದು ಪದವನ್ನು ಓದಿ ಕೊಂಡು ಹೋದರೆ ಪ್ರತಿ ಶಬ್ದದ ಕೊನೆಯಲ್ಲಿ ಒತ್ತಿದೆ. ಪರಿಣಾಮದ ತೀವ್ರತೆಯಿದೆ. ಅವುಗಳನ್ನು ಹಾಡುವ ತೀವ್ರತೆ ತಾನಾಗಿ ಉಂಟಾಗುತ್ತದೆ. ಈವಚನ ಓದುತ್ತಿದ್ದಂತೆ, ಹಾಡುತ್ತಿದ್ದಂತೆ, ಕೇಳುತ್ತಿದ್ದಂತೆ ಮನದಲ್ಲಿ ಕರುಣೆ, ಹಳಹಳ ದಿಂದ ಹೃದಯ ಆದ್ರ್ರ ವಾಗುತ್ತದೆ. ಇಲ್ಲಿ ಪ್ರತಿ ಶಬ್ದದ ಪ್ರಯೋಗದಲ್ಲಿ ಅಕ್ಕಮಹಾದೇವಿಯವರ ಭಾವತೀ ವ್ರತೆಯ ಸ್ಪರ್ಶವಿದೆ. ಆ ಸ್ಪರ್ಶದಿಂದ ಒಮ್ಮೆಲೆ ವಿಸ್ಮಯ, ಬೆರಗು ಕದ ತಟ್ಟುತ್ತವೆ. ಅಕ್ಕ ನವರು ಪರಮಾತ್ಮನಿಗಾಗಿ ನಡೆಸಿರುವ ಹುಡುಕಾಟ ಎಂತಹವರನ್ನೂ ಮನ ಕರಗಿ ಸುತ್ತದೆ. ಅಕ್ಕನವರಿಗೆ ತುರ್ತಾಗಿ ಪರಮಾತ್ಮ ಬೇಕು ಎಂಬುದನ್ನು ಪ್ರತಿ ಪದಗಳು ಅಭಿನಯಿಸುತ್ತವೆ. ನಮಗೂ ಅವರ ಹುಡುಕಾಟದಲ್ಲಿ ಪಾಲುಗೊಂಡು ಅವರ ಕಣ್ಣೀರು ಹಂಬಲಗಳನ್ನು ತುಂಬಿಕೊಡಬೇಕೆಂದು ಭಾವನೆಯಾಗುತ್ತದೆ. ಅವರ ಬೇಡಿಕೆಗಳು ನಮ್ಮ ಕಿವಿ, ಮನ ತುಂಬಿ ಒದ್ದೆ ಮಾಡುತ್ತವೆ. ಪರಮಾತ್ಮನ ಹಂಬಲ, ವೈರಾಗ್ಯ ಎಷ್ಟು ಎತ್ತರ ಏರಬಲ್ಲವು ಎಂಬುದಕ್ಕೆ ಈ ವಚನ ಉದಾಹರಣೆಯಾಗಿದೆ. ಸಾಹಿತ್ಯ, ಸಂಗೀತ, ಲಯ ಇಲ್ಲಿ ಮೇಳವಿಸಿ ಸಾಮರಸ್ಯದಿಂದ ಗಾನ ಎತ್ತರ, ಆಳ, ವಿ ಸ್ತಾರಕ್ಕೆ ವಚನ ವ್ಯಾಪಿಸಿಕೊಳ್ಳುತ್ತದೆ. ಹಾಡಿದಷ್ಟೂ ಓದಿದಷ್ಟೂ ವಚನ ಶಕ್ತಿಗೊ ಳ್ಳುತ್ತ ಸಮುದ್ರದಂತೆ ವ್ಯಾಪಿಸಿಕೊಳ್ಳುತ್ತದೆ. ಭಾಷೆಯನ್ನು ಇಷ್ಟೊಂದು ಶಕ್ತಿಯುತ ವಾಗಿ ಬಳಸಬಹುದೆ.? ಭಾಷೆಗೆ ಈ ಶಕ್ತಿಯಿದೆಯೆ ಎಂದು ಬೆರಗಾಗುತ್ತದೆ. ಪರ ಮಾತ್ಮನಿಗಾಗಿ ಎಷ್ಟೊಂದು ಹುಡುಕಾಟ ನಡೆಸಿದ್ದಾರಲ್ಲ ಆಶ್ಚರ್ಯವೂ ಬೆರಗೂ ಉಂಟಾಗುತ್ತದೆ.

ಕನ್ನಡ ನವೋದಯ ಸಾಹಿತ್ಯ ಮತ್ತು ಜಗತ್ತಿನ ಭಾವಗೀತ ಸಾಹಿತ್ಯ ಪ್ರಕಾ ರಗಳು ವರ್ಡ್ಸ್ವರ್ತ್, ಕೀಟ್ಸ್ ಷೆಲ್ಲಿ ಕೋಲ್‌ರಿಜ್ ಇತ್ಯಾದಿ ಕವಿಗಳಿಂದ ಪ್ರೇರಣೆ, ಪ್ರಭಾವ ಪಡೆಯಿತೆಂದು ಜಗತ್ತಿನ ಸಾಹಿತ್ಯ ವಿಮರ್ಶಕರು ಬರೆಯುತ್ತಾರೆ. ಭಾವ ಗೀತ, ಪ್ರಕೃತಿಗೀತಗಳಿಗೆ ಪ್ರೇರಣೆ ಪ್ರಭಾವ ಪಡೆಯಲು ಇಷ್ಟು ದೂರ ಹೋಗಬೇ ಕಿತ್ತೆ ಎಂದು ಆಶ್ಚರ್ಯವೂ ಮರುಕವೂ ಆಗುತ್ತದೆ. ವಿದ್ವತ್ತು ಪ್ರತಿಭಾ ದಾರಿದ್ರ್ಯ, ಇದ್ದವರು ಮಾತ್ರ ಅಷ್ಟು ದೂರ ಹೋಗಲು ಸಾಧ್ಯ ಅಕ್ಕಮಹಾದೇವಿಯಯವರ ಬಹು ಪಾಲು ವಚನಗಳು ಭಾವಗೀತೆಗಳು, ಪ್ರಕೃತಿಗೀತಗಳ ಆಗಿವೆ. ನಮ್ಮ ಕವಿ ಪಂಪನಲ್ಲಿ ಹರಿಹರನಲ್ಲಿ ಚಿಕುಪಾಧ್ಯಾಯನಲ್ಲಿ ರಾಘವಾಂಕನಲ್ಲಿ ನಮ್ಮ ಅನೇಕ ಕನ್ನಡ ಕವಿಗಳಲ್ಲಿ ಈಪ್ರಕೃತಿಗೀತೆಗಳು ತುಂಬಿಕೊಂಡಿವೆ. ಓದು ವಿದ್ವತ್ತಿನ ಬಾರಿದೆ ವಿದ್ಯ ವರು ಮಾತ್ರ ಪಶ್ಚಿಮದ ಕಡೆಗೆ ಮುಖಮಾಡಿ ನಿಲ್ಲಬೇಕು ಅಷ್ಟೆ, ವಚನ ಸಾಹಿತ್ಯ ದಲ್ಲಿ ಭಾವಗೀತಗಳು ಎಷ್ಟುಬೇಕು? ಎಷ್ಟು ವೈವಿಧ್ಯಬೇಕು? ದಂಡಿಯಾಗಿ ಭಾವ ಗೀತಗಳಿವೆ. ಹೊಸತು ಹೊಸತು ತಾಜಾ ಅನುಭವ ಅನುಭಾವ ಮನ ಹೃದಯ ತುಂಬುತ್ತವೆ. ಪಶ್ಚಿಮದ ಸಾಹಿತ್ಯ ಓದಲೇ ಬಾರದೆಂದು ನಮ್ಮ ಅಭಿಪ್ರಾಯವಲ್ಲ ಪಶ್ಚಿಮ ಎಂದರೆ ಗ್ರೇಟ್ ಎನ್ನುವ ಹುಂಬತನವೂ ಪೆದ್ದುತನವೂ ಹೋಗಬೇಕು. ವರ್ಡ್‌ವರ್ತ್ ಮರಿ ಮೊಮ್ಮಗಳು ತಮ್ಮ ಪತಿಯೊಂದಿಗೆ ನಮ್ಮ (ಡಾ||ವಿಜಯಕುಮಾರ ಮಹಾನುಭಾವಿಗಳು ವಿಜಯಪುರ) ಮಠಕ್ಕೆ ಚಡ್ಡಿ ಹಾಕಿ ಕೊಂಡು ಬಂದಿದ್ದರು. ಸಿಹಿ, ಚಪಾತಿ, ಹಣ್ಣುಮತ್ತು ಕೊನೆಗೆ ನಮ್ಮ ಪ್ರಾರ್ಥನೆ. ವಚನಗಾಯನ ಕೇಳಿ ಬಹಳ ಸಂತೋಷಿಸಿದರು. ನಾನು ವರ್ಡ್ಸ್ ವರ್ತ್ ಮರಿಮೊಮ್ಮಗಳು ಎಂದು ಹೇಳಿದರು. ನಮಗೂ ಆ ಕವಿಯ ವಂಶದವರಿಗೆ ಅತಿಥ್ಯ ನೀಡಿದ ಸಂತೋಷವಾಯಿತು. ಆಗ ಅಕ್ಕಮಹಾದೇವಿಯವರ ಪ್ರಕೃತಿಗೀತೆಗಳ ಬಗೆಗೆ ಹೇಳಿದೆ. ಅಕೆ ಕವಿಯಲ್ಲದಿದ್ದರೂಸಾಹಿತ್ಯಪ್ರೇಮಿ. ಅನುಭಾವ ಪ್ರಕೃತಿಪೀತಿ ನಮ್ಮನ್ನು ಹತ್ತಿರ ತಂದಿತ್ತು.

ಘಟ್ಟದ, ಬೆಟ್ಟದೆಡೆಯೊಳು ಹರಿವ ನದಿ ತೀರದೊಳು ಕುಳ್ಳಿರ್ದ ಆರಡ ಬಲನಿಲ್ಲದೆ ಕಟ್ಟೇಕಾಂತದಿ ಪೂಜಿಸುವ ಸುಖ ಮಂದಾದಪುದೋ? ಎನ್ನುವ ಭಕ್ತಿ ಭಂಡಾರಿ ಪ್ರಧಾನ ಮಂತ್ರಿ ಕೇಶಿರಾಜರ ಕಂದಪದ್ಯಗಳಲ್ಲಿ, ಆರಂಕುಶಮಿಟ್ಟೊಡಂ ನೆನೆವುದೆನ್ನ ಮನಂ ಮನವಾಸಿ ದೇಶಮಂ ಎನ್ನುವಕವಿ ಪಂಪನ ಪೆಂಪಿನ ವಾಣಿ ಯಲ್ಲಿ ಎಷ್ಟು ಭಾವಗೀತಗಳು ಪ್ರಕೃತಿ ಗೀತಗಳು ಬೇಕು. ಅಕ್ಕಮಹಾದೇವಿಯರ ವಚನಗಳ ಭಾವಗೀತದ ಚೆಲ್ವು ಸೊಗಸು ಧ್ವನಿ, ಕಾವ್ಯದ ಚಿತ್ರಣ ಉಪಮಿಸಲಾರದ್ದು. ಆ ಸೊಗಸೆ ಬೇರೆ. ಅಕ್ಕ ಹಾಡಿದ್ದೆಲ್ಲವೂ ಕಾವ್ಯ. ನುಡಿಸಿದ್ದಲ್ಲವೂ ಭಾವ ಗೀತ: ಅವರ ವಚನಗಳ ಭಕ್ತಿಕಾವ್ಯ ಸಮುದ್ರವು ಉಕ್ಕೇರಿ ತರಂಗತರಂಗವಾಗಿ ಅಲೆ ಅಲೆಯಾಗಿ ನಮ್ಮ ಮನಸ್ಸಿನ ದಡಕ್ಕೆ ಶಾಂತಿ ಆನಂದಾತಿಶಯಗಳನ್ನು ತಂದು ಮುಚ್ಚಿ ಸುತ್ತದೆ. ಅಕ್ಕಮಹಾದೇವಿಯವರು ಪರಮಾತ್ಮನ ಉತ್ಕಟಾವಸ್ಥೆಯಲ್ಲಿ ಭಾವಿಸಿ ದ್ದೆಲ್ಲವೂ ಭಾವಗೀತದ ಹೊಳೆಯಾಗಿ ತುಂಬಿಹರಿಯುತ್ತದೆ. ಸಮಾಜದ ಇತರ ಎಲ್ಲ ಒತ್ತಡಗಳಿಂದ ಮುಕ್ತವಾಗಿ ದೂರನಿಂತು ಅವರು ಹಾಡಿದ ನುಡಿದ ಮಾತುಗಳ ಪರಮಾತ್ಮನ ಒಲವೆ ಕಾವ್ಯಗಂಗೆಯಾಗಿ ಹರಿಯುತ್ತದೆ. ಅವರ ವಚನ ಓದುತ್ತಿದ್ದಂತೆ ಪ್ರಕೃತಿ, ಕಾಡು, ಹೊಳೆ, ಬೆಟ್ಟ ಕಣ್ಣೆದುರು ನಿಂತು ಹೊಳೆಯಲ್ಲಿ ನೀರು ಕಲಕಲ ಜುಳು ಜುಳು ಹರಿದ ನಾದ ನಿನಾದ ಕಿವಿಯನ್ನು ಸೋಂಕುತ್ತವೆ. ಹಾಡುವ ತುಂಬಿಯ- ಗಾನ, ಕೂಗುವ ಕೋಗಿಲೆಯ ಇನಿದನಿ, ಪ್ರಕೃತಿಯ ಪ್ರಶಾಂತತೆ ಕಣ್ ಮನ ತುಂಬು- ಇವೆ. ಈ ವಚನದಲ್ಲಿ ಬೀಸುವ ತಂಗಾಳಿಯ ಮನೋಹರತೆ ಇದೆ. ಹರಿಯುವ ನೀರಿನ ಕಲರವ ಇದೆ. ತುಂಬಿಯ ಗಾನದ ಗುಂಜಾರವ ಇದೆ. ಪ್ರಕೃತಿಯ ಮನೋಹರುವಯೊಂದಿಗೆ ಎದೆ ನಡುಗಿಸುವ ದಿವ್ಯ ಮೌನವೂ ಇದೆ. ಕೊಳದ ತಾವರೆ ಎಡೆಯಿಂದ ಮಧುರ ಕಂಪಿನ ಮಲ್ಲಿಗೆ ಎಡೆಯಿಂದ ಬೀಸಿ ತಂದ ಹೂ ಪರಿಮಳದ ಸೊಗಸಿದೆ. 'ಅವರ ವಚನಗಳಲ್ಲಿ ಭಕ್ತಿ ಪರಿಮಳದ ಕಂಪಿದೆ. ವಸಂತಕಾಲದ ಕೋಗಿಲೆಯ ಗಾನ ವಿದೆ, ನಾದವಿದೆ. ಮಾಧುರವಿದೆ. ಸೊಗಸಿದೆ. ಇದು ಅಕ್ಕನವರದೆ ಎನ್ನುವ ಭಕ್ತಿ ಇದೆ. ಜ್ಞಾನವಿದೆ. ವೈರಾಗ್ಯವಿದೆ. ಲೋಕದ ಹಂಬಲಗಳನ್ನೆಲ್ಲ ಸುಟ್ಟು ಭಸ್ಮ ಮಾಡಿ ಮೈತುಂಬ ಭಸ್ಮ ಧರಿಸಿದ ಪಾವಿತ್ರ್ಯತೆ, ಶುಭ್ರತೆ, ಮಡಿ ಸಾನ್ನಿಧ್ಯ ವಚನದಲ್ಲಿ ಪೀಠ ಹಾಕಿ ಮಂಡಿತವಾಗಿದೆ. ಇಲ್ಲಿ ಉಕ್ಕೇರುವ ಸಮುದ್ರದ ಚಿರಂತನ ಭಾವದ ಅಲೆಗ ಇವೆ. ಹಾಗೆಯೆ ದಿವ್ಯಮೌನದ ಪ್ರಶಾಂತ ಸರೋವರವೂ ಇಲ್ಲಿದೆ.

ಸ್ವಾರ್ಥ, ಲೋಭ, ಷಡ್ರಿಪುಗಳಿಂದ ಎಳ್ಳಷ್ಟೂ ಮುಕ್ಕಾಗದ ಅಕ್ಕನವರ ವ್ಯಕ್ತಿ ತ್ವದಲ್ಲಿ ಗಾಂಭೀರವಿದೆ. ತೇಜಸ್ಸಿದೆ. ಅವರ ವಚನದ ಒಂದೊಂದು ಸಾಲೂ, ಪ್ರತಿ ಶಬ್ದವೂ ಅಕ್ಕನವರ ಆತ್ಮಕಥೆಯನ್ನು ಬರೆದಿಟ್ಟಿವೆ. ದಿಟ್ಟವೂ ಸತ್ಯ ಪ್ರಚೋದಿತವೂ, ನಿತ್ಯ ಉಲ್ಲಾಸದಾಯಕ, ಕೇಶಪರಿಹಾರಕ ಮನಸ್ಸಮಾಧಾನಗೊಳಿಸುವ ಶಾಂತಿ, ಆ ನಂದದ ತಂಪಿದೆ. ಆ ವಚನಗಳ ಅಂತರಾರ್ಥದಲ್ಲಿ ಅಚ್ಚಗನ್ನಡ ಚೆಲುವು ಸುಕೋ ಮಲ ಸುಂದರ ಸರಳ ಭಾಷೆಯಲ್ಲಿ ತುಂಬಿದೆ. ಗಾಯಕಿಯರು ಈ ವಚನಗಳನ್ನು ಹಾಡಿ ತಣಿಯರು, ಕೇಳುಗರು ಕೇಳಿ ದಣಿಯರು, ಹಾಡಿದಷ್ಟೂ ಆನಂದ ಕೇಳಿ ದಷ್ಟೂ ಸೊಗಸು, ಈ ವಚನಗಳ ಅಂತಸ್ಸತ್ವ ವಾಗಿದೆ. ಮೇಲಿನ ವಚನದ ಸೊಗ ಸನ್ನು ಎಷ್ಟು ವರ್ಣಿಸಿದರೂ ಸಾಲದು. ಶುದ್ಧ ಕಾವ್ಯ, ಭಾವಗೀತ ಎಂಬುದಕ್ಕೆ ಭಾಷ್ಯ ಬರೆದಂತೆ, ತಟ್ಟನೆ ವಚನ ಸೃಷ್ಟಿಸಿದವರು ಅಕ್ಕಮಹಾದೇವಿಯವರು. ಮೇಲಿನ ವಚನವನ್ನು ಗಮನಿಸಿ. ಅದು ಇರುವುದು ಮೂರೇ ಸಾಲು. ಮೂರು ಸಾಲಿನ ಈ ಪುಟ್ಟ ಪದ್ಯ ವಚನದಲ್ಲಿ ದುಂಬಿ, ಮಾವಿನ ಮರ, ಕೋಗಿಲೆಯನ್ನು ಮಾತನಾಡಿ ಸುತ್ತಿದ್ದಾರೆ.

ದುಂಬಿ, ಬೆಳುದಿಂಗಳು, ಕೋಗಿಲೆ, ಮಾವಿನಮರಕ್ಕೆ ಮಾತು ಬರುವುದೊ? ಕನ್ನಡ ಗೊತ್ತೋ? ಈ ಭಾಷೆ ಅರ್ಥವಾಗುವುದೊ? ಇಲ್ಲ. ಇದು ಅಕ್ಕ ಮಹಾದೇವಿಯವರಿಗೆ ಗೊತ್ತಿಲ್ಲವೆ? ಗೊತ್ತಿದೆ. ಹಾಗಾದರೆ ಅವರು ಹುಚ್ಚರೆ? ಹುಚ್ಚ ರಲ್ಲ. ಮತ್ತೇಕೆ ಈ ಮಾತು. ಸಂವಾದ. ಆದುದರಿಂದಲೆ ಇದು ಕಾವ್ಯ. ಶುದ್ಧ ಕಾವ್ಯ. ಭಾವಗೀತ. ಶ್ರೇಷ್ಠ ಭಾವಗೀತ. ಅವರು ದುಂಬಿ, ಬೆಳುದಿಂಗಳು, ಕೋಗಿಲೆ, ಮಾವಿ ನಮರ ವನ್ನು ಏನೆಂದು ಮಾತನಾಡಿಸಿದ್ದಾರೆ? ಎನ್ನೊಡೆಯ ಚೆನ್ನಮಲ್ಲಿಕಾರ್ಜುನ ಎಲ್ಲಿದ್ದಾನೆಂದು ಕರೆದು ತೋರಿರೆ? ಕರೆದು ತೋರಿರೇ? ನಾವು ಎಂದಾದರೂ ದುಂಬಿ, ಕೊಗಿಲೆ, ಮಾವಿನ ಮರವನ್ನು ಮಾತನಾಡಿಸಿದ್ದೇವೆಯೆ? ಇಲ್ಲ. ಯಾಕೆ? ನಮಗೆ ಗೊತ್ತು ದುಂಬಿ, ಬೆಳುದಿಂಗಳು, ಮಾವಿನ ಮರ, ಕೋಗಿಲೆ ಮಾತನಾಡು ವುದಿಲ್ಲ ಎಂದು. ಅಲ್ಲದೆ ನಮಗೆ ಇವುಗಳ ಕಡೆಗೆ ನೋಡುವ ಸಮಯವೂ ಇಲ್ಲ. ಅಗತ್ಯವೂ ಇಲ್ಲ. ನಮಗೆ ಸಂವೇದನೆಗಳಿಲ್ಲ. ಅಕ್ಕನವರಲ್ಲಿ ಸಂವೇದನೆಗಳಿವೆ. ಅವರಿಗೆ ದುಂಬಿಯನ್ನು ಮಾತನಾಡಿಸುವುದು ಗೊತ್ತಿದೆ, ಬೆಳುದಿಂಗಳು, ಮಾವಿನ ಮರ. ಕೊಗಿಲೆಯನ್ನು ಮಾತನಾಡಿಸುವುದೂ ಗೊತ್ತಿದೆ. ಆದುದರಿಂದ ಅವರು ಮಾತನಾಡಿಸುತ್ತಿದ್ದಾರೆ. ಅವರು ಮಾತು ಬರದ ದುಂಬಿ, ಬೆಳುದಿಂಗಳು, ಮಾವಿನಮರ, ಕೋಗಿಲೆಯನ್ನು ಮಾತನಾಡಿಸ ಬಲ್ಲರು. ಅವುಗಳನ್ನು ಮಾತಿಗೆಳೆಯ ಬಲ್ಲರು. ಅವರಿಗೆ ಸಂವಾದ ಗೊತ್ತಿದೆ. ನಮಗೆ ಈ ಸಂವಾದ ಗೊತ್ತಿಲ್ಲ. ಅದು ಹೇಗೆ ಅವರಿಗೆ ಸಾಧ್ಯವಾಯಿತು.? ದುಂಬಿಯ ವೈಶಿಷ್ಟ್ಯವನ್ನು ಅವರು ಗುರುತಿಸಿದ್ದಾರೆ. ಮಾವಿ ನಮರ, ಬೆಳುದಿಂಗಳು, ಕೋಗಿಲೆಯಲ್ಲಿ ಚೆನ್ನಮಲ್ಲಿಕಾರ್ಜುನನ ಸ್ಪರ್ಶವನ್ನು ಅವರು ಗುರುತಿಸಿದ್ದಾರೆ. ದುಂಬಿಗೆ ಗಾನ, ಜೇನು ತೆಗೆವ ಶಕ್ತಿ ಕೊಟ್ಟವನು ಚೆನ್ನಮಲ್ಲಿಕಾ ರ್ಜುನ. ಬೆಳುದಿಂಗಳಿಗೆ ಮಲ್ಲಿಗೆಯ ಬೆಳಕು, ಹಾಲಿನ ತುಳುಕು, ಆಹ್ಲಾದ ಬರುವಂತೆ ಮಾಡಿದವನು ಚೆನ್ನಮಲ್ಲಿಕಾರ್ಜುನ, ಮಾವಿನಮರ, ಕೋಗಿಲೆಗೆ ನಂಟು ಬೆಳೆಸಿದನು ಮಾವಿನಮರಕ್ಕೆ ಮಾಧುರ್ಯದ ಹಣ್ಣು ಕೊಟ್ಟವನು ಚೆನ್ನಮಲ್ಲಿಕಾ ರ್ಜುನ ಕುಹೂಕುಹೂ ಗಾಯನ ಕಂಠಸಿರಿಯನ್ನು ಕೊಟ್ಟವನು ಚೆನ್ನಮಲ್ಲಿಕಾ ರ್ಜುನ ಇವುಗಳಿಗೆ ವಿಶೇಷತೆಯನ್ನು ನೀಡಿರಬೇಕಾದರೆ, ಅವನ ವಿಶೇಷಾನುಗ್ರಹ ಇವು ಪಡೆದಿರಬೇಕಾದರೆ ಇವುಗಳಿಗೆ ಚೆನ್ನಮಲ್ಲಿಕಾರ್ಜುನನನ್ನು ಒಲಿಸಿಕೊಳ್ಳುವ ಕಲೆ ಗೊತ್ತಿದೆ. ಆದುದರಿಂದ ಇವುಗಳನ್ನು ಕೇಳಿದರೆ ನನ್ನ ಚೆನ್ನಮಲ್ಲಿಕಾರ್ಜುನನನ್ನು ನಾನು ಒಲಿಸಿಕೊಳ್ಳುವ ದಾರಿ ತಿಳಿದುಕೊಳ್ಳಬಹುದು ಆದುದರಿಂದ ಅವರು ದುಂಬಿ, ಮಾವಿನಮರ, ಬೆಳುದಿಂಗಳು ಕೋಗಿಲೆಯನ್ನು ಮಾತನಾಡಿಸಿದ್ದಾರೆ. ಲೋಕದ ಸಾಮಾನ್ಯ ಸಂಗತಿಗಳಲ್ಲಿ ಅಸಾಮಾನ್ಯ ಇರುವಿಕೆಯನ್ನು ಗುರುತಿಸುವ ಶಕ್ತಿ ಅಕ್ಕನವರಿಗಿದೆ. ರವಿ ಕಾಣದ್ದನ್ನು ಕವಿ ಕಂಡ ಎಂದು ಜನ ಹೇಳುವುದು ಇದಕ್ಕೆ. ನಾವು ನೀವು ಕಾಣದುದನ್ನು ಅಕ್ಕನವರು ದುಂಬಿ, ಬೆಳದಿಂಗಳು, ಕೋಗಿಲೆ, ಮಾವಿನಮರದಲ್ಲಿ ಕಂಡಿದ್ದಾರೆ. ಅದಕ್ಕೆ ಅವರು ಮಾತನಾಡಿಸುತ್ತಾರೆ.

ನಮ್ಮ ಪ್ರಕಾರ ದುಂಬಿ ಏನು? ಒಂದು ಕೀಟ. ಬೆಳುದಿಂಗಳು ಏನು? ಸೂರ್ಯನಿಂದ ಸಿಡಿದ ಭೂಮಿಯ ಒಂದು ತುಣುಕು. ಇದೇನಿದ್ದರೂ ಸೂರನಿಂದ ಕಡ ಪಡೆದು ಚೆಲ್ಲುತ್ತಿರುವ ಪ್ರತಿಫಲನದ ಬೆಳಕು. ಮಾವಿನಮರ ಒಂದು ಸಸ್ಯ. ಕೋಗಿಲೆ ಒಂದು ಸಾಮಾನ್ಯ ಪಕ್ಷಿ. ಅದು ನೋಡಲು ಚೆಂದವೂ ಇಲ್ಲ. ಅದು ಇನ್ನೊಂದು ಕಾಗೆಯೆ ಸರಿ. ಕಂಠವನ್ನು ಹುಚ್ಚರಾದ ಕವಿಗಳು ಹಾಗೆ ಹೀಗೆ ಎಂದು ಬಣ್ಣಿಸುತ್ತಾರೆ. ಇಂತಹ ಮಾತು ಬರದ ಇವುಗಳ ಜೊತೆ ಮಾತನಾಡಿದರೆ ಅವರು ಹುಚ್ಚರೇ ಸರಿ. ಹುಚ್ಚರಿಗೆ ಯಾವುದೇ ನಿಯಮ ತರ್ಕ, ವಾದಸರಣಿ ಅನ್ವಯಿಸುವು ದಿಲ್ಲ. ಮಕ್ಕಳಿಗೂ ಅಷ್ಟೆ. ಕಲ್ಲು ಗಿಡ, ಮರ, ಜಡ, ಚೇತನ ಏನನ್ನು ಬೇಕಾದರೂ ಈ ಮಕ್ಕಳುಗಳು ಮಾತನಾಡಿಸುತ್ತವೆ. ಮಕ್ಕಳಿಗೆ ಮಾತೇ ಬೇಕೆಂದೇನೂ ಇಲ್ಲ ಒಂದು ನೋಟ, ಒಂದು ಹಾವ ಭಾವ, ಒಂದು ಸಂಸ್ಪರ್ಶದಿಂದಲೆ ಮಾತನಾಡಿಸಬಲ್ಲರು. 'ಆ ಮಕ್ಕಳ ಮಾತು ಬಹಳ ಆನಂದ ಕೊಡುತ್ತದೆ. ಮಕ್ಕಳು ಸೂರ, ಚಂದ್ರ ಗಿಡಮರ. ಹಕ್ಕಿ, ಕೀಟ, ಕಲ್ಲು ಮಣ್ಣು ಏನನ್ನು ಬೇಕಾದರೂ ಮಾತನಾಡಿಸಬಲ್ಲರು. ಅಲ್ಲಿ ಅರ್ಥ ಸಂವಾದ ನಡೆಯುತ್ತದೆ. ಮಕ್ಕಳ ಭಾಷೆಗೆ ಅರ್ಥ ಇಲ್ಲದಿದ್ದರು ಅಲ್ಲಿ ಭಾವದ ಮಾಂತ್ರಿಕ ಸ್ಪರ್ಶವಿದೆ. ಇದನ್ನು ಗಮನಿಸಿದ ಯಾರೂ ಮಕ್ಕಳ ಆನಂದದಲ್ಲಿ ಭಾಗಿ ಯಾಗಬಹುದು. ಹುಚ್ಚರ ಮಾತುಗಳಲ್ಲಿ ಮಕ್ಕಳ ಆನಂದ ಸಿಗದಿರಬಹುದು.

ಉಲಿಯನ್ನು ಕೊಟ್ಟವನು ಚೆನ್ನಮಲ್ಲಿಕಾರ್ಜುನನೆ. ಎಲೆ ಚೆಲುವಿನ ಉಲಿವಗಿಳಿಗಳೆ ನೀವು ಏನಾದರೂ ನನ್ನ ಚೆನ್ನಮಲ್ಲಿಕಾರ್ಜುನನ ಇರವನ್ನು ಕಂಡಿರಾ. ಅಕ್ಕನವರ ಆ ಮಾತಿನಲ್ಲಿ ಅದೇನು ಮನೋಹರತೆ, ಅದೇನು ಸೌಕುಮಾರ? ಅದೇನು ಪ್ರೀತಿ? ಅದೇನು ತವಕ? ಗಿಳಿಗಳನ್ನು ಮಾತನಾಡಿಸಿ ಒಂದು ಕ್ಷಣ ಜಗತ್ತನ್ನೆ ಮರೆತಿದ್ದಾರೆ. ಗಿಳಿಗಳ ಜೊತೆ ಕೋಗಿಲೆಯ ಕುಹೂ ಕುಹೂ ಉಲಿ ಕಿವಿಗೆ ಬಿತ್ತು. ಅವರು ಧ್ಯಾನಕ್ಕೆ ಕುಳಿತ ಬಂಡೆಯ ಪಕ್ಕದಲ್ಲಿಯೆ ಒಂದು ಮಾವಿನ ಮರ ಮೇಲೆ ಚಿಗುರು ತುಂಬಿದ ಕೊಂಬೆಯೆಡೆ ಕುಳಿತು ಕೋಗಿಲೆ ಉಲಿಯಿತು. ಅಕ್ಕನವರ ಕೊರಳಿ ನಿಂದ ಹಾಡು ಹೊರಬಂತು. ಸರವೆತ್ತಿ ಪಾಡುವ ಕೋಗಿಲೆಗಳಿರಾ ನೀವು ಕಾಣಿರೇ ನೀವು ಕಾಣಿರೇ. ಧ್ವನಿಯೆತ್ತಿ ಕಾಡುಬಯಲನ್ನೆಲ್ಲ, ಆಕಾಶವನ್ನೆಲ್ಲ ತುಂಬುವಂತೆ ಸ್ವರ ಮೇಳ ನಡೆಸಿದ ಕೋಗಿಲೆಯನ್ನು ಎಷ್ಟು ಚೆಂದ ಮಾತನಾಡಿಸಿದ್ದಾರೆ ನೋಡಿರಿ. ಇಷ್ಟೊಂದು ಚೆಲುವಾದ ಇನಿದನಿಯನ್ನು ಹೊಂದಿರುವ ಕೋಗಿಲೆಗಳಿರಾ ನೀವಾದರೂ ನನ್ನ ಚೆನ್ನಮಲ್ಲಿಕಾರ್ಜುನನನ್ನು ಕಂಡಿರಾ? ನಿಮಗೆ ಈ ಇನಿದನಿಯನ್ನು ನೀಡಿ ದವನು ನನ್ನ ಒಡೆಯ ಚೆನ್ನಮ್ಲಾಕಾರ್ಜುನನೆ ಅಲ್ಲವೆ? ಕೇಳಿದ್ದಾರೆ. ಗಿಳಿ, ಕೋಗಿಲೆ ಜೊತೆ ಸಂವಾದ ಸಾಧ್ಯ ಎನ್ನುವ ದರ್ಶವನವಿದೆಯಲ್ಲ ಅದೆ ಕವಿಯ ಕಣ್ಣು. ಎಲ್ಲಿ ಲೋಕದವಾಸ್ತವದಲ್ಲಿ ಸಂವಾದ ಸಾಧ್ಯವಿಲ್ಲ ಅಲ್ಲಿ ಸಂವಾದ ಸಾಧ್ಯ ಎನಿಸಿದ್ದಾರೆ. ಇದು ಕಾವ್ಯ. ಶುದ್ದ ಕಾವ್ಯ. ಶ್ರೇಷ್ಠ ಭಾವಗೀತ. ಆ ಕ್ಷಣದ ತೀವ್ರತೆ ಭಾವ ಭಾಷೆ ಯಾಗಿ ಅಭಿವ್ಯಕ್ತವಾಗಿದೆ. ಭಾವಯಿತ್ರೀ ಪ್ರತಿಭೆಯು ಕಾರಯಿತ್ರಿ ಪ್ರತಿಭೆಯಲ್ಲಿ ಹೊರಬಂದು ಶುದ್ಧಭಾವಗೀತೆಯಾಯಿತು. ಗಿಳಿಗಳು ತಮ್ಮ ಉತ್ಸಾಹದಲ್ಲಿ ತಾವು ಇವೆ. ಅವುಗಳಿಗೆ ಅಕ್ಕನವರೊಂದಿಗೆ ಸಲ್ಲಾಪಿಸಲು ಸಮಯವೇಇಲ್ಲ. ಅವುಗಳಿಗೆ ಅಷ್ಟೊಂದು ಉತ್ಸಾಹ. ಅಕ್ಕ ಆಗಿಳಿಗ ಳನ್ನು ಗಮನಿಸುತ್ತಾ ಹೋದರು. ಅದರ ಹಚ್ಚಹಸಿರು ವರ್ಣ. ಅದರ ಮೂತಿಯ ಅಚ್ಚ ಕೆಂಪು, ಅದರ ಉಲಿ, ಅದರ ಹಾರಾಟ, ಅದು ಪಲವನು ಗಿಡದಲ್ಲಿ ರೆಂಬೆ ಕೊಂಬೆಯಲ್ಲಿದ್ದಾಗಲೆ ಅದರ ಸಮೀಪ ಕುಳಿತು ಗಿಲ್ಲುತ್ತ ಮೆಲ್ಲುವ ಪರಿ. ಹಾಗೆ ಮೆಲ್ಲುವಾಗ ತಿನ್ನುವ ಸಡಗರದ ಉದ್ಗಾರ. ಪೂತ್ಕಾರ ಇವುಗಳೆಲ್ಲ ಅಕ್ಕನವರಿಗೆ ಹೊಸ ಜಗತ್ತನ್ನೆ ತೆರೆದು ತೋರಿಸಿದವು. ಹೀಗೆ ಗಮನಿಸುತ್ತಿದ್ದಂತೆ ಒಂದೆ ಸಮನೆ ಕೂ ಕೂ ಕೂ ಕೂಗತೊಡಗಿದ ಕೋಗಿಲೆಯ ಕಡೆಗೆ ಅಕ್ಕನವರ ಗಮನ ಹೋಯಿತು. ಆ ಕೋಗಿಲ ಉಲಿಯ ಕಡೆಗೆ ಕಿವಿ ಚುರುಕಾಯಿತು. ಅದೆಷ್ಟು ಮನೋಹರತೆ. ಅದೆಷ್ಟು ಸುಂದರ ಕುಹೂ ಕುಹೂ ಕೂಜನ. ಈ ಹಾಡು ಹಕ್ಕಿಗೆ ಈ ಮನೋಹರತೆ ಕೊಟ್ಟವರು ಯಾರು? ಅ ಹಕ್ಕಿ ಎಲ್ಲಿದೆ? ಉಲಿ ಬಂದ ದಿಕ್ಕಿನ ಕಡೆ ಗಮನಿಸಿದರು. ಅಲ್ಲಿ ಕಾಗೆಯಂತಹ ಹಕ್ಕಿ ಕಾಣಬಂತು. ಆ ಕೋಗಿಲೆಯನ್ನು ಮಗುವಿನಂತೆ ಅಕ್ಕ ಮಾತನಾಡಿಸತೊಡಗಿದ್ದಾರೆ. ಸರವೆತ್ತಿ ಪಾಡುವ ಕೋಗಿಲೆ ಗಳಿರಾ ನೀವು ಕಾಣಿರೇ ನೀವು

ಕಾಣಿರೇ. ಹಿರಿದಾಗಿ ಸ್ವರ ತೆಗೆದು ಹಾಡುವ ಕೋಗಿಲೆ. ಗಳಿರಾ ನೀವೇನಾದರೂ ನನ್ನ ಚೆನ್ನಮಲ್ಲಿಕಾರ್ಜುನನನ್ನು ಕಂಡಿರಾ? ಕೇಳಿದ್ದಾರೆ. ಕೋಗಿಲೆ ಪುಟ್ಟ ಕಾಗೆಯಂತೆ ಕಾಣಬಂತು. ಕತ್ತು, ಮೇಲಿನ ಬೆನ್ನ ಮೇಲಿನ ರೆಕ್ಕೆಯಬಣ್ಣ ಒಂದಿಷ್ಟು ಮಾಸಲು ಮಾಸಲು ಕಾಗೆ ಬಣ್ಣಕ್ಕಿಂತ ಬೇರೆಯೆ ಇದೆ. ಕಾಗೆ ಗಿಂತ ತುಸು ಉದ್ದವಾದ ಪುಚ್ಚ ಕೂಡಲೆ ನೋಡಿದರೆ ಇದು ತರುಣ ಕಾಗೆ. ಇನ್ನು ಪುಟ್ಟದು ಬೆಳೆದಮೇಲೆ ಇದು ದಪ್ಪಾಗುವುದು ಎನಿಸುತ್ತದೆ. ಆದರೆ ದನಿಯ ಸೊಗಸೇನು? ಚೆಲುವು ಸೌಂದರ್ಯಗಳೇನು? ಯಾರು ಎಷ್ಟು ನಾಲಿಗೆಯಿಂದ ವರ್ಣಿಸಿದರೂ ಕಡಿಮೆಯೆ. ಇದು ಈ ಧ್ವನಿ ಹೊರಡಿಸುತ್ತದೆ. ಈ ಮನೋಹರ ಕಂಠಸಿರಿ ಕೊಟ್ಟವರು ಯಾರು? ಇದು ಏನು ಮಾವಿನ ಚಿಗುರನ್ನೆ ತಿನ್ನುತ್ತ ದೆಯೆ? ಇದು ಕೇವಲ ಹಣ್ಣುಗಳನ್ನೆ ತಿಂದು ಜೀವನ ಮಾಡುವುದೆ? ಹೇಗೆ? ಈ ಕಂಠ ಸಿರಿ ಬಂದುದೆಲ್ಲಿಂದ ಕೋಗಿಲೆಯನ್ನು ಮಾತನಾಡಿಸಿದ್ದಾರೆ. ಅಕ್ಕನವರು ಆ ಕೋಗಿಲೆಯ ದನಿಯನ್ನು ವರ್ಣಿಸಿರುವ ರೀತಿ ನೋಡಿರಿ. ಸ್ವರವೆತ್ತಿ ಹಾಡುವ ಕೋಗಿ ಲೆಗಳಿರಾ ನೀವು ಕಾಣಿರೇ ನೀವು ಕಾಣಿರೇ. ಕೋಗಿಲೆ ಉಲಿದಾಗ ಕಾಡೆಲ್ಲಕ್ಕು ಹೊಸ ಉತ್ಸಾಹ, ಆಮೋದಗಳು ಉಂಟಾಗುತ್ತವೆ.

ಎರಗಿ ಬಂದಾಡುವ ತುಂಬಿಗಳಿರಾ ನೀವು ಕಾಣಿರೇ ನೀವು ಕಾಣಿರೇ. ಬೆಳಿಗ್ಗೆ ಸಂಜೆಗೆ ಪೂಜೆಗೆ, ಹೂ ಬಿಡಿಸಲು ಹೋಗುತ್ತಿದ್ದರು. ಮುಂಜಾನೆಯ ನಸುಕಿನಲ್ಲಿ ಆಗಲೆ ತುಂಬಿಗಳು ಹೂವಿನಿಂದ ಹೂವಿಗೆ ಮಕರಂದ ಹೀರುತ್ತ, ಹಾರುತ್ತ ಲಗು ಬಗೆಯಿಂದ ಝೇಂಕಾರ ಮಾಡುತ್ತ ಮುಂದೆ ಮುಂದೆ ಹಾರಿ ಹೋಗುತ್ತಿವೆ. ನಾನೆ ಬೇಗ ಎದ್ದಿರುವೆ ಎಂದರೆ ನನಗಿಂತ ಮೊದಲೆ ಎದ್ದಿವೆ. ಎಷ್ಟೊಂದು ದುಂಬಿ ಗಳು ಹೂಗಳನ್ನು ಅದು ಹೇಗೆ ಪತ್ತೆ ಹಚ್ಚುತ್ತವೋ ಏನೊ? ಅದೆಲ್ಲಿಂದ ಬಂದವು. ಇವು ಇರುಳು ಎಲ್ಲಿ ತಂಗಿದ್ದವು. ಇಷ್ಟೊತ್ತಿಗೆ ಬೇಗನೆ ಬಂದಿವೆ. ಇಲ್ಲೆ ಸಮೀಪ ಇದ್ದಾವೇನೊ? ಅವುಗಳು ಹೂವಿನಿಂದ ಹೂವಿಗೆ ಹಾರುವಾಗ ಹಾರುವ ಗತಿ, ಉಂಟುಮಾಡುವ ನಾದ, ಝೇಂಕಾರ, ಹೂವಿನ ಮೇಲೆ ಕೂಡುವಾಗ ಗಾನ ಕಡಿಮೆಯಾಗುತ್ತ ನಿಂತುಹೋಗುವುದು. ಹೂವಿನ ಕೇಸರಗಳ ಸುತ್ತ ಬಳುಕಾಡಿ ರಸಹೀರಿ, ಮಕರಂದ ಹೀರಿ ಮುಂದೆ ಹೋಗುವ ಪರಿ ಇವೆಲ್ಲವನ್ನು ಗಮನಿಸಿದರು ಆ ದುಂಬಿಗಳನ್ನು ಹತ್ತಿರದಿಂದಲೆ ಮಾತನಾಡಿಸುತ್ತಿದ್ದಾರೆ. ಎರಗಿ ಬಂದಾಡುವ ತುಂಬ ಗಳಿರಾ ನೀವು ಕಾಣಿರೇ ನೀವು ಕಾಣಿರೇ. ಎರಗಿ ಬಂದು ಎಂಬಲ್ಲಿ ಅವು ಹೂಗಳ ಮೇಲೆ ಎರಗು ವುದನ್ನು ಹಾರುವುದನ್ನು ಎರಗು ಪದ ಅಭಿನಯಿಸಿಯೆ ಬಿಡುತ್ತದೆ. ಅದು ಹೂವಿನ ಮೇಲೆ ಎರಗುವ ಮುಂಚೆ ಹೂವಿನ ಮೇಲೆ ತುಸು ಅತ್ತ ಇತ್ತ ಆಯ ಕಟ್ಟಿನ ಜಾಗಕ್ಕಾಗಿ ಹಾರಾಡುತ್ತದೆ. ನೀವು ಕಾಣಿರೇ ನೀವು ಕಾಣಿರೇ ಎಂದು ಎರಡು ಸಲ ಕೇಳುವ ಮೂಲಕ ಅಕ್ಕನವರಿಗೆ ಚೆನ್ನಮಲ್ಲಿಕಾರ್ಜುನನು ತುರ್ತಾಗಿ ಬೇಕಾ ಗಿರುವನೆಂಬುದನ್ನು ಹೇಳುತ್ತದೆ. ಅವುಗಳಿಗೆ ಮಕರಂದ ಹೀರುವ ಅವಸರ. ಅಕ್ಕನ ವರಿಗೆ ಚೆನ್ನಮಲ್ಲಿಕಾರ್ಜುನನ ಅವಸರ. ಎಷ್ಟೊಂದು ಹೂಗಳು ಎಷ್ಟೊಂದು ತುಂಬಿ ಗಳು ಎಲ್ಲವೂ ಈ ಸೃಷ್ಟಿಕ್ರಿಯೆಯ ಸಡಗರದಲ್ಲಿ ನಿರತವಾಗಿವೆ. ಇತ್ತ ಕೊಳ ಎಷ್ಟೊಂದು ಸುಂದರ ಬೆಳ್ಳನೆಯ ಹಂಸಗಳು. ಕೊಳದಲ್ಲಿ ಕಲ ಕಲ ಹಿಂದೆ ಮುಂದೆ ಒನೆಯುತ್ತ ತೊನೆಯುತ್ತ ಬಳುಕುತ್ತ ತುಳುಕುತ್ತ ಹಂಸಗಳು ಅತ್ತ ಇತ್ತ ಆಡುತ್ತಿವೆ. ಆವುಗಳ ಚಂದವೇನು? ಅಂದವೇನು? ಮನಸ್ಸಿಗೆ ಹಂಸದ ಬಣ್ಣನಡಿಗೆ, ಹಾವ,

ಅಲ್ಲಿ ಕರುಣೆ, ಮರುಕ ಹುಟ್ಟಬಹುದು. ಅಕ್ಕ ಮಗುವೋ? ಹುಚ್ಚರೊ? ಅವರ ವಚನದಲ್ಲಿ ಕವಿಯಕಣ್ಣಿದೆ. ಪ್ರತಿಭೆ ಇದೆ. ವಚನ ಕೇಳಿದ ಯಾರಲ್ಲಿಯೂ ಸ್ಫೂರ್ತಿ ಉಕ್ಕಿಸುವ ಚಿಲುಮೆಯ ಬುಗ್ಗೆ ಇಲ್ಲಿದೆ. ಅಕ್ಕ ಕವಿ ಮಾತ್ರವಲ್ಲ. ಅವರು ಕವಿಗಳ ತವನಿಧಿ. ಈ ವಚನದಲ್ಲಿ ಮಿಂದೆದ್ದಾಗ ಬೆರಗು, ಕುತೂಹಲವೂ ಆ ಮೂಲಕ ಸತ್ಯದ ಆಳಕ್ಕಿಳಿದು ಮಿಂದೆದ್ದು ಬಂದ ತಲಸ್ಪರ್ಶಿ ದರ್ಶನವೂ ಆ ಮೂಲಕ ಲೋಕದ ವಾಸ್ತವದ ಅವರಿವು ಮೂಡಿಸಿ ವಿಷಾದ, ವಿಷಣ್ಣತೆಯನ್ನು ಮೂಡಿಸಿ ನಮ್ಮನ್ನು ಬೆರಗು ಮೌನ ಸಮುದ್ರದಲ್ಲಿ ಅದ್ದಿಬಿಡುತ್ತವೆ. ಅವರು ಯಾಕೆ ದುಂಬಿ, ಬೆಳದಿಂಗ ಳು, ಕೋಗಿಲೆ, ಮಾವಿನಮರವನ್ನು ಮಾತನಾಡಿಸಿದರು? ಅವರಿಗೆ ಅತಿತುರ್ತಾಗಿ ಪರಮಾತ್ಮ ಬೇಕಾಗಿದೆ. ಪರಮಾತ್ಮನಿಲ್ಲದೆ ಬದುಕಲಾರದ ಸ್ಥಿತಿ ತಲುಪಿದ್ದಾರೆ. ಚೆನ್ನ

ಮಲ್ಲಿಕಾರ್ಜುನನನೆ ಊಟ, ನಿದ್ರೆ, ಹಸಿವು, ಬಾಯಾರಿಕೆ, ಹೆಚ್ಚೇನು ಉಸಿರಾಟವೆ ಅವ ನಾದ ಸ್ಥಿತಿ ಅಕ್ಕಮಹಾದೇವಿಯವರದು. ತದು. ಈ ಕಾರಣ ಇವನ್ನೆಲ್ಲ ಮಾತನಾಡಿಸಿದ್ದಾರೆ.

10) ಅರಿಸಿನವನೆ ಮಿಂದು ಹೊಂದೊಡಿಗೆಯನೆ ತೊಟ್ಟು ದೇವಾಂಗವನುಟ್ಟೆ ಪುರುಷ ಬಾರಾ. ಪುಣ್ಯರತ್ನವೆ ಬಾರಾ.

ನಿನ್ನ ಬರವೆನ್ನ ಅಸುವಿನ ಬರವು ಬಾರಯ್ಯ. ಚೆನ್ನಮಲ್ಲಿಕಾರ್ಜುನಯ್ಯ ಬಂದಾನೆಂದು

ಬಟ್ಟೆಗಳ ನೋಡಿ ಬಾಯಾರುತಿಹೆನು.

ಪದಗಳ ಅರ್ಥ

ಮಿಂದೆ-ಸ್ನಾನಮಾಡಿದೆ.

ಹೊಂದೊಡಿಗೆ-ರತ್ನಾಭರಣ.

ದೇವಾಂಗ-ರೇಷ್ಮೆವಸ್ತ್ರ

ಪುರುಷ-ನಲ್ಲ ಗಂಡ., ದೇವರು.

ಪುಣ್ಯ ರತ್ನ- ಪರಮಾತ್ಮ

, ಅಸು-ಪ್ರಾಣ.

ಬಟ್ಟೆ-ದಾರಿ

ಅರಿಸಿನವನೆ ಮಿಂದು ಹೊಂದೊಡಿಗೆಯನೆ ತೊಟ್ಟೆ. ದೇವಾಂಗವನುಟ್ಟೆ, ಅರಿಸಿನ ಪೂಸಿ ಮಜ್ಜನ ಮಾಡಿದೆ. ರೇಷ್ಮೆವಸ್ತ್ರ ಉಟ್ಟೆ ರತ್ನಾಭರಣ ತೊಟ್ಟೆ. ಪುರುಷಬಾರಾ. ಪುಣ್ಯ ರತ್ನವೆ ಬಾರಾ. ನಿನ್ನ ಬರವೆನ್ನ ಅಸುವಿನ ಬರವು ಬಾರಯ್ಯ. ನಲ್ಲನೆ, ಪತಿಯೆ ಬಾರಾ. ಪುಣ್ಯದ ಫಲವೆ ಬಾರಾ. ನಿನ್ನ ಆಗಮನವೆ ಪ್ರಾಣದ ಆಗಮನವಾಗಿ ದಾರಿ ನೋಡುತ್ತಿದ್ದೇನೆ. ಚೆನ್ನಮಲ್ಲಿಕಾರ್ಜುನಯ್ಯ ಬಂದಾನೆಂದು ಬಟ್ಟೆಗಳ ನೋಡಿ ಬಾಯಾರುತಿಹೆನು. ಚೆನ್ನಮಲ್ಲಿಕಾಜುನ ಪರಮಾತ್ಮನೆ ನೀನು ಬಂದೆ ಬರುವೆ ಎಂದು ನೀನು ಬರುವ ದಾರಿ ನೋಡಿ ನೋಡಿ ಬಾಯಾರಿದ್ದೇನೆ.

ನೀರಡಿಕೆಯಾದರೆ ನೀರು ಕುಡಿಯಬಹುದು. ಪ್ರೀತಿ, ಪ್ರೇಮದ ಬಾಯಾರಿಕೆಗೆ ಏನು ಮಾಡಬೇಕು. ನವವಧುವಿನ ಪ್ರಣಯಿನಿಯ ಉತ್ಕಟ ಭಕ್ತಿ ಪ್ರೇಮಕಾವ್ಯವಿದು. ಈ ಸೊಗಸಾದ ಚಿತ್ರಣ ಯಾವ ಭಾಷೆಯ ಕಾವ್ಯದಲ್ಲೂ ದೊರೆಯದು, ನವವಧು ತನ್ನ ನಲ್ಲನಿಗಾಗಿ ಕಾತರಿಸಿ, ಪ್ರೀತಿಸಿ ಕಳವಳಿಸುವಂತೆ ಅಕ್ಕ ಪರಮಾತ್ಮಾನಿಗಾಗಿ ಹಂಬಲಿಸಿದ್ದಾರೆ. ಪ್ರೇಮದ ಸ್ವಗತ ವಿವರ ವಿವರದಲ್ಲಿ ಚಿತ್ರಿತವಾಗಿದೆ. ಆರಿಸಿನದ ಸ್ನಾನ ಮಾಡಿದ್ದೇನೆ. ಹೊನ್ನಾಭರಣತೊಟ್ಟು ಶ್ವೇತರೇಷ್ಮೆವಸನಧಾರಿಯಾಗಿದ್ದೇನೆ. ಅಂತರಂಗ ಮಡಿಮಾಡಿದ್ದೇನೆ. ಬಹಿರಂಗ ಮಡಿ ಮಾಡಿದ್ದೇನೆ. ಎನ್ನಂತರಂಗಬಹಿರಂಗ ಪವಿತ್ರಮಾಡಿಕೊಂಡು ನಿನಗೆ ದಾರಿ ನೋಡಿದ್ದೇನೆ. ನಲ್ಲನೆ, ಜಗದೊಡೆಯನೆ, ಪರಮಾತ್ಮನೆ ನೀನು ಯಾವಾಗ ಯಾವ ದಾರಿಯಲ್ಲಿ ಬೇಕಾದರೂ ಬರಬಹು ದೆಂದು ದಾರಿ ನೋಡಿದ್ದೇನೆ. ಈ ನಿನ್ನ ಚೆಲುವ ಚೆನ್ನೆ ನಿನಗಾಗಿ ಪ್ರೀತಿಯ ಪ್ರಣತಿ

ಬೆಳಗಿಸಿದ್ದಾಳೆ. ಬಾಯಾರಿದ್ದೇನೆ. ನೀರುಕುಡಿದಿಲ್ಲ. ಬೇಕು ಬೇಡಗಳನ್ನು ದೂರ ಮಾಡಿ ನಿನಗಾಗಿ ದಾರಿ ನೋಡಿದ್ದೇನೆ. ನಿನ್ನ ಆಗಮನವೆ ನನ್ನ ಪ್ರಾಣವಾಗಿದೆ. ನೀನು ಬರದೆ ಹೋದರೆ ನಾನು ಪ್ರಾಣವಿಡಿದು ಬದುಕುವುದಿಲ್ಲ. ಈ ಪ್ರೀತಿ ಭಕ್ತಿಪಥದಲ್ಲಿ ಕೊಟ್ಟುಕೊಳ್ಳುವ ಪರಿಪೂರ್ಣ ಶರಣಾಗತಿಯ ಪ್ರೀತಿಯಿದು. ಅಕ್ಕಮಹಾದೇವಿ ಯವರು ನಿಜ ಅರ್ಥದಲ್ಲಿ ಶರಣಸತಿ ಲಿಂಗಪತಿ ಶರಣೆಯರು.

11) ಅರಸಿ ತೊಳಲಿದರಿಲ್ಲ. ಬಯಸಿ ಹೊಕ್ಕರಿಲ್ಲ. ಆಶೆಮಾಡಿದಡಿಲ್ಲ, ತಪಸು ಮಾಡಿದಡಿಲ್ಲ.

ಅದು ತಾ ಬಹ ಕಾಲಕ್ಕಲ್ಲದೆ ಸಾಧ್ಯವಾಗದು ಶಿವನೊಲಿದಲ್ಲದೆ ಕೈಗೂಡದು. ಚೆನ್ನಮಲ್ಲಿಕಾರ್ಜುನಾ.

ಅರಸಿ ತೊಳಲಿದಡಿಲ್ಲ. ಬಯಸಿಹೊಕ್ಕರಿಲ್ಲ.

ಆಶೆಮಾಡಿದಡಿಲ್ಲ ತಪಸು ಮಾಡಿ ದಡಿಲ್ಲ. ಹುಡುಕಿಹುಡುಕಿ ಬೆದಕಿದರೂ ಇಲ್ಲ. ಇಚ್ಚಿಸಿ ಹೋದರೂ ಇಲ್ಲ. ಅಶೆಮಾಡಿದರೂ ಇಲ್ಲ. ತಪಸ್ಸು ಮಾಡಿದರೂ ಇಲ್ಲ. ಅದು ತಾ ಬಹ ಕಾಲಕ್ಕಲ್ಲದೆ ಸಾಧ್ಯವಾ ಗದು. ಶಿವನೊಲಿದಲ್ಲದೆ ಕೈಗೂಡದು ಚೆನ್ನಮಲ್ಲಿಕಾರ್ಜುನ ನಾವು ಎಷ್ಟೆ ಪ್ರಯತ್ನ. ಮಾಡಿದರೂ ಅದು ತಾ ಬರುವ ಕಾಲಕ್ಕೆ ಮಾತ್ರ ಬರುತ್ತದೆ. ಶಿವನೊಲಿದಾಗ ಮಾತ್ರ ನೆರವೇರುತ್ತದೆ. ಈ ವಚನ ವಿಧಿವಾದವನ್ನು ಹೇಳುತ್ತದೆ ನಾವು ಎಷ್ಟೇ ಪ್ರಯತ್ನ ಮಾಡಿದರೂ ಕೆಲವುಸಲ ಜೀವನದಲ್ಲಿ ನಾವು ಬಯಸಿದ್ದು ಸಾಧ್ಯವಾಗುವುದಿಲ್ಲ. ಕಾಲ ಒದಗಿ ಬಂದಾಗ ಪ್ರಯತ್ನ ಮಾಡದಿದ್ದರೂ ಅದು ಕೈಗೂಡಿಬಿಡುತ್ತದೆ. ಅಕ್ಕ ಮಹಾದೇವಿಯವರು ಪರಮಾತ್ಮನನ್ನು ಪತಿಯನ್ನಾಗಿ ಪಡೆಯಲು ಸಾಕ್ಷಾತ್ಕಾರ ಮಾಡಿಕೊಳ್ಳಲು ಬಹಳಕಾಲ ತಪಸ್ಸು ನಡೆಸಿದರು. ನಾವು ಅವಸರದಲ್ಲಿ ಎಷ್ಟೆ ಪ್ರಯತ್ನ ಮಾಡಿದರೂ ಅದು ಕಾಲ ಒದಗಿಬಂದಲ್ಲದೆ ಸಾಧ್ಯವಾಗುವುದಿಲ್ಲ. ಅರಸಿ, ಹುಡುಕಿ ಪ್ರಯತ್ನಿಸಿದರೂ, ಆಶೆಮಾಡಿ ದರೂ ಮತ್ತೆ ಮತ್ತೆ ಆಶೆ ಮಾಡಿದರೂ ತಪಸ್ಸು ನಡೆಸಿದರೂ ಎಷ್ಟೆ ಪ್ರಯತ್ನ ನಡೆಸಿದರೂ ಅದು ಸಾಧ್ಯವಾಗುವುದೇ ಇಲ್ಲ. ಅದು ತಾ ಆಗುವ ಕಾಲಕ್ಕೆ ಆಗುತ್ತದೆ. ಶಿವನೊಲಿದಾಗ ಮಾತ್ರ ಅದು ಸಾಧ್ಯ ವಾಗುತ್ತದೆ. ಯಾವುದಕ್ಕೂ ಅವನ ಅನುಗ್ರಹ ಬೇಕು. ಎಲ್ಲವನ್ನು ಧಿಕ್ಕರಿಸಿ ಹೊರಗೆ ಬಂದ ಅಕ್ಕ ಸತ್ಯಕ್ಕಾಗಿ ಶೋಧನೆ, ಹುಡುಕಾಟ ನಡೆಸಿ ಈ ಮಾತು ಹೇಳುತ್ತಿದ್ದಾರೆ. ಅಪಾರ ಶೋಧನೆಯ ನಂತರ ಈ ನಿರ್ಧಾರ ಹೇಳಿದಾರೆ

12) ಅನ್ನವ ನೀಡುವವರಿಗೆ ಧಾನ್ಯವೆಸೆವ ಲೋಕ.

ಅರ್ಥವ ಕೊಡುವವರಿಗೆ ಪಾಷಾಣವೆಸೆವ ಲೋಕ. ಹೊನ್ನುಹೆಣ್ಣು, ಮಣ್ಣುಮೂರನೂಕಣ್ಣಿನಲ್ಲಿ ನೋಡಿ ಕಿವಿಯಲ್ಲಿ ಕೇಳಿ, ಕೈಯಲ್ಲಿ ಮುಟ್ಟಿ ಮಾಡುವ ಭಕ್ತಿ ಸಣ್ಣವರ ಸಮಾರಾಧನೆಯಾಯಿತ್ತು.

ತನ್ನನಿತ್ತುತುಷ್ಟಿ ಪಡವವರ ಎನಗೆ ತೋರಾ ಚೆನ್ನಮಲ್ಲಿಕಾರ್ಜುನಾ.

ಪದಗಳ ಅರ್ಥ

ಎಸೆ-ತೂರು,

ಪಾಷಾಣ-ಕಲ್ಲು,

ಸಮಾರಾಧನೆ-ಪೂಜೆ

ಸಣ್ಣವರು-ಅಲ್ಪ

ತುಷ್ಟಿ-ತೃಪ್ತಿ

ವಚನದ ಅರ್ಥ

ಅನ್ನವ ನೀಡುವವರಿಗೆ ಧಾನ್ಯವೆಸೆವ ಲೋಕ ಅರ್ಥವ ಕೊಡುವವರಿಗೆ ಪಾಷಾಣ ವೆಸೆವ ಲೋಕ. ಲೋಕದ ಜನರು ಹೇಗೆಂದರೆ ಅನ್ನ ಕೊಡುವವರಿಗೆ ಧಾನ್ಯವನ್ನು ತೂರುತ್ತಾರೆ. ಸಂಪತ್ತು ಕೊಟ್ಟವರಿಗೆ ಕಲ್ಲು ಒಗೆಯುತ್ತಾರೆ. ಹೆಣ್ಣು, ಹೊನ್ನು ಮಣ್ಣು ಮೂರನೂ ಕಣ್ಣಿನಲಿ ನೋಡಿ, ಕಿವಿಯಲ್ಲಿ ಕೇಳಿ ಕೈಯಲ್ಲಿ ಮುಟ್ಟಿ ಮಾಡುವ ಭಕ್ತಿ ಸಣ್ಣವರ ಸಮಾರಾಧನೆಯಾಯಿತ್ತು. ಭಕ್ತಿಯಾವುದು? ತ್ರಿವಿಧಗಳಾದ ಹೆಣ್ಣುಹೊನ್ನು ಮಣ್ಣು ಇವುಗಳನ್ನು ಅನುಭೋಗಿಸಿಕೊಂಡು ಮಾಡುವ ಭಕ್ತಿಯು ತೀರ ಅಲ್ಪರ ಭಕ್ತಿಯಾಯಿತ್ತು. ತನ್ನನಿತ್ತು ತುಷ್ಟಿ ವಡವವರ ತೋರಾ ಶ್ರೀಗಿರಿ ಚೆನ್ನಮಲ್ಲಿಕಾರ್ಜುನಾ. ಯಾರು ತನ್ನನ್ನೆ ಕೊಟ್ಟುಕೊಂಡು ಭಕ್ತಿಮಾಡುವರೊ ಅಂಥಹವರನ್ನು ನನಗೆ ತೋರಿಸು. ಇದು ಅವರ ಪ್ರಾರ್ಥನೆ. ಜಗತ್ತಿಗೆ ಸಕಲವನ್ನು ಕೊಟ್ಟವನು ಪರಮಾತ್ಮ ಆದರೆ ಜನರು ಅವನನ್ನು ಸ್ಮರಿಸುವುದಿಲ್ಲ. ಕೊಡದಿದ್ದವರನ್ನು ಸ್ಮರಿಸುತ್ತಾಹೋಗು ತ್ತಾರೆ. ಅಲ್ಲದೆ ಭಕ್ತಿ ಮಾಡುವಾಗ ಅವನೆ ಕೊಟ್ಟಿದ್ದನ್ನು ಕೊಡುವುದೇನು ಮಹಾ. ತನ್ನನ್ನು ಕೊಟ್ಟುಕೊಳ್ಳುವ ಭಕ್ತಿಯೆ ನಿಜವಾದ ಭಕ್ತಿ.

ಕೊಡದೆ ತ್ಯಾಗಿ ಎನಿಸಿ ಕೊಳ್ಳುವ ಜನರ ಇಚ್ಛಾ ಎಷ್ಟು ಅಲ್ಪ ಎಂಬುದನ್ನೂ ಇಲ್ಲಿ ವಿವರಿಸಿದ್ದಾರೆ. ಅನ್ನವನೀಡುವವರಿಗೆ ಧಾನ್ಯವೆಸೆವ ಲೋಕ. ಹಸಿದಾಗ ಅನ್ನವಿಕ್ಕಿ ಉಪಾಕಾರಮಾಡಿದವರಿಗೆ ಪ್ರತಿಯಾಗಿ ಲೋಕ ಅವರ ಮೇಲೆ ಧಾನ್ಯವೆಸೆಯುತ್ತದೆ. ನೀನೇನು ಕೊಟ್ಟೆ ಮಹಾ. ತಗೊ ನಿನ್ನ ಧಾನ್ಯ ಎನ್ನುತ್ತ ದಂತೆ. ಅರ್ಥವ ನೀಡಿದವರಿಗೆ ಪಾಷಾಣವೆಸೆವಲೋಕ. ಧನಸಹಾಯ ಮಾಡಿದವ ರಿಗೆ ಕಲ್ಲು ತೂರುತ್ತದೆ. ಭಕ್ತಿಮಾಡುವಾಗ ಮಾಡಬೇಕಲ್ಲ ಎಂದು ಕೈ ಹೊಸಕಿ ಕೊಂಡು, ಭಕ್ತಿ ಮಾಡುತ್ತದೆ. ಕೊಟ್ಟವನು ದೊಡ್ಡವನು. ಆ ದೊಡ್ಡವನು ಕೊಡ ದಿದ್ದರೆ, ನೀನೆಲ್ಲಿ ಕೊಡುತ್ತಿದ್ದೆ. ಕೊನೆಗೆ ನಿನ್ನನ್ನು ಸೃಷ್ಟಿಸಿದವನು ಕೂಡ ಅವನೆ. ಅಂದಮೇಲೆ ನೀನು ಏನುಭಕ್ತಿ ಮಾಡುವವನು. ನೀನು ಕೊಡುವವನೆ ಆಗಿದ್ದರೆ ಕೊಟ್ಟುದನ್ನು ಕೊಟ್ಟೆ ಎನ್ನದೆ, ನಿನ್ನದು ಏನಿದೆ? ಅದನ್ನು ಕೊಡಬಲ್ಲೆಯ? ನಿನ್ನದು ಏನು? ನಿನ್ನಿಚ್ಛೆಯಲ್ಲಿ ಯಾವುದು ಇದೆ ಅದು ನಿನ್ನದು. ಅದು ನಿನ್ನ ಪ್ರಾಣ. ಅದನ್ನು ನೀನು ಕೊಡಬಲ್ಲೆಯಾದರೆ ನೀನು ನಿಜದ ಭಕ್ತ. ಅರ್ಪಣೆ ಪರಿಪೂರ್ಣ ಶರಣಾಗ ತಿಯದಾಗಿರಬೇಕು.

## 13) ಅಯ್ಯ ಸರ್ವ ಮೂಲಹಂಕಾರವಿಡಿದು ಕುಲ, ಛಲ, ಜಾತಿಭ್ರಮೆ

ನಾಮ, ವರ್ಣಾಶ್ರಮ, ಮತಶಾಸ್ತ್ರಭ್ರಮೆ ತರ್ಕರಾಜ್ಯಭ್ರಮ ಧನ, ಧಾನ್ಯ, ಪುತ್ರಭ್ರಮೆ, ತ್ಯಾಗ, ಯೋಗ, ಭ್ರಮೆ

ಕಾಯ, ಕರಣ, ವಿಷಯಭ್ರಮೆ, ವಾಯ, ಮನ, ಭಾವ, ಜೀವಮೋಹಭ್ರಮೆ

ನಾಹಂಕೋಹಂ ಸೋಹಂ ಮಾಯಾಭ್ರಮೆ, ಮೊದಲಾದ ಬತ್ತೀಸ ಪಾಶ

ಭ್ರಮಿತನಾಗಿ, ತೊಳಲುವ ವೇಷಧಾರಿಗಳ ಕಂಡು, ಭಕ್ತ ಮಹೇಶ, ಪ್ರಸಾದಿ

ಲಿಂಗಿ, ಶರಣ, ಐಕ್ಯ, ಎಂದು ನುಡಿಯಲಾರದೆ ಎನ್ನ ಮನ ನಾಚಿ

ನಿಮ್ಮಡಿಗಭಿಮುಖವಾಯಿತ್ತಯ್ಯ ಚೆನ್ನಮಲ್ಲಿಕಾರ್ಜುನಾ.

**ಪದಗಳ ಅರ್ಥ**

**ಬತ್ತೀಸ-ಮೂವತ್ತೆರಡು.**

**ವಚನದ ಅರ್ಥ**

**ಮನುಷ್ಯನಲ್ಲಿ ಸುಖ, ಹಣ, ಅಧಿಕಾರ, ಯೌವನ ಇದ್ದಾಗ ಅಹಂಕಾರ ಬರು ತ್ತದೆ. ಈ ಕಾಲಕ್ಕೆ 32. ರೀತಿಯ ಅಹಂಕಾರಗಳು ಮನುಷ್ಯನಲ್ಲಿ ಬರುತ್ತವೆ. ಇವೆಲ್ಲ ಭ್ರಮೆಯಲ್ಲದೆ ಸತ್ಯವಲ್ಲ. ಇದು ಮನುಷ್ಯನನ್ನು ನಾಶಮಾಡುತ್ತದೆ. ಮನುಷ್ಯ ಇಂತಹ ಭ್ರಮಾತ್ಮಕ ಅಹಂಕಾರಗಳಿಂದ ದೂರವಿರಬೇಕು. ಹೀಗೆ ಅಹಂಕಾರ ತುಂಬಿಕೊಂಡು ಲಾಂಛನತೊಟ್ಟವರನ್ನು ಷಟ್ ಸ್ಥಲದ ಹೆಸರಿನಲ್ಲಿ ಗೌರವಿಸುವು ದಾದರೂ ಹೇಗೆ? ಶರಣರು ಎಂದು ಗುರುತಿಸುವುದಾದರೂ ಹೇಗೆ? ಇವರಿಂದ ದೂರವಿರುತ್ತೇನೆ ಎಂದು ಅಕ್ಕನವರು ಹೇಳಿದ್ದಾರೆ.**

14). ಅಘಟಿತ ಘಟಿತನ ಒಲವಿನ ಶಿಶು,

ಕಟ್ಟಿದೆನು ಜಗಕ್ಕೆ ಬರಿದನು.

ಕಾಮ, ಕ್ರೋಧ, ಲೋಭ, ಮೋಹ, ಮದ, ಮತ್ಸರಗಳಿಗೆ ಇಕ್ಕಿದೆನು ಕಾಲಲ್ಲಿ ತೊಡರನು.

ಗುರುಕೃಪೆಯೆಂಬ ತಿಗುರನಿಕ್ಕಿ, ಮಹಾಶರಣೆಂಬ ತಿಲಕವನಿಕ್ಕಿ, ನಿನ್ನ ಕೊಲುವೆ ಗೆಲುವೆ. ಶಿವಶರಣೆಂಬ ಅಲಗ ಕೊಂಡು

ಬಿಡು ಬಿಡು ಕರ್ಮವೆ ನಿನ್ನ ಕೊಲ್ಲದೆ ಮಾಣೆನು. ಕೆಡಹಿಸಿಕೊಳ್ಳದೆನ್ನ ನುಡಿಯ ಕೇಳಾ.

ಬ್ರಹ್ಮಪಾಶವೆಂಬ ಕಳನನೆ ಸವರಿ,

ವಿಷ್ಣು ಮಾಯೆಯೆಂಬ ಎಡೆಗೋಲ ನೂಂಕಿ,

ಎನ್ನೊಡೆಯ ಚೆನ್ನಮಲ್ಲಿಕಾರ್ಜುನನ ತಲೆದೂಗಲಿ ಕಾದುವೆನು.

ಪದಗಳ ಅರ್ಥ

ತೊಡರು-ಹಗ್ಗದ ಕುಣಿಕೆ, ಅಡ್ಡಿ, ಬಲೆ, ಅಘಟಿತಘಟಿತ-ಪರಮಾತ್ಮ,

ಸವರಿ-ಕತ್ತರಿಸಿ

ಪಾಶ-ಹಗ್ಗ,

ಕಳ-ಯೋಧ,

ಎಡೆಗೋಲು-ಎದುರು ಬಾಣ.

ಕಾದುವೆ-ಹೋರಾಡುವೆ.

ತಿಗುರು-ಗಂಧಾಕ್ಷತೆ? ಆಶೀರ್ವಾದ.?

ವಚನದ ಅರ್ಥ

ಅಘಟಿತ ಘಟಿತನ ಒಲವಿನ ಶಿಶು ಕಟ್ಟಿದೆನು ಜಗಕ್ಕೆ ಬಿರಿದನು. ನಾನು ಪರ ಮಾತ್ಮನ ಪ್ರೀತಿಯ ಮಗು. ಈ ಕೀರ್ತಿಯನ್ನು ಜಗತ್ತಿನಲ್ಲಿ ಪಡೆದಿದ್ದೇನೆ. ಕಾಮ, ಕ್ರೋಧ, ಲೋಭ, ಮೋಹ, ಮದ, ಮತ್ಸರಗಳಿಗೆ ಇಕ್ಕಿದೆನು ಕಾಲಲ್ಲಿ ತೊಡರನು. ಕಾಮಾದಿ ಅರಿಷಡ್ವರ್ಗದ ಕಾಲುಗಳಿಗೆ ತೊಡರುಗುಣಿಕೆ ಹಾಕಿಕೆಳಕ್ಕೆ ಕೆಡವಿದ್ದೇನೆ. ಗುರು, ಕೃಪೆಯೆಂಬ ತಿಗುರನಿಕ್ಕಿ ಮಹಾಶರಣೆಂಬ ತಿಲಕವನಿಕ್ಕಿ ನಿನ್ನ ಕೊಲುವೆ ಗೆಲುವೆ ಶಿವ ಶರಣೆಂಬ ಅಲಗ ಕೊಂಡು ಬಿಡುಬಿಡು ಕರ್ಮವೆ ನಿನ್ನ ಕೊಲ್ಲದೆ ಮಾಣೆನು. ಗುರು ವಿನ ಅಶೀರ್ವಾದವೆಂಬ ಗಂಧಾಕ್ಷತೆ ಧರಿಸಿದ್ದೇನೆ. ಮಹಾಶಿವಶರಣು ಎನ್ನುವ ಭಸ್ಮ ಧಾರಣೆ ಮಾಡಿದ್ದೇನೆ. ಶಿವಶರಣು ಎನ್ನುವ ಖಡ್ಗವನ್ನು ಹಿಡಿದಿದ್ದೇನೆ. ಬಿಡು ಬಿಡು ಕರ್ಮವೆ ನಿನ್ನನ್ನು ಕೊಂದು ಹಾಕಿಬಿಡುತ್ತೇನೆ. ಎಲ್ಲವೂ ನಿನ್ನಿಂದಲೆ ಆಗುತ್ತಿರುವುದು. ಮೊದಲು ನಿನ್ನನ್ನು ಮುಗಿಸಿಬಿಡುತ್ತೇನೆ. ಕೆಡಹಿಸಿಕೊಳ್ಳದೆನ್ನನುಡಿಯ ಕೇಳಾ. ನನ್ನಿಂದ ಕೆಳಕ್ಕೆ ಬೀಳಿಸಿಕೊಳ್ಳುವ ಮುಂಚೆ ನನ್ನ ಕೆಲವು ಮಾತುಗಳನ್ನು ಕೇಳು. ಬ್ರಹ್ಮ ಪಾಶವೆಂಬ ಕಳನನೆ ಸವರಿ, ವಿಷ್ಣುಮಾಯೆಯೆಂಬ ಎಡೆಗೋಲ ನೂಂಕಿ. ಬ್ರಹ್ಮಪಾಶ ಎನ್ನುವ ಯೋಧನನ್ನು ಕತ್ತರಿಸಿ ಹಾಕುತ್ತೇನೆ. ವಿಷ್ಣುಮಾಯೆಯೆನ್ನುವ ಎದುರುಬಾಣವನ್ನು ಅತ್ತ ಕತ್ತರಿಸಿ ಬಿಸಾಡುತ್ತೇನೆ. ಎನ್ನೊಡೆಯ ಚೆನ್ನಮಲ್ಲಿಕಾರ್ಜುನ ತಲೆದೂ ಗಲಿ ಕಾದುವೆನು. ನನ್ನ ಒಡೆಯ, ಪತಿ ಚೆನ್ನಮಲ್ಲಿಕಾರ್ಜುನ ದೇವರು ಹೌದು ಎನ್ನ ಬೇಕು. ಹಾಗೆ ಹೋರಾಡುತ್ತೇನೆ.

ಕೌಟುಂಬಿಕ ಪರಿಸರವನ್ನು ದಾಟಿ, ಅನುಭಾವ ಜಗತ್ತಿಗೆ ದುಮುಕಿದ ಅಕ್ಕಮಹಾ ದೇವಿಯವರು, ಬಹಿರಂಗದಲ್ಲಿ ಪುರುಷವ್ಯವಸ್ಥೆಯೊಂದಿಗೆ ಮತ್ತು ಅಂತರಂಗದಲ್ಲಿ ಇಂದ್ರಿಯಗಳೊಂದಿಗೆ ಸೆಣಸುವುದು ಅನಿವಾರವಾಯಿತು. ಹೊರಗೆ ರಾಜಮ ಹಾರಾಜರು ರಾಜ್ಯ ವಿಸ್ತರಣೆಗಾಗಿ ಯುದ್ಧಸಂಘರ್ಷ ನಡೆಸಿದ್ದರು. ಅಭದ್ರತೆ ಹೊರಗೂ ಇತ್ತು ಇಂತಹ ಕಾಲದಲ್ಲಿ ಬದುಕುಅನಿವಾರವಾಗಿ ಹೋರಾಟದ ಹಾದಿಯಾಯಿತು. ತನ್ನ ಅಸ್ತಿತ್ವ ಉಳಿಸಿಕೊಳ್ಳಬೇಕಾದರೆ ಮನೋಬಲ ಅಗತ್ಯ. ವೀರ ನಲ್ಲದವನಿಗೆ ಉಳಿಗಾಲವೆ ಇಲ್ಲ. ಮಹಿಳೆ ಅನುಭಾವಜಗತ್ತಿನಲ್ಲಿ ಎಲ್ಲ ಎಡರುಗ ಳನ್ನು ಎದುರಿಸಬೇಕಾಯಿತು. ಅಕ್ಕನವರಿಗೆ ಇದ್ದ ಒಂದೇ ಆಸರೆಯೆಂದರೆ ಗುರುವಿನಬಲ ಮತ್ತು ಆತ್ಮವಿಶ್ವಾಸ. ಪರಮಾತ್ಮನನ್ನು ಪಡೆಯಬೇಕೆಂದು ಬಂದು ನಿರೀಕ್ಷೆಗೂ ಮೀರಿದ ತೊಂದರೆಗಳನ್ನು ಅಕ್ಕ

ಎದುರಿಸಬೇಕಾಯಿತು. ಧರ್ಮ ತುಂಬ ಸರಳದ್ದಾದರೂ ಅದನ್ನು ಆಚರಿಸುವವರು ಅನೇಕ ನಿಷೇಧಗಳನ್ನು ಹೇರಿ, ಕಗ್ಗಂಟು ಮಾಡಿ ದ್ದಾರೆ. ದೇವರನ್ನು ಅಕ್ಕಮಹಾದೇವಿಯವರು ಸಾಧಿಸಿಕೊಂಡರೂ ಈ ವ್ಯವಸ್ಥೆಯ ಕೆಲವು ಸ್ವಾರ್ಥ ಹಿತಾಸಕ್ತಿಗಳು ಅದನ್ನು ಒಪ್ಪಲು ಸಿದ್ಧವಿಲ್ಲ. ಹೀಗಾಗಿ ಅಕ್ಕನವರ ಹೋರಾಟ ಏಕಕಾಲಕ್ಕೆ ಅಂತರಿಂದ್ರಿಯಗಳ ಜೊತೆಗೂ ಇದೆ. ಈಭದ್ರ ಸೋಗಲಾಡಿವ್ಯವಸ್ಥೆಯ ವಿರುದ್ಧವೂ ಇದೆ. ಒಂದುಕಡೆ ಕಟ್ಟುಕತೆಗಳ ಜಾಲ. ಇನ್ನೊಂದು ಕಡೆ ಆಧ್ಯಾತ್ಮಕ್ಷೇತ್ರದಲ್ಲಿ ಪುರುಷನ ಸ್ವಾಮ್ಯ. ಇಂತಹ ರಿಕ್ತ ಸ್ಥಿತಿ ಅಕ್ಕಮಹಾದೇವಿಯ ವರದು.

ನಾನು ಪರಮಾತ್ಮನ ಪ್ರೀತಿಯ ಮಗು. ಜಗಕ್ಕೆ ಸಾರಿ ಹೇಳುತ್ತಿದ್ದೇನೆ. ಅರಿ ಷಡ್ವರ್ಗಗಳಿಗೆ ತೊಡರುಬಲೆಯಿಟ್ಟು ಕೆಡವಿದ್ದೇನೆ. ಹೀಗೆ ಹಕ್ಕಿ ಪಕ್ಷಿಗಳಿಗೆ, ಕಾಡು ಪ್ರಾಣಿಗಳಿಗೆ ಇಡಲಾಗುತ್ತಿತ್ತು. ಬೆಳೆ ಸಂರಕ್ಷಣೆಗೆ ಇದು ಅನಿವಾರ. ಹಾಗೆ ಅನು ಭಾವ ಸಾಧನೆಗೂ ಅಕ್ಕನವರು ಎಚ್ಚರಿಕೆ ವಹಿಸುವುದು ಅನಿವಾಯ್ಯ. ಈ ಸಾಧನೆ ಗಾಗಿ ನಾನು ಗುರುವಿನ ಅನುಗ್ರಹವೆಂಬ ಗಂಧಾಕ್ಷತೆಯನ್ನೂ ದೈವಾನುಗ್ರಹ ಸೂಚಕ ಭಸ್ಮಧಾರಣೆಯನ್ನೂ ಮಾಡಿದ್ದೇನೆ. ಶಿವಶರಣು ಎಂಬ ಖಡ್ಗಹಿಡಿದಿದ್ದೇನೆ. ಏನು ನನ್ನನ್ನು ಕಾಡುತ್ತ ಬಂದಿರುವೆ ಎಲೆವಿಧಿ, ಕರ್ಮವೆ ನಿನ್ನನ್ನು ಕೊಲುವೆ ಗೆಲುವೆ. ನನಗೆ ಅದೆಷ್ಟು ವಿಪತ್ತು ಒಡ್ಡುತ್ತ ಬಂದಿರುವೆ. ಕರ್ಮವೆ ನಿನ್ನನ್ನು ಕೊಲ್ಲದೆ ನಿರ್ವಾಹವೆ ಇಲ್ಲ. ನಿನಗೆ ಆಧಾರವಾಗಿರುವ ಬ್ರಹ್ಮ ಪಾಶವನ್ನು ಕತ್ತರಿಸುತ್ತೇನೆ. ಇದಕ್ಕೆ ಬೆಂಬಲ ವಾದ ವಿಷ್ಣು ಮಾಯೆಯನ್ನು ಕತ್ತರಿಸುತ್ತೇನೆ. ನನ್ನ ಒಡೆಯನಾದ ಚನ್ನಮಲ್ಲಿಕಾರ್ಜು ನನು ಹೌದು ಎನ್ನುವ ಹಾಗೆ ಯುದ್ದ ಮಾಡುತ್ತೇನೆ. ಈ ಆತ್ಮವಿಶ್ವಾಸ ಬೇಕು.

15) ಅಷ್ಟವಿಧಾರ್ಚನೆಯ ಮಾಡಿ ಒಲಿಸುವೆನೆ ಅಯ್ಯ

ನೀನು ಬಹಿರಂಗ ವ್ಯವಹಾರ ದೂರಸ್ಥನು.

ಅಂತರಂಗದಲ್ಲಿ ಧ್ಯಾನವ ಮಾಡಿ ಒಲಿಸುವೆನೆ ಅಯ್ಯ

ನೀನು ವಾಕ್‌ಮನಕ್ಕತೀತನು.

ಜಪಸ್ತೋತ್ರದಿಂದ ಒಲಿಸುವೆನೆ ಅಯ್ಯನೀನು ನಾದಾತೀತನು. ಭಾವಜ್ಞಾನದಿಂದ ಒಲಿಸುವೆನೆ ಅಯ್ಯ, ನೀನು ಮತಿಗತೀತನು. ಹೃದಯಕಮಲದಲ್ಲಿ ಇಂಬಿಟ್ಟುಕೊಂಬೆನೆ ಅಯ್ಯ, ನೀನು ಸರ್ವಾಂಗ ಪರಿಪೂರ್ಣನು. ಅಯ್ಯಾ ನಿನ್ನ ಒಲಿಸಲೆನ್ನಳವಲ್ಲ. ನೀನೊಲಿವುದೆ ಕರ ಸುಖವಯ್ಯ ಚೆನ್ನಮಲ್ಲಿಕಾರ್ಜುನಾ.

ಪದಗಳ ಅರ್ಥ

ಅಷ್ಟವಿಧಾರ್ಚನೆ- ಎಂಟು ರೀತಿಯ ಪೂಜಾಕ್ರಮ. ಜಲ, ಗಂಧ, ವಿಭೂತಿ, ಅಕ್ಷತೆ, ಪತ್ರೆ, ಪುಷ್ಪ ಧೂಪ, ದೀಪ, ನೈವೇದ್ಯ, ಸ್ತೋತ್ರ-ಹಾಡು, ಪ್ರಾರ್ಥನೆ ಸ್ತುತಿ.

ಅಷ್ಟವಿಧಾರ್ಚಾನೆಯ ಮಾಡಿ ಒಲಿಸುವೆನೆ ಅಯ್ಯ ನೀನು ಬಹಿರಂಗ ವ್ಯವಹಾರ ದೂರಸ್ತನು. ಎಂಟುವಿಧವಾದ ಪೂಜೆಯನ್ನು ಮಾಡಿ ನಿನ್ನನ್ನು ಒಲಿಸುವೆ ಯೆಂದರೆ ನೀನು ಬಹಿರಂಗ ವ್ಯವಹಾರಗಳಿಗೆ ಸಿಗುವುದಿಲ್ಲ. ಜಲ, ಗಂಧ

ವಿಭೂತಿ, ಅಕ್ಷತೆ, ಪತ್ರೆ, ಪುಷ್ಪ ಧೂಪ, ದೀಪ, ನೈವೇದ್ಯ ಇವುಗಳಿಂದ ನಿನ್ನನ್ನು ಪೂಜಿಸೋಣ ವೆಂದರೆ ನೀನು ಕರಗಳಿಗೆ ಪೂಜಾದಿಗಳಿಗೆ ಸಿಗುವುದಿಲ್ಲ. ಅಂತರಂಗದಲ್ಲಿ ಧ್ಯಾನವ ಮಾಡಿ ಒಲಿಸುವೆನೆ ಅಯ್ಯ ನೀನು ವಾಕ್‌ಮನಕ್ಕತೀತನು. ಮನ, ಚಿತ್ತ ಬುದ್ದಿ ಆತ್ಮನಿಂದ ನಿನ್ನನ್ನು ಧ್ಯಾನಿಸಿ ಒಲಿಸಿಕೊಳ್ಳೋಣ ಎಂದರೆ ನೀನು ಮಾತು, ಶಬ್ದ, ಮನಗಳಿಗೆ ಅತೀತನಾಗಿರುವೆ, ಜಪಸ್ತೋತ್ರದಿಂದ ಒಲಿಸುವೆನೆ ಅಯ್ಯನೀನು ನಾದಾತೀತನು. ಜಪ ಮಂತ್ರ, ಹಾಡು, ಗಾನಾದಿಗಳಿಮದ ನಿನ್ನನ್ನು ಹಾಡಿ ಒಲಿಸುವೆಯೆಂದರೆ ನೀನು ನಾದಗಳಿಗು ಸಿಗುವುದಿಲ್ಲ. ಭಾವಜ್ಞಾನದಿಂದ ಒಲಿಸುವೆನೆ ಅಯ್ಯ ನೀನು ಮತಿಗತೀತನು. ಹೋಗಲಿ ಭಾವ, ಬುದ್ದಿಯಿಂದ ಒಲಿಸಿಕೊಳ್ಳುವೆ ಎಂದರೆ ನೀನು ಬುದ್ದಿಗೆ ಕೂಡದೂರರನಾಗಿರುವೆ. ಹೃದಯಕಮಲದಲ್ಲಿ ಇಂಬಿಟ್ಟುಕೊಂಬೆನೆ ಅಯ್ಯನೀನು

ಸರ್ವಾಂಗ ಪರಿಪೂರ್ಣನು. ನಿನ್ನನ್ನು ನನ್ನ ಹೃದಯದ ತಾವರೆಯಲ್ಲಿ ಇಟ್ಟುಕೊಳ್ಳೋಣ ಎಂದರೆ ನೀನು ಸರ್ವರೀತಿಯಲ್ಲಿಯೂ ಪರಿಪೂರ್ಣನಾಗಿರುವೆ. ಅಯ್ಯ

ನಿನ್ನ ಒಲಿಸಲೆನ್ನಳವಲ್ಲ. ನೀನೊಲಿವುದೆ ಕರ ಸುಖವಯ್ಯ ಚೆನ್ನಮಲ್ಲಿಕಾರ್ಜುನಾ. ಪರಮಾತ್ಮನೆ ನಿನ್ನನ್ನು ಒಲಿಸಲು ನನ್ನಿಂದ ಸಾಧ್ಯವಿಲ್ಲ. ನೀನೆ ಒಲಿಯುವುದು ಎಲ್ಲ

ರೀತಿಯಿಂದಲೂ ಸರ್ವಶ್ರೇಷ್ಠವಾದುದು. ಕೆಲವರು ಪೂಜೆಯನ್ನು ತೃಪ್ತಿಗಾಗಿ, ಸಂಪ್ರದಾಯವಾಗಿ

ಶ್ರದ್ದೆಕಾರಣವಾಗಿ, ದೇವರು ನಂಬಿಕೆ ಕಾರಣವಾಗಿ ಮಾಡುತ್ತಾರೆ. ಆದರೆ ಆಕ್ಕ ಮಹಾದೇವಿಯವರು ಭಕ್ತಿ ಮಾಡುತ್ತಿರುವ ಉದ್ದೇಶ ಪರಮಾತ್ಮನನ್ನು

ಸಾಕ್ಷಾತ್ಕಾರ ಮಾಡಿಕೊಳ್ಳುವುದೆ ಆಗಿದೆ. ಇದರಿಂದಾಗಿ ಅವರು ನಡೆಸುವ ಭಕ್ತಿಯು

ಸತ್ಯಶೋಧನೆಗೆ ಒಳಗಾಗುತ್ತಿದೆ. ಯಾವದಾರಿಯಲ್ಲಿ ಸಾಧನೆ ಮಾಡಿದರೆ ಪರಮಾತ್ಮ

ಒಲಿಯುವನು ಎಂಬುದನ್ನು ಅವರು ಪ್ರತಿ ಹಂತದಲ್ಲಿ ಒರೆಹಚ್ಚಿ ನೋಡತೊಡಗಿದ್ದಾರೆ. ತಾವು ನಡೆಸುವ ಭಕ್ತಿಯನ್ನು, ಪೂಜಾಕ್ರಮವನ್ನು, ಅರಿವಿನ ನಿಕಷಕ್ಕೆ ಒಡ್ಡಿ

ನೋಡುತ್ತಿದ್ದಾರೆ. ಸರಿ, ತಪ್ಪುಗಳ ನಿರ್ಣಯ ನೋಡಿ ತಮ್ಮ ಭಕ್ತಿ ಜೀವನವನ್ನು ತಿದ್ದಿಕೊಳ್ಳುತ್ತಿದ್ದಾರೆ. ಇಷ್ಟುಕಾಲ ಭಕ್ತಿ ಮಾಡಿದರೂ ಲಭ್ಯವಾಗದಿದ್ದರೆ. ನಾನು ನಡೆಸುತ್ತಿರುವ ಭಕ್ತಿಯೆ ತಪ್ಪಿರಬೇಕು. ನಿನ್ನನ್ನು ನಾವು ಈಗ ನಡೆಸಿರುವ ಅಷ್ಟವಿಧರ್ಚನೆ

ಭಕ್ತಿಯಿಂದ ಒಲಿಸಿಕೊಳ್ಳಲು ಸಾಧ್ಯವೆ? ಆ ಪ್ರಸ್ತಾವದ ವಚನ ಇದು. ಅಷ್ಟವಿಧಾರ್ಚನೆಯ ಮಾಡಿ ಒಲಿಸುವೆನೆ ಅಯ್ಯ ನೀನುಬಹಿರಂಗ ವ್ಯವಹಾರ ದೂರಸ್ತನು.

ಜಲ, ವಿಭೂತಿ, ಗಂಧಾಕ್ಷತೆ, ಪತ್ರೆ, ಪುಷ್ಪ, ಧೂಪ, ದೀಪ, ನೈವೇದ್ಯ ಇವು ಎಂಟುವಿಧದ ಪೂಜಾದ್ರವ್ಯಗಳು.

ಇವುಗಳಿಂದ ನಿನ್ನನ್ನು ಒಲಿಸಿಕೊಳ್ಳುತ್ತೇನೆ ಎಂದರೆ ಅದು

ಸಾಧ್ಯವೆ? ಈ ಪೂಜೆಗಳು ಬಹಿರ್ಮುಖವಾದವು. ಈಬಹಿರ್ಮುಖ ಪೂಜಾಕ್ರಿಯೆಗಳಿಗೆ ನೀನು

ದೊರೆಯುವುದಿಲ್ಲ. ಯಾಕೆಂದರೆ ನೀನು ನಮ್ಮ

ಕೈಗಳಿಗೆ ಈ ಪೂಜಾವಸ್ತುಗಳಿಗೆ ಸಿಗುವುದಿಲ್ಲ. ನೀನು ನಮ್ಮ ಹಾಗೆ ದೇಹಧಾರಿಯಲ್ಲ. ಅಂತರಂಗದಲ್ಲಿ ಧ್ಯಾನವ ಮಾಡಿ ಒಲಿಸುವೆನೆ ಅಯ್ಯ ನೀನು ವಾಕ್‌ಮನಕ್ಕತೀತನು.

ಹೋಗಲಿ ನಿನ್ನನ್ನು ಧ್ಯಾನಮಾಡಿ ಒಲಿಸಿಕೊಳ್ಳುವೆ ಎಂದರೆ ನೀನು ಮಾತು, ಮನಸ್ಸಿಗೆ ದೂರನಾಗಿರುವೆ. ಬಹಿರಂಗದಲ್ಲಿ ಸಾಧ್ಯವಿಲ್ಲ. ಅಂತರಂಗದಲ್ಲಿ ಸಾಧ್ಯವಿಲ್ಲ.

ಹಾಗಾದರೆ ನಿನ್ನನ್ನು ಹೇಗೆ ಸಾಧ್ಯಮಾಡಿಕೊಳ್ಳುವುದು. ಜಪಸ್ತೋತ್ರದಿಂದ ಒಲಿಸುವೆನೆ ಅಯ್ಯ ನೀನು ನಾದಾತೀತನು. ಕ್ರಿಯೆಯಿಂದ ಆಗದು. ಮಾತುಮನಗಳಿಂದ

ಆಗದು. ಜಪ, ಹಾಡುಗಳಿಂದ ನಿನ್ನನ್ನು ಒಲಿಸಿಕೊಳ್ಳಲು ಸಾಧ್ಯವೆ? ಅನಂತ ಮಂತ್ರ ಜಪಗಳನ್ನು ಮಾಡಿ, ಅನಂತ ಸ್ತೋತ್ರಗಳನ್ನು ಮಾಡಿ ನಿನ್ನನ್ನು ಒಲಿಸಿಕೊಳ್ಳುವೆ ಎಂದರೆ

ಸಾಧ್ಯವೆ? ನೀನು ಸ್ತುತಿ, ನಾದ ಗಳಿಗೆ ಮೀರಿದವನು. ಮಾತುಗಳಿಂದ ಇಲ್ಲ. ಕ್ರಿಯೆಗಳಿಂದ ಇಲ್ಲ. ಮನಸ್ಸಿನಿಂದ ಇಲ್ಲ. ಜಪದಿಂದ ಇಲ್ಲ. ಸೋತ್ರದಿಂದ ಇಲ್ಲ. ನಾದ

ದಿಂದ ಇಲ್ಲ. ಹಾಗಾದರೆ ಹೇಗೆ ನಿನ್ನನ್ನು ಒಲಿಸಿಕೊಳ್ಳುವುದು. ಮಹಾದೇವಿಯಕ್ಕನವರಿಗೆ ಪರಮಾತ್ಮ ಬೇಕಾಗಿದೆ. ಎಲ್ಲ ದಾರಿಗಳನ್ನು ಶೋಧನೆ ಮಾಡತೊಡಗಿದ್ದಾರೆ. ಭಾವಜ್ಞಾನದಿಂದ ಒಲಿಸುವೆನೆ ಅಯ್ಯ ನೀನು ಮತಿಗತೀತನು. ಹೋಗಲಿ

ಭಾವದಿಂದ ಒಲಿಸಿಕೊಳ್ಳುವೆ ಎಂದರೆ ನೀನು ಬುದ್ಧಿಗೆ ಮೀರಿದವನು. ಹೃದಯ ಕಮಲದಲ್ಲಿ ಇಂಬಿಟ್ಟುಕೊಂಬೆನೆ ಅಯ್ಯ ನೀನು ಸರ್ವಾಂಗ ಪರಿಪೂರ್ಣನು. ನಿನ್ನನ್ನು ನನ್ನ ಹೃದಯ ಕಮಲದಲ್ಲಿ ಇಟ್ಟುಕೊಳ್ಳುವೆ ಎಂದರೆ ನೀನು ಪರಿಪೂರ್ಣ ನಾಗಿರುವೆ. ಅಯ್ಯ ನಿನ್ನ ಒಲಿಸಲೆನ್ನಳವಲ್ಲ. ನೀನೊಲಿವುದೆ ಸುಖವಯ್ಯ ಚೆನ್ನಮ ಲ್ಲಿಕಾರ್ಜುನಾ. ನಿನ್ನನ್ನು ಒಲಿಸಿಕೊಳ್ಳಲು ಸಾಧ್ಯವಿಲ್ಲ ನೀನೆ ನನಗೆ ಒಲಿ.

## 16) ಅರಿವು ಸಾಧ್ಯವಾಯಿತ್ತೆಂದು ಗುರುಲಿಂಗ ಜಂಗಮವ ಬಿಡಬಹುದೆ?

## ಸಂದು ಸಂಶಯವಳಿದು ಅಖಂಡಜ್ಞಾನವಾಯಿತ್ತೆಂದು

## ಪರಧನ ಪರಸ್ತ್ರೀಯರಿಗಳುಪಬಹುದೆ?

ಯತ್ರ ಜೀವ: ತತ್ರ ಶಿವ ಅಭಿನ್ನ ಜ್ಞಾನವಾಯಿತ್ತೆಂದು ಶುನಕ ಸೂಕರ, ಕುಕ್ಕುಟ, ಮಾರ್ಜಾಲಂಗಳ ಕೂಡಿ ಭುಂಜಿಸಬಹುದೆ? ಭಾವದಲ್ಲಿತನ್ನ ನಿಜದ ನೆಲೆಯನರಿತಿಹುದು.

ಸುಜ್ಞಾನ, ಸತ್ಕಯಾ, ಸುನೀತಿಮಾರ್ಗದಲ್ಲಿ ವರ್ತಿಸುತಿಹುದು ಹೀಗಲ್ಲದೆ ಜ್ಞಾನವಾಯಿತ್ತೆಂದು ತನ್ನ ಮನಕ್ಕೆ ಬಂದಹಾಗೆ

ಮೀರಿನಡೆದಡೆ ಶ್ವಾನಗರ್ಭದಲ್ಲಿ ಹುಟ್ಟಿಸನೆ ಚೆನ್ನಮಲ್ಲಿಕಾರ್ಜುನ.

ಪದಗಳ ಅರ್ಥ

ಅಖಂಡ ಜ್ಞಾನ-ಕಾಣುವುದೆಲ್ಲವೂ ಬ್ರಹ್ಮ ಅಳುಪು-ಅಶೆ, ತತ್ರ-ಅಲ್ಲಿ,

ಅಭಿನ್ನ - ಭಿನ್ನವಲ್ಲದ್ದು, ಒಂದೆ.

ಚಿತ್ರ-ಎಲ್ಲಿ,

ಶುನಕ-ನಾಯಿ

ಮಾರ್ಜಾಲ-ಬೆಕ್ಕು,

ಭುಂಜಿಸು- ಊಟ ಮಾಡುವುದು.

ವಚನದ ಅರ್ಥ

ಅರಿವು ಸಾಧ್ಯವಾಯಿತ್ತೆಂದು ಗುರುಲಿಂಗಜಂಗಮವ ಬಿಡಬಹುದೆ? ಅರಿವು ಬಂತು ಎಂದು ಗುರುಲಿಂಜಂಗಮವನ್ನು ಬಿಡಲು ಬರುವುದಿಲ್ಲ. ಮಗನು ಒಂದು ರಾಜ್ಯದ ಮುಖ್ಯ ಮಂತ್ರಿಯಾದರೂ ಆತ ತಾಯಿಗೆ ಮಗನೆ ಹೊರತು ಮುಖ್ಯಮಂತ್ರಿಯಲ್ಲ. ಸಂದುಸಂಶಯವಳಿದು ಅಖಂಡಜ್ಞಾನವಾಯಿತ್ತೆಂದು ಪರಧನಪರಸ್ತ್ರೀಯರಿಗಳುಪಬ ಹುದೆ? ಎಲ್ಲ ಜೀವಜಾಲದಲ್ಲೂ ಪರಮಾತ್ಮನಿದ್ದಾನೆ ಎಂಬ ಸತ್ಯದ ದರ್ಶನವಾಯಿತು ಎಂದು ಪರರ ಸಂಪತ್ತಿಗಾಗಲಿ, ಪರಸ್ತ್ರೀಯಿರಿಗಾಗಲಿ ಆಶೆಮಾಡಲುಬ ರುವುದಿಲ್ಲ. ಯತ್ರ ಜೀವ: ತತ್ರ ಶಿವ।।ಎಂದು ಅಭಿನ್ನಜ್ಞಾನವಾಯಿತ್ತೆಂದು ಶುನಕ ಸೂಕರ ಕುಕ್ಕುಟ ಮಾರ್ಜಾಲಂಗಳ ಕೂಡೆ ಭುಂಜಿಸಬಹುದೆ? ಎಲ್ಲ ಜೀವವೂ ತನ್ನಂತೆಯೆ ಜೀವಿಗಳು ಎಂದು ನಾಯಿಬೆಕ್ಕು ಹಂದಿ, ಕೋಳಿ ಜೊತೆ ಕುಳಿತು ಊಟ ಮಾಡಲುಬರುವುದಿಲ್ಲ. ಭಾವದಲ್ಲಿ ತನ್ನ ನಿಜದ ನೆಲೆಯನರಿತಿಹುದು. ಭಾವದಲ್ಲಿ ನಾನು ಏನು ಎಂದು ತಿಳಿದುಕೊಳ್ಳಬೇಕು. ಸುಜ್ಞಾನ, ಸುನೀತಿಸಯಾಮಾರ್ಗ ದಲ್ಲಿ ವರ್ತಿಸುವುದು. ನಡೆದುಕೊಳ್ಳುವಾಗ ಮಾತ್ರ ಸುಜ್ಞಾನ, ಸಯೆ, ಸುನೀತಿ ಮಾರ್ಗದಲ್ಲಿ ನಡೆದುಕೊಳ್ಳಬೇಕು. ಆಚಾರಗೆಟ್ಟು ನಡೆಯಕೂಡದು. ಹೀಂಗಲ್ಲದೆ ಮನಕ್ಕೆ ಬಂದಹಾಗೆ ಮೀರಿ ನಡೆದೆನಾದಡೆ ಶ್ವಾನಗರ್ಭದಲ್ಲಿ ಹುಟ್ಟಿಸದೆ ಬಿಡುವನೆ? ಬೇರೆ ರೀತಿ ನಡೆದುಕೊಂಡರೆ ನಮಗೆ ಪ್ರಾಪ್ತವಾಗಿರುವ ಮಾನವ ಜನ್ಮ ಹೋಗಿ ನಾಯಿಜನ್ಮ ಬಂದರು ಬರಬಹುದು. ಅಕ್ಕಮಹಾದೇವಿಯವರ ಈ ಧರ್ಮೋಪ ದೇಶವು ವಿಚಾರವಾದಿಗಳಿಗೆ, ಅದ್ವೈತವಾದಿಗಳಿಗೆ ನಾಸ್ತಿಕರಿಗೆ, ಉದ್ದಟರಾಗಿನಡೆ ಯುವವರಿಗೆ ಮನಮುಟ್ಟುವಂತೆ ಎಚ್ಚರ, ತಿಳಿವಳಿಕೆ, ಸದ್ವರ್ತನೆಗಳನ್ನು ತಿಳಿಸಿಕೊ ಡುತ್ತದೆ. ಎಲ್ಲ ಆಧ್ಯಾತ್ಮಜೀವಿಗಳಿಗೂ ಸಾಧಕರಿಗೂ, ಇದು ಮಾರ್ಗದರ್ಶನ. ಮಾಡುತ್ತದೆ. ಭಾವಸತ್ಯ ಬೇರೆ, ವಸ್ತುಜ್ಞಾನಬೇರೆ. ಕೆಲವು ಭಾವಸತ್ಯಗಳನ್ನು ವಾಸ್ತ ವದಲ್ಲಿ ಆಚರಿಸಲು ಗುಣ ಕಾಲ, ದೇಶ, ಪರಿಸರ, ದೇಹಗಳಳಿಂದಾಗಿ ಸಾಧಕವಾ ಗುವುದಿಲ್ಲ. ನಡೆ, ನುಡಿ, ಕ್ರಿಯಾವರ್ತನೆ, ಹೇಗಿರಬೇಕೆಂಬುದನ್ನು ಇಲ್ಲಿ ತುಂಬ ಪರಿ ಣಾಮಕಾರಿಯಾಗಿ ತಿಳಿಸಿದ್ದಾರೆ. ಅರಿವು ಸಾಧ್ಯವಾಯಿತ್ತೆಂದು ಗುರುಲಿಂಗ ಜಂಗ ಮವ ಬಿಡಬಹುದೆ? ಭಾವಸತ್ಯ ಬೇರೆ, ವಸ್ತು ಸತ್ಯ ಬೇರೆ. ದೇವರು ಕೇವಲ ಭಾವಸ ತ್ಯವಲ್ಲ. ಅರಿವು ಬಂದಿದೆ ಎಂದು ಅಚಾರವನ್ನು ಬಿಡಲು ಬರುವುದಿಲ್ಲ. ಗುರು ಲಿಂಗ ಜಂಗಮ ನಮಗೆ ಅರಿವು ಅಚಾರ ವನ್ನು ತಿಳಿಸಿಕೊಡುವ ಹೊರದಾರಿಗಳು. ಜ್ಞಾನದ, ಉನ್ನತಿಗೆ ಸೋಪಾನಗಳು. ಸಂದು ಸಂಶಯವಳಿದು ಅಖಂಡಜ್ಞಾನವಾ ಯಿತ್ತೆಂದು ಪರಧನ, ಪರಸ್ತ್ರೀಯರಿಗಳುಪಬಹುದೆ? ಎಲ್ಲ ಜೀವಾವಳಿಗಳು ಪರಮಾ ತ್ಮನೆ ಎಂದು ಇನ್ನೊಬ್ಬರ ಹಣ, ಪರಸ್ತ್ರೀಯರಿಗೆ ಆಶೆ ಮಾಡಲುಬರುವುದಿಲ್ಲ. ಅದು ದೇವರದು ಇದು ದೇವರದು ಹಾಗಿದ್ದಮೇಲೆ ಎಲ್ಲವೂ ನನಗಿರಲಿ ಎನ್ನಲು ಬರು ವುದಿಲ್ಲ. ಎಲ್ಲವೂ ಬ್ರಹ್ಮ ಸರಿ. ಆದರೆ ಬ್ರಹ್ಮವು ಈಗ ಲೋಕದ ಸಂಬಂಧಗಳಲ್ಲಿ

ಸಿಕ್ಕಿದೆ. ಈಸಂಬಂಧ ಹರಿಯದೆ ಅದನ್ನು ಪಡೆದುಕೊಳ್ಳಲು ಬರುವುದಿಲ್ಲ. ಲೋಕ ದ ವಸ್ತುಗಳನ್ನು ಕಾಯದ ರೂಪದಲ್ಲಿ ಪಡೆಯಬೇಕಾದರೆ ಅದಕ್ಕೆ ಕೆಲವು ನೀತಿಯ ಗೆರೆಗಳಿವೆ ಅವುಗಳು ಒಪ್ಪಿಗೆಯಾದರೆ ಮಾತ್ರ ಪಡೆಯಬಹುದು. ಯತ್ರ ಜೀವಃ ತತ್ರ ಶಿವ. ಎಲ್ಲ ಜೀವರೂ ಪರಬ್ರಹ್ಮನಿಂದ ಬಂದುದು ಸರಿ. ಹಾಗೆಂದು ನಾಯಿ, ಹಂದಿ. ಬೆಕ್ಕು ಇವುಗಳ ಜೊತೆ ಒಂದೆ ತಟ್ಟೆಯಲ್ಲಿ ಊಟಮಾಡಲು ಬರುವುದಿಲ್ಲ. ಆ ದೇವಗಳ ಜೀವನ ವಿಧಾನಗಳು ಮನುಷ್ಯನ ಬದುಕಿಗೆ ಹೊಂದುವುದಿಲ್ಲ. ಭಾವ ದಲ್ಲಿ ನಿಜವನ್ನು ತಿಳಿದುಕೊಳ್ಳಬೇಕು ಅಷ್ಟೆ, ಸುಜ್ಞಾನ,

ಸತ್ಕ್ರಿಯಾ, ಸುನೀತಿ ಮಾರ್ಗ ದಲ್ಲಿ ನಡೆಯಬೇಕು. ಲೋಕದಲ್ಲಿ ಬಾಳುವಾಗ ಗುಣ, ನೀತಿ, ವರ್ತನೆಗಳು ಸರಿ ದಾರಿಯಲ್ಲಿರಬೇಕು. ಜ್ಞಾನೋದಯವಾಯಿತ್ತೆಂದು ಮನಕ್ಕೆ ಬಂದಹಾಗೆ ನಡೆ ಯಲು ಬರುವುದಿಲ್ಲ. ಹಾಗೆ ನಡೆದರೆ ಫಲಗಳನ್ನು ಒಳ್ಳೆಯದು ಕೆಟ್ಟದ್ದು ನೀನೆ ಊಟಮಾಡಬೇಕಾಗುತ್ತದೆ. ಸೃಷ್ಟಿಯಲ್ಲಿ ಗುಣಾತ್ಮಕ ತರತಮಭೇದ ಇದೆ. ಇದನ್ನು ದಾಟಲು ಬರುವುದಿಲ್ಲ.

17) ಅಯ್ಯಾ ನೀನೆನ್ನ ಮೊರೆಯನಾಲಿಸಿದಡೆ ಆಲಿಸು ಆಲಿಸದಿರ್ದಡೆ ಮಾಣು.

ಅಯ್ಯಾ ನೀನೆನ್ನ ದುಃಖವ ನೋಡಿದಡೆ ನೋಡು ನೋಡದಿರ್ದಡೆಮಾಣು

ಎನಗಿದು ವಿಧಿಯೆ. ನೀನೊಲ್ಲದಡೆ ಆನೊಲಿಸುವ ಪರಿ ಎಂತಯ್ಯ.

ಮನವೆಳಸಿ ಮಾರುಹೋಗಿ ಮರೆಹೊಕ್ಕಡೆ

ಕಾಂಬ ಪರಿಯೆಂತಯ್ಯ. ಚೆನ್ನಮಲ್ಲಿಕಾರ್ಜುನಯ್ಯ.

ಪದಗಳ ಅರ್ಥ

ಮಾಣು-ಬಿಡು,

ವಿಧಿ-ಕರ್ಮ, ಪ್ರಾರಬ್ಧ.

ಎಳಸಿ-ಇಚ್ಚಿಸಿ.

ವಚನದ ಅರ್ಥ

ಅಯ್ಯಾನೀನೆನ್ನ ಮೊರೆಯನಾಲಿಸಿದರೆ ಆಲಿಸು ಆಲಿಸದಿರ್ದಡೆ ಮಾಣು. ಅಯ್ಯಾ ಪರಮಾತ್ಮನೆ ನೀನು ಪ್ರಾರ್ಥನೆಯನ್ನು ಕೇಳುವೆಯೊ ಬಿಡುವೆಯೊ ತಿಳಿಯೆ. ಅಯ್ಯಾ ನೀನೆನ್ನ ದುಃಖವ ನೋಡಿದರೆ ನೋಡು ನೋಡದಿರ್ದರೆ ಮಾಣು. ನೀನು ನನ್ನ

ದುಃಖವನ್ನು ಗಮನಿಸುವೆಯೊ ಬಿಡುವೆಯೊ. ಎನಗಿದು ವಿಧಿಯೆ ನೀನೊಲ್ಲದಡೆ ಆನೊಲಿಸುವ ಪರಿ ಎಂತಯ್ಯ. ನನಗೆ ಇದೇನು ವಿಧಿ, ಪ್ರಾರಬ್ಧವೆ? ನೀನು ನನ್ನನ್ನು ಒಲ್ಲದಿದ್ದರೆ ನಾನು ನಿನ್ನನ್ನು ಒಲಿಸುವ ದಾರಿಯಾದರೂ ಯಾವುದು? ಮನವೆಳಸಿ ಮಾರುಹೋಗಿ ಮರೆಹೊಕ್ಕಡೆ ಕಾಂಬ ಪರಿ ಎಂತಯ್ಯ? ನಾನು ನಿನಗೆ ಇಷ್ಟಪಟ್ಟು ಮಾರುಹೋಗಿದ್ದೇನೆ. ನಿನ್ನನ್ನು ಕಾಣುವ ದಾರಿಯಾದರೂ ಯಾವುದು? ಸತ್ಯವಿಚಾರಗಳನ್ನು ಖಚಿತವಾಗಿ ತಿಳಿಸಿ ಕೊಡದಿರುವಾಗ ಭಕ್ತಿಯು ತಲುಪುವ ನೆಲೆಗಳು ಅನಂತ ಆಯಾಮಗಳನ್ನು ಪಡೆಯುತ್ತವೆ ಎಂಬುದಕ್ಕೆ ಅಕ್ಕನವರ ಬದುಕು ಒಂದು ಉದಾಹರಣೆಯಾಗಿದೆ. ಪುರಾಣಗಳು ಕಲ್ಪನೆಯ ಕಥೆಗಳನ್ನೆ ದಿಟವೆಂದು ವೈಭವಿಸಿ ಉತ್ತೇಕ್ಷಿಸಿ ಕಥೆ ಕಟ್ಟಿದವು. ಇಂತಹ ಕಥೆಗಳು ಮುಗ್ಧಭಕ್ತರ ಮೇಲೆ ಅಪಾರ ಪ್ರಭಾವ ಬೀರಿದವು. ವಾಸ್ತವದಲ್ಲಿ ಅದನ್ನು ನಿಜವೆಂದು ಪಡೆಯಲು ಹೋದಾಗ ಅಪಾರ ಆಘಾತವೂ ವಿಷಣ್ಣತೆ ನಿರಾಸೆಗಳು ಉಂಟಾಗುತ್ತವೆ. ಇಂತಹ ಭಕ್ತಿಯ ಆರಂಭ ಈ ವಚನ. ಪ್ರಣಯಿಗಳು ನಲ್ಲ-ನಲ್ಲೆಯರ ವಿಚಾರ, ನೋಟ, ನಡೆನುಡಿ ಇವುಗಳನ್ನೆ ಕಾಣಲು ಮತ್ತೆ ಮತ್ತೆ ಬಯಸುತ್ತಾರೆ ಇಲ್ಲಿ ಅಕ್ಕಮಹಾದೇವಿಯವರು ಒಬ್ಬ ಸಾಮಾನ್ಯ ಮನುಷ್ಯನ

ಒಲುಮೆಯನ್ನು ಬಯಸಲಿಲ್ಲ. ಮಹಾರಾಜ ಬಂದರೂ ಬೇಡ. ಅವರು ಪರಮಾತ್ಮನೆ ಬೇಕು ಎಂದು ಇಷ್ಟಪಟ್ಟರು. ಆ ಭಕ್ತಿಯನ್ನು ಅವರು ನಡೆಸಿದರು. ಪರಮಾತ್ಮನದೆ ವಿಚಾರಗಳನ್ನು ಮತ್ತೆ ಮತ್ತೆ ಬಯಸುತ್ತಾರೆ. ಇಲ್ಲಿ ಭಕ್ತಿಪ್ರೀತಿ ವಿಕಳಾವಸ್ಥೆಯ ಹಂತ ತಲುಪಿದೆ. ಅಯ್ಯಾ ನಲ್ಲನೆ ನನ್ನ ಒಲುಮೆಯ ನುಡಿಯನ್ನು ಕೇಳು. ನೀನು ಕೇಳು ಬಿಡು. ನೀನು ನನ್ನ ದುಃಖವನ್ನು ನೋಡು ಬಿಡು. ನಾನು ನಿನ್ನನ್ನು ಪ್ರೀತಿಸಿದ್ದೇನೆ. ನನಗಿದು ಯಾವ ವಿಧಿ ನೀನು ನನ್ನನ್ನು ಒಲ್ಲದಿರ್ದರೆ ನಾನು ನಿನ್ನನ್ನು ಒಲಿಸುವ ದಾರಿ ಯಾವುದು.? ನಾನುಇಚ್ಛೆಪಟ್ಟಿದ್ದೆನೆ ಮೊರೆಹೊಕ್ಕಿದ್ದೇನೆ. ಪ್ರಾರ್ಥಿಸಿದ್ದೇನೆ. ನೀನು ನನ್ನನ್ನು ಸ್ವಿಕರಿಸುವ ದಾರಿಯಾದರೂ ಯಾವುದು.? ಇದು ಅವರ ಚಿಂತೆ.

18). ಅಯ್ಯಾನೀ ಕೇಳಿದರೆ ಕೇಳು. ಕೇಳದಿದ್ದರೆ ಮಾಣು.

ನಾ ನಿನ್ನ ಹಾಡಿದಲ್ಲದೆ ಸೈರಿಸಲಾರೆನಯ್ಯ.

ಅಯ್ಯಾ ನೀನೋಡಿದರೆ ನೋಡು. ನೋಡದಿದ್ದರೆ ಮಾಣು

ನಾ ನಿನ್ನ ನೋಡಿ ಹಿಗ್ಗಿ ಹಾರೈಸಿದಲ್ಲದೆ ಸೈರಿಸಲಾರನಯ್ಯ. ಆಯ್ಯ ನೀಮೆಚ್ಚಿದರೆ ಮೆಚ್ಚು. ಮೆಚ್ಚದಿದ್ದರೆ ಮಾಣು

ನಾ ನಿನ್ನ ಅಪ್ಪಿ ಮುದ್ದಾಡಿದಲ್ಲದೆ ಸೈರಿಸಲಾರೆನಯ್ಯ

ಅಯ್ಯಾ ನೀನೊಲಿದರೆ ಒಲಿ ಒಲಿಯದಿದ್ದರೆ ಮಾಣು

ನಾನಿನ್ನ ಒಲಿದು ಪೂಜಿಸಿದಲ್ಲದೆ ಸೈರಿಸಲಾರೆನಯ್ಯ.
ಚೆನ್ನಮಲ್ಲಿಕಾರ್ಜುನಯ್ಯನಾನಿಮ್ಮ ಪೂಜಿಸಿ

ಹರುಷದಲೋಲಾಡುವೆನಯ್ಯ.

ವಚನದ ಅರ್ಥ

ಅಯ್ಯಾ ನೀಕೇಳಿದರೆ ಕೇಳು ಕೇಳದಿದ್ದರೆ ಮಾಣು. ನಾ ನಿನ್ನ ಹಾಡಿದಲ್ಲದೆ ಸೈರಿಸಲಾರೆನಯ್ಯ. ಅಯ್ಯಾ ನೀ ಕೇಳು. ಬಿಡು. ನಾನು ನಿನ್ನನ್ನು ಹಾಡುತ್ತೇನೆ. ನಿನ್ನನ್ನು ಕುರಿತು ಹಾಡದೆ ನನಗೆ ಸಮಾಧಾನವಿಲ್ಲ. ಅಯ್ಯಾನೀ ನೋಡಿದರೆ ನೋಡು ನೋಡ ದಿದ್ದರೆ ಮಾಣು. ನಾನಿನ್ನ ನೋಡಿ ಹಿಗ್ಗಿ ಹಾರೈಸಿದಲ್ಲದೆ ಸೈರಿಸಲಾರೆನಯ್ಯ. ಅಯ್ಯಾ ನೀನು ನೋಡುವೆಯೊ ಬಿಡುವೆಯೊ? ನಾನಂತೂ ನಿನ್ನನ್ನು ನೋಡುತ್ತೇನೆ ನೋಡಿ ಹಿಗ್ಗಿ ಸಂತೋಷಿಸುತ್ತೇನೆ. ಅಯ್ಯಾ ನೀ ಮೆಚ್ಚಿದರೆ ಮೆಚ್ಚು ಮೆಚ್ಚದಿದ್ದರೆ ಮಾಣು ನಾ ನಿನ್ನ ಅಪ್ಪಿಮುದ್ದಾಡಿದಲ್ಲದೆ ಸೈರಿಸಲಾರೆನಯ್ಯಾ. ನೀನು ಮೆಚ್ಚು ವೆಯೊ ಬಿಡು

ವೆಯೊ ತಿಳಿಯದು. ನಾನಂತೂ ನಿನ್ನನ್ನು ಅಪ್ಪಿ ಮುದ್ದಾಡುತ್ತೇನೆ. ಕರಸ್ಥಲದ ಇಷ್ಟ

ಲಿಂಗವನ್ನು ಅವರು ಪರಿಪರಿಯಾಗಿ ಪೂಜಿಸಿ ಒಲಿದು ಹಾಡುತ್ತಿದ್ದಾರೆ. ಅಯ್ಯಾ

ನಿನೊಲಿದರೆ ಒಲಿ ಒಲಿಯದಿದ್ದರೆ ಮಾಣು ನಾ ನಿನ್ನ ಒಲಿದು ಪೂಜಿಸಿದಲ್ಲದೆ ಸೈರಿಸ

ಲಾರೆನಯ್ಯ. ನೀನು ನನಗೆ ಒಲಿಯುವಿಯೊ ಬಿಡುವೆಯೊ ನನಗೆ ತಿಳಿಯದು.

ನಾನಂತೂ ನಿನಗೆ ಒಲಿದಿದ್ದೇನೆ. ಇಷ್ಟಪಟ್ಟಿದ್ದೇನೆ. ನಿನ್ನನ್ನು ಒಲಿದು ಹಾಡುತ್ತೇನೆ. ಪೂಜೆ

ಸುತ್ತೇನೆ. ನಾನಿಮ್ಮ ಊಜಿಸಿ ಹರುಷದಲೋಲಾಡುವೆನಯ್ಯ. ನಾನು ನಿನ್ನನ್ನು ಸಂಭ್ರಮಹರ್ಷದಿಂದ ಪೂಜಿಸಿ ನಲಿದಾಡುತ್ತೇನೆ. ಅಕ್ಕಮಹಾದೇವಿಯವರು ತಮ್ಮ

ಒಲವು, ಭಕ್ತಿಯನ್ನು ಈವಚನದಲ್ಲಿ ಅಭಿವ್ಯಕ್ತಿಸಿದ್ದಾರೆ. ಆತನನ್ನೆ ಪತಿಯನ್ನಾಗಿ ಪಡೆ

ಯುವ ಹಂಬಲದಲ್ಲಿ ಆನಂತಭಕ್ತಿ ಮಾಡಿದ್ದಾರೆ. ಈ ಭಕ್ತಿ ಅವರಿಗೆ ಪ್ರೀತಿ. ಹಾಡಿದಷ್ಟೂ ಭಕ್ತಿ. ನೆನೆದಷ್ಟೂ ಒಲವು. ಆತನ ಪ್ರೀತಿಗಾಗಿ ಎಂತಹ ಕಠಿನ ಭಕ್ತಿ ಮಾಡಲೂ

ಅವರು ಸಿದ್ದರಿದ್ದಾರೆ. ಆದರೆ ನಿರಾಕಾರ ಪರಮಾತ್ಮನು ಸಾಕಾರನಾಗಿ ಲಗ್ನ ವಾಗಲು

ದೊರೆಯುವುದಿಲ್ಲ ಎಂಬುದು, ಆಗ ಅವರಿಗೆ ತಿಳಿದಿರಲಿಲ್ಲ. ಈ

ಮುಗ್ದ ಮನಸಿನ ಆ ಪ್ರೀತಿಯಿಂದ ಅವರು ಜೀವನದಲ್ಲಿ ಏನೆಲ್ಲ ಕಷ್ಟ ಎದುರಿಸಬೇಕಾಯಿತು. ಅವರು ಇಷ್ಟಲಿಂಗ ಭಕ್ತಿಯಲ್ಲಿ ತಲ್ಲೀನರಾಗಿಬಿಟ್ಟಿದ್ದಾರೆ. ಅವರ ಭಕ್ತಿ ತನ್ಮಯತೆ

ಅಮೋಘವಾದುದು. ಅವರ ಪ್ರೀತಿ ಕೊಡುವಂಥದ್ದು. ಪಡೆಯುವ ನಿರೀಕ್ಷೆಯೂ ಅವರಲ್ಲಿ ಅಪಾರವಾಗಿದೆ. ಈಗ ಅವರ ಭಕ್ತಿ ಏಕಮುಖವಾಗಿಯೆ ನಡೆದಿದೆ. ದಿವ್ಯ ಮೌನ

ಅವರಲ್ಲಿ ಭಕ್ತಿಯನ್ನು ಅಧಿಕ ಗೊಳಿಸುತ್ತ ಹೋಗುತ್ತಿದೆ. ವಚನದ ಧಾಟಿಯೆ ಅಮೋಘ.

ಅವರು ಹಾಡುತ್ತಾರೆ ಅವನು ಕೇಳುವನೊಬಿಡುವನೊ. ಅಕ್ಕ ಮನದುಂಬಿ ಹಾಡುತಾರೆ. ಅವನು ನೋಡಲಿ ಬಿಡಲಿ ಇವರು ಇಷ್ಟಲಿಂಗ ಭಕ್ತಿಯಲ್ಲಿ ನಿರತರಾಗುತ್ತಾರೆ.

ಆ ನೋಟದಲ್ಲಿ ಹಿಗ್ಗಿದೆ. ಪ್ರೀತಿಯಿದೆ. ಒಲವಿದೆ ಭಕ್ತಿಯಿದೆ. ಉತ್ಸಾಹವಿದೆ. ಆತ ಮೆಚ್ಚಲಿ ಬಿಡಲಿ, ಇವರು ಇಷ್ಟಲಿಂಗವನ್ನು ಅಪ್ಪಿ ಮುದ್ದಾಡುತ್ತಾರೆ. ಅವನು ಒಲಿವನೊ ಬಿಡುವನೊ ಇವರಂತೂ ಒಲಿದು ಹಾಡುತ್ತಾರೆ. ಪೂಜೆ, ಭಕ್ತಿ, ಸಡಗರ

ಅವರಲ್ಲಿ ಅಪೂರ್ವವಾಗಿದೆ. ಮಹಾದೇವಿಯಕ್ಕನವರ ಒಲವು ಭಕ್ತಿಯಾಗಿ ಪ್ರೇಮವಾಗಿ, ಪರಮಾತ್ಮ ಎಂದರೆ ಏನೆಂದು ಅರಿವಾದಾಗ, ವೈರಾಗ್ಯವಾಗಿ ವಿಷಾದವಾಗಿ ಅವರ ಅನುಭಾವ ಜೀವನ ವಿಭಿನ್ನ ಆಯಾಮಗಳನ್ನು ಪಡೆಯಿತು.

19) ಅಷ್ಟದಳ ಕಮಲದ ಅತ್ಮನೊಳಗೆ ಸೃಷ್ಟಿ ಜನಿಸಿ

ಕೂರ್ಮ, ದಿಗ್ದಂತಿ ದಿಳಯವನುಂಗಿ

ನಿಜಶೂನ್ಯ ತಾನಾದ ಬಳಿಕ ತನ್ನ ತಾನರಿದ ನಿಜಪದ

ಭಿನ್ನಯೋಗಕ್ಕೆ ಬಹುದೆ? ಕಂಗಳನೋಟದಲ್ಲಿ

ಮನದ ಸೊಗಸಿನಲ್ಲಿ ಅನಂಗನ ಧಾಳಿಯನಗಲಿದೆವಣ್ಣ?

ಮರೀಚಿಕಾಜಲದೊಳಡಗಿದ ಪ್ರಾಣಿ ವ್ಯಾಧನ ಬಲೆಯೊಳಗಹುದೆ?

ಎನ್ನದೇವ ಚೆನ್ನಮಲ್ಲಿಕಾರ್ಜುನನಲ್ಲದೆ ಪರಪುರುಷರು ನಮಗಾಗದಣ್ಣ.

ಪದಗಳ ಅರ್ಥ

ಕೂರ್ಮ-ಆಮೆ,

ದಿಗ್ದಂತಿ-ಅಷ್ಟದಿಕ್ಕುಗಳು ಹೊತ್ತ ಆನೆ.

ದಂತಿ-ಆನೆ,

ನಿಜಶೂನ್ಯ-ಬಯಲು ಪದವಿ,

ಮರೀಚಿಕಾಜಲ-ಭ್ರಮೆಯ ನೀರು.

ವ್ಯಾಧ-ಬೇಟೆಗಾರ.

ವಚನದ ಅರ್ಥ

ಅಷ್ಟದಳಕಮಲದ ಆತ್ಮನೊಳಗೆ ಸೃಷ್ಟಿ ಜನಿಸಿಕೂರ್ಮ ದಿಗ್ದಂತಿ ದಿಗ್ಳಯವನುಂಗಿ ನಿಜಶೂನ್ಯ ತಾನಾದ ಬಳಿಕ, ಎಂಟುದಳಕಮಲದ ಆತ್ಮನಲ್ಲಿ ಸೃಷ್ಟಿಜನಿಸಿತು.

ಆನೆಮತ್ತು ದಿಕ್ಕುಗಳೆಂಬ ಆನೆಗಳು ಬಯಲನ್ನೆಲ್ಲ ನುಂಗಿ ತಾವು ಬಯಲಾದವು.

ತನ್ನ ತಾನರಿದ ನಿಜಪದ ಭಿನ್ನಯೋಗಕ್ಕೆ ಬಹುದೆ? ತನ್ನನ್ನು ತಾನರಿತುಕೊಂಡ ನೆಲೆಸ್ಥಾನಗಳು ಇನ್ನೊಂದು ಯೋಗಕ್ಕೆ ಸಾಧ್ಯವಾಗುವುದಿಲ್ಲ. ಕಂಗಳ ನೋಟದಲ್ಲಿ ಮನದ

ಸೊಗಸಿನಲ್ಲಿ ಅನಂಗನ ಧಾಳಿಯನಗಲಿದೆವಣ್ಣ. ಯಾರು ಕಂಗಳಲ್ಲಿ ಮನಸ್ಸಿನಲ್ಲಿ ನನ್ನ ಚೆಲುವನ್ನು ನೋಡಿ ಕಾಮಾಸಕ್ತರಾಗುವರೋ ಅಂತಹ ಅನಂಗನ ಧಾಳಿಯನ್ನು ಹಿಂದೆಯೆ ಅಗಲಿ ದೂರ ಬಂದಿದ್ದೇವೆ. ಮರೀಚಿಕಾಜಲದೊಳಡಗಿದ ಪ್ರಾಣಿ ವ್ಯಾಧನ

ಬಲೆಯೊಳಗಹುದೆ? ಬಿಸಿಲಮರೀಚಿಕೆಯೊಳಗೆ ಅಡಗಿರುವ ಪ್ರಾಣಿ ಎಂದಾದರೂ

ಬೇಡನ ಬಲೆಗೆ ಸಿಗಲು ಸಾಧ್ಯವೆ? ಇಲ್ಲ. ಎನ್ನ ದೇವ ಚೆನ್ನಮಲ್ಲಿಕಾರ್ಜುನನಲ್ಲದೆ

ಪರಪುರುಷರು ನಮಗಾಗದಣ್ಣ ಚೆನ್ನಮಲ್ಲಿಕಾರ್ಜುನ ನನ್ನ ಗಂಡ. ಪರಪುರುಷರು

ನಮಗಾಗದು. ಅಪಾರ ಚೆಲುವಿನ ರೂಪರಾಶಿ ಅಕ್ಕಮಹಾದೇವಿಯವರದು. ತುಂಬು ತಾರುಣ್ಯ ಬೇರೆ. ಎಂತಹವರಿಗೂ ನಾನು ಲಗ್ನಮಾಡಿಕೊಳ್ಳಬೇಕು ಎಂಬ ಆಶೆ ಉಂಟಾಗಿಬಿಡುತಿತ್ತು. ಕೆಲವರು ಹೊಸದಾಗಿ ಶರಣ ಜೀವನಕ್ಕೆ ಬಂದವರೂ ಇವರನ್ನು ಲಗ್ನ ಮಾಡಿಕೊಳ್ಳಬೇಕೆಂಬ ಆವಿಚಾರಕ್ಕೆ ಒಳಗಾಗುತ್ತಿದ್ದರು. ಇಂತಹ ಎಲ್ಲ ಅವಿಚಾರದವರಿಗೆ ಮಾರುತ್ತರ ಈ ವಚನ. ಅಷ್ಟದಳಕಮಲದ ಆತ್ಮನೊಳಗೆ ಸೃಷ್ಟಿ ಜನಿಸಿಎಂಟುದಳದ ಕಮಲದಲ್ಲಿ ಆತ್ಮನು ಹುಟ್ಟಿದನು. ಕೂರ್ಮ ದಿಗ್ದಂತಿ

ದಿಗ್ವಳಯವನುಂಗಿ ಈ ಆತ್ಮನು ದಿಕ್ಕುಗಳನ್ನು ಹೊತ್ತ ಆಮೆ, ಆನೆ, ದಿಕ್ಕುಗಳನ್ನು ಮೀರಿದನು. ದೇಹವನ್ನು ಆಶ್ರಯಿಸಿ ದೇಹವನ್ನು ಮೀರಿದನು. ನಿಶೂನ್ಯ ತಾನಾದ ಬಳಿಕ ತಾನು ಬಯಲು ಪದವಿ ಹೊಂದಿದ ಮೇಲೆ, ತನ್ನ ತಾನರಿದ

ನಿಜಪದ - ನಾನು ದೇಹ ಜನಿಸಿ ಬಂದೆನು. ದೇಹ ನಾನಲ್ಲ. ಇಂತಹ ದೇಹ,

ಜೀವಜಾಲದೊಳಗಿರುವ ಪ್ರಾಣಚೈತನ್ಯನು ನಾನು. ಭಿನ್ನ ಯೋಗಕ್ಕೆ ಬಹುದೆ?

ಈ ನಿಲವನ್ನು ಹೊಂದಿದ ಮೇಲೆ ಮತ್ತೆ ಲೌಕಿಕದ ಜೀವನಕ್ಕೆ ಮರಳುತ್ತೇನೆಯೆ?

ಅದು ಎಂದಿಗೂ ಸಾಧ್ಯವಿಲ್ಲದ ಮಾತು. ಕಂಗಳ ನೋಟದಲ್ಲಿ ಮನದ ಸೊಗಸಿ

ನಲ್ಲಿ ಅನಂಗನ ಧಾಳಿಯನಗಲಿದೆವಣ್ಣ. ಕಣ್ಣಿಗೆಚೆಲುವು ರೂಪ ಇಷ್ಟ, ಮನಸ್ಸಿಗೆ

ಅನಂಗನ ಧಾಳಿಯನ್ನು ಪರಾಭವ ಗೊಳಿಸಿದ್ದೇನೆ. ಈಗ ಕಾಮನೇ ನನ್ನ ಇದುರಿಗೆ ಬರಲು ಹೆದರುತ್ತಾನೆ. ಹೀಗಿರುವಾಗ ಮರೀಚಿಕಾಜಲದೊಳಗಿರುವ ಪ್ರಾಣಿ ವ್ಯಾಧನ ಬಲೆಯೊಳಗಹುದೆ? ಭ್ರಮೆ, ಕಲ್ಪನೆಯ ನೀರಿನೊಳಗಿರುವ ಜಲಚರವು ಜಾಲಗಾರನ ಬಲೆಗೆ ಸಿಲುಕುವುದೆ? ಎಂದಿಗೂ ಇಲ್ಲ. ಈ ರೂಪಕವಂತೂ ಧ್ವನಿಪೂರ್ಣವಾಗಿದೆ. ಇಲ್ಲದಿರುವ ಜಲಚರ ನೀರಿನಲ್ಲಿ ಅವಿತುಕೊಂಡಿದೆ. ಇಂತಹ ಜಲಚರವು ಬಲೆಗೆ ಸಿಗುವುದಾದರೂ ಹೇಗೆ? ರಾಗಭೋ ಗಗಳನ್ನು ಗೆದ್ದು ನಿಜಾನಂದದಲ್ಲಿ ಲೀನವಾದ ಮಹಾದೇವಿಯಕ್ಕನವರನ್ನು ರಾಗಭೋಗಾದಿಗಳಿಗೆ ಕರೆಯಬಹುದೆ? ಚೆನ್ನಮಲ್ಲಿಕಾರ್ಜುನನಲ್ಲದೆ ಪರಪುರುಷರು ನಮಗಾಗದಣ್ಣ. ಪರಮಾತ್ಮನೆ ಪತಿಯಾಗಿಅನುಭಾವ ಜೀವನ ನಡೆಸಬೇಕೆಂಬ ಹಂಬಲದ ಅಕ್ಕ ಮಹಾದೇವಿಯವರಿಗೆ ಮತ್ತೆ ಮತ್ತೆ ಇಂತಹ ಕಠಿನ ಪ್ರಸಂಗಗಳು ಎದುರಾಗುತ್ತಿದ್ದವು. ಇದರಿಂದ ಅವರ ವೈರಾಗ್ಯವು ಮತ್ತಷ್ಟು ದೃಢವಾಯಿತು.

**20) ಅರಿಯದವರೊಡನೆ ಸಂಗವ ಮಾಡಿದರೆ**

**ಕಲ್ಲ ಹೊಯ್ದು ಕಿಡಿಯ ಕೊಂಬಂತೆ.**

**ಬಲ್ಲವರೊಡನೆ ಸಂಗವ ಮಾಡಿದರೆ**

**ಮೊಸರ ಹೊಸೆದು ಬೆಣ್ಣೆಯ ಕೊಂಬಂತೆ ಚೆನ್ನಮಲ್ಲಿಕಾರ್ಜುನಯ್ಯ ನಿಮ್ಮ ಶರಣರ ಸಂಗ**

**ಕರ್ಪೂರದ ಗಿರಿಯ ಉರಿಕೊಂಬಂತೆ.**

ಈವಚನದಲ್ಲಿ ಮೂರು ಚಿತ್ರಗಳಿವೆ.1. ತಿಳಿವಳಿಕೆ ಇಲ್ಲದವರ ಒಡನಾಟ. 2.ಬಲ್ಲವರ ಒಡ ನಾಟ.3. ಶರಣರ ಸಂಗ ಅದರ ಪರಿಣಾಮ. ಅಜ್ಞಾನಿಗಳ ಒಡನಾಟ ಕಲ್ಲು ಕಲ್ಲು ತಿಕ್ಕಿ ಕಿಡಿಯನ್ನು ತಂದುಕೊಂಡಂತಾಗುತ್ತದೆ. ಕಿಡಿ ನಮ್ಮನ್ನು ಸುಟ್ಟು ಊರನ್ನೂ ಸುಡು ತದೆ. ಕಲ್ಲು ಕಲ್ಲು ಘಟ್ಟಣೆಯಲ್ಲಿ ಕಲ್ಲು ಹೊಡೆದು ಹಿಡಿದ ನಮ್ಮ ಕೈಗೆ ಯಾವ ಅಪಾಯ ಬೇಕಾದರೂ ಆಗಬಹುದು. ತಿಳಿದವರ ಜೊತೆ ಒಡನಾಡಿದರೆ ಮೊಸ ರನ್ನು ಕಡೆದರೆ ಹೇಗೆ ಬೆಣ್ಣೆ ಬರುವುದೊ? ಹಾಗೆ ನಮ್ಮ ಬಾಳಿಗೆ ಪರಿಮಳವಾಗುವ

ದೇಹ ಗಟ್ಟಿಯಾಗುವ ಸುಂದರ ತಿಳಿವಳಿಕೆಗಳು ವಿವೇಕ, ಸನ್ನಡತೆ ನಮಗೆ ಬರು ತ್ತದೆ. ಮಹಾತ್ಮರ ಒಡನಾಟ ಮಾಡಿದರೆ, ಕರ್ಪೂರವು ಉರಿಯಲ್ಲಿ ಅಡಗಿದಂತೆ ಆಗುತ್ತದೆ. ನಮ್ಮ ತಪ್ಪುಗಳೆಲ್ಲವೂನಾಶವಾಗುತ್ತವೆ. ನಾವು ಪೂರ್ಣರಾಗುತ್ತೇವೆ ಇಲ್ಲಿರುವ ಮೂರು ಚಿತ್ರಗಳು ನಮ್ಮನಿತ್ಯ ಜೀವನದಲ್ಲಿ ಕಾಣುವ ಚಿತ್ರಗಳೆ ಆಗಿವೆ. ಜನಸಾಮಾನ್ಯರ ಜೀವನವನ್ನೆ ದೃಷ್ಟಾಂತವಾಗಿ ಬಳಸಿಕೊಂಡು ಉಪದೇಶಿಸಿದ್ದಾರೆ.

**21) ಅಯ್ಯ ಕತ್ತಲೆಯ ಕಳೆದುಳಿದ**

**ಸತ್ಯ ಶರಣರ ಪರಿ ಏನೆಂಬೆನಯ್ಯ?**

**ಘನವನೊಳಕೊಂಡ ಮಹಾನುಭಾವಿಗಳ**

**ಬಳಿವಿಡಿದು ಬದುಕುವೆನಯ್ಯ.**

**ಅಯ್ಯ ನಿನ್ನಲ್ಲಿ ನಿಂದು ಬೇರೊಂದರಿಯದ**

ಲಿಂಗಸುಖಗಳ ಸಂಗದಲ್ಲಿ ದಿನಂಗಳ ಕಳೆಯಿಸಯ್ಯ.

ಚೆನ್ನಮಲ್ಲಿಕಾರ್ಜುನಾ.

ವಚನದ ಅರ್ಥ

(ಶ್ರೀ ಶೈಲದಲ್ಲಿ ಗುಹೆಯಲ್ಲಿ ತಪಸ್ಸನ್ನು ಮಾಡುವಾಗ

ಸಂದರ್ಭದಲ್ಲಿ ಶ್ರೀ ಶೈಲದಲ್ಲಿ ತುಂಬ ಶರಣರು ಮಹಾನ್ ಯೋಗಿಗಳು ಘೊರಿಗಳು ಅಕ್ಕಮಹಾದೇವಿಯವರ ಕಣ್ಣಿಗೆ ಕಣಿಸಿದ್ದರೆ)

ಅಯ್ಯ ಕತ್ತಲೆಯ ಕಳೆದುಳಿದ ಸತ್ಯ ಶರಣರ) ಪರಿಯನೆಣೆಂಬೆನಯ್ಯ? ಕತ್ತಲೆಯನ್ನು ದೂರಮಾಡಿ ಬದುಕುತ್ತಿರುವ ಶರಣರ ರೀತಿಯನ್ನು ಏನೆಂದು ಹೇಳಲಿ. ಘನವನೊಳಕೊಂಡ ಮನದ ಮಹಾನುಭಾವಿಗಳ ಬಳಿವಿಡಿದು ಬದುಕುವೆ ನಯ್ಯ. ಪರಮಾತ್ಮನ ವಿಚಾರಗಳನ್ನೆ ಮನಸ್ಸಿನ ತುಂಬ ತುಂಬಿಕೊಂಡ ಮಹಾನು ಎದ ಭಾವಿಗಳಾದ ಶರಣರ ಹತ್ತಿರವಿದ್ದು ಬದುಕುವಂತೆ ಮಾಡಯ್ಯ ನಿನ್ನಲ್ಲಿ ನಿಂದು ಬೇರೊಂದರಿಯದ ಲಿಂಗಸುಖಿಗಳ ಸಂಗದಲ್ಲಿ ದಿನಂಗಳ ಕಳೆವೆನಯ್ಯ. ಯಾರು ನಿನ್ನನ್ನೆ ಮನದಲ್ಲಿ ತುಂಬಿಕೊಂಡು ಪರಮಾನಂದದಲ್ಲಿರುವರೊ ಅವರ ಸಾನ್ನಿಧ್ಯದಲ್ಲಿದ್ದು ದಿನಗಳನ್ನು ಕಳೆಯುತ್ತೇನೆ. ಸತ್ಯ ಸಾಕ್ಷಾತ್ಕಾರ ಮಾಡಿಕೊಂಡ ಅಕ್ಕ ಮಹಾದೇವಿ ಯವರು, ಈವಚನದಲ್ಲಿಯೂ, ಶರಣರ, ಮಹಾತ್ಮರ, ಜ್ಞಾನಿಗಳ ಶ್ರೇಷ್ಠತೆಯನ್ನು ಕೊಂಡಾಡಿದ್ದಾರೆ. ಕತ್ತಲೆಯು ಮನುಷ್ಯನ ಜೀವನವನ್ನು ಬಹು ಘೋರವೂ ದುಃಖ ಮಯವೂ ಮಾಡುತ್ತದೆ. ಕ್ಷುಲ್ಲಕ ವಿಷಯಗಳನ್ನು ತಲೆಗೆ ತುಂಬಿಕೊಂಡು, ಬೇಡದ • ವಿಷಯಗಳಲ್ಲಿ ಕಾಲಯಾಪನೆ ಮಾಡುವ ಮನುಷ್ಯನು ಆಯುಷ್ಯವನ್ನೆ ಕಳೆದು ಬಿಡುತ್ತಾನೆ. ಬೆಳಕು ಮತ್ತು ಅನಂದದ ಅರಿವಿಲ್ಲದೆ, ಹಸಿವು, ತೃಷೆ, ವಿಷಯಾದಿಗಳಲ್ಲಿ ರಮಿಸುತ್ತ ಆಯುಷ್ಯವನ್ನು, ಜನ್ಮ ಜನ್ಮಗಳನ್ನೂ ಕಳೆಯುತ್ತಲೆ ಬಂದಿದ್ದಾನೆ. ಈಎಲ್ಲ ಪರಿಭವವನ್ನು

ಹೋಗಲಾಡಿಸುವುದು ಅರಿವು, ಜ್ಞಾನ.

ಇದನ್ನು ಶರಣರು ನಮಗೆ ನೀಡುತ್ತಾರೆ. ಈಎಲ್ಲ ಪರಿಭವವನ್ನು ಹೋಗಲಾಡಿಸುವುದು ಅರಿವು, ಜ್ಞಾನ. ಇದನ್ನು ಶರಣರು ನಮಗೆ ನೀಡುತ್ತಾರೆ.

22) ಅರಿದೆನೆಂದರೆ ಅರಿಯಬಾರದು ನೋಡಾ.

ಘನಕ್ಕೆ ಘನ ತಾನೆ ನೋಡಾ.

ಚೆನ್ನ ಮಲ್ಲಿಕಾರ್ಜುನನ ನಿರ್ಣಯವಿಲ್ಲದೆ ಸೋತೆನು.

ಪದಗಳ ಅರ್ಥ

ಘನ-ಪರಬ್ರಹ್ಮ, ನಿರ್ಣಯ-ಖಚಿತಜ್ಞಾನ, ತಿಳಿವಳಿಕೆ,

ವಚನದ ಅರ್ಥ

ನಾನು ತಿಳಿಯುತ್ತೇನೆಂದರೆ ತಿಳಿಯಲು ಬರುತ್ತಿಲ್ಲ. ಆತನು ದೇವರು, ಪರಬ್ರಹ್ಮ. ತಾನು ತಾನಾದ ಚೆನ್ನಮಲ್ಲಿಕಾರ್ಜುನ ದೇವರು. ಅಂದರೆ ಏನು? ಅದು ಹೆಣ್ಣೆ ಗಂಟೆ? ರೂಪೆ? ಅರೂಪೆ? ತ್ರಿಶೂಲಧಾರಿಯೆ? ಒಂದು ಖಚಿತ ತಿಳಿವಳಿಕೆ ಇಲ್ಲದೆ ಹೋಯಿತು. ಇಲ್ಲಿದೇವರ ಬಗೆಗೆ ಚಿಂತನೆ ನಡೆದಿದೆ. ಬಿಲಯುತ್ತವಿ. ಜನ್ನಮಲ್ಲೀ ರಾಜು ೯ನೇನೆನ್ನು

ಕಾಣಬೇಕೆಂಬ ಹಂಬಲ ಅಧಿಕವಾಗುತ್ತಿದೆ. ೫೯. ಅರಿದೆನೆಂದರೆ ಅರಿಯಬಾರದು ನೋಡಾ.

ಘನಕ್ಕೆ ಘನ ತಾನೆ ನೋಡಾ. ಚೆನ್ನ ಮಲ್ಲಿಕಾರ್ಜುನನ ನಿರ್ಣಯವಿಲ್ಲದೆ ಸೋತೆನು.

ಘನ-ಪರಬ್ರಹ್ಮ, ನಿರ್ಣಯ-ಖಚಿತಜ್ಞಾನ, ತಿಳಿವಳಿಕೆ, ನಾನು ತಿಳಿಯುತ್ತೇನೆಂದರೆ ತಿಳಿಯಲು ಬರುತ್ತಿಲ್ಲ. ಆತನು ದೇವರು, ಪರಬ್ರಹ್ಮ. ತಾನು ತಾನಾದ ಚೆನ್ನಮಲ್ಲಿಕಾರ್ಜುನ ದೇವರು. ಅಂದರೆ ಏನು? ಅದು ಹೆಣ್ಣೆ ಗಂಟೆ? ರೂಪೆ? ಅರೂಪೆ? ತ್ರಿಶೂಲಧಾರಿಯೆ? ಒಂದು ಖಚಿತ ತಿಳಿವಳಿಕೆ ಇಲ್ಲದೆ ಹೋಯಿತು. ಇಲ್ಲಿದೇವರ ಬಗೆಗೆ ಚಿಂತನೆ ನಡೆದಿದೆ.

23)ಅಕ್ಕಿಯಿಲ್ಲದ ತುಷಕ್ಕೆ ಆಗ್ಗವಣಿಯನೆರೆದಡೆ ಅದೆಂದಿಂಗೆ ಬೆಳೆದು ಫಲವಪ್ಪುದಯ್ಯ? ಅರಿವಿಲ್ಲದವರಿಗೆ ಆಚಾರವಿದ್ದಡೆ

ಅರಕೆಗೆಟ್ಟು ಸುಖವೆಂದಪ್ಪುದಯ್ಯ?

ಹೊರೆದ ಪರಿಮಳ ಸ್ಥಿರವಾಗಬಲ್ಲುದೆ?
ಎನ್ನದೇವಚೆನ್ನಮಲ್ಲಿಕಾರ್ಜುನನನರಿಯದವರಿಗೆ ಆಚಾರವಿಲ್ಲ ಕಾಣಿರಣ್ಣ.

ಪದಗಳ ಅರ್ಥ

ತುಷ-ಜೊಳ್ಳು ಬತ್ತ,

ಆಗವಣಿ-ಪೂಜಾನೀರು

ಫಲ -ಫಸಲು

ಅರಕೆಗೆಟ್ಟು-ತಿಳಿವು ಹೋದವರಿಗೆ,

ವಚನದ ಅರ್ಥ

ಈವಚನದಲ್ಲಿ ಆಚಾರ, ವಿಚಾರ, ಆನಂದದ ಚರ್ಚೆ ನಡೆದಿದೆ. ಈವಚನದಲ್ಲಿ ಮೂರು ಉಪಮೆಗಳಿವೆ. ಭಕ್ತಿ ಜೀವನದಲ್ಲಿ ಮೊದಲು ಅರಿವು ಬೇಕು. ನಂತರ ಆಚಾರವೂಬೇಕು. ಮೊದಲನೆ ಉಪಮೆ ತುಂಬ ಸುಂದರವಾಗಿದೆ. ಅಕ್ಕಿಯಿಲ್ಲದ ತುಷಕ್ಕೆ ಅಗ್ಗವಣಿಯನೆರೆದಡೆ ಅದೆಂದಿಂಗೆ ಬೆಳೆದು ಫಲವಪ್ಪುದಯ್ಯ? ಭತ್ತದಲ್ಲಿ ಎರಡು ವಸ್ತುಗಳಿವೆ. ಹೊರಗಿನ ಸಿಪ್ಪೆಮತ್ತು

ಒಳಗಿನ ತಿರುಳು. ಹೊರಗಿನ ಸಿಪ್ಪೆಯು ಆಚಾ ರವಿದ್ದಂತೆ ಒಳಗಿನ ತಿರುಳು, ಅಕ್ಕಿ ಅರಿವಿದ್ದಂತೆ. ಬತ್ತದತಳಿಯಲ್ಲಿ ಹೊರಗಿನ ಹೊಟ್ಟೂ ಬೇಕು. ಒಳಗಿನ ತಿರುಳು, ಅಕ್ಕಿಯೂ ಬೇಕು. ಆಗ ಅದು ಮೊಳಕೆ ಒಡೆದು ಫಸಲು ಕೊಡುವ ಬೆಳೆಯಾಗುವುದು. ಅರಿವಿಲ್ಲದವರಿಗೆ ಆಚಾರವಿದ್ದಡೆ ಅರಕೆಗೆಟ್ಟು ಸುಖವೆಂದ ಪ್ಪುದಯ್ಯ? ಲೋಕದ ಜನರು ಭಕ್ತಿ ಮಾಡುತ್ತಾರೆ. ಆದರೆ ಆಭಕ್ತಿಯ ಪಥದ ಸರಿ ತಪ್ಪು ಅರಿವಿರುವುದಿಲ್ಲ. ಒಂದು ಊರು ತಲುಪಲು ದಾರಿ ಹಿಡಿದು ಹೊರಟಿದ್ದಾರೆ. ಆದರೆ ಆದಾರಿ ಎಲ್ಲಿಗೆ ಕರೆದುಕೊಂಡು ಹೋಗುತ್ತದೆ ಎಂದು ಗೊತ್ತಿಲ್ಲ. ಮನುಷ್ಯನಿಗೆ ಸದಾಚಾರ ಬೇಕುನಿಜ. ಅದರ ಜೊತೆಗೆ ಅರಿವೂ ಬೇಕು. ಆಚಾರ ವಿದ್ದು ಅರಿವಿಲ್ಲದಿದ್ದರೆ ಫಲ ಇಲ್ಲ. ಇಂದು ಬಹುಪಾಲು ಜನರ ಭಕ್ತಿಯು ಅರಿವಿ ಲ್ಲದ ಭಕ್ತಿಯೆ ಆಗಿದೆ. ದೇವರು ಯಾರು ಏನು? ಭಕ್ತಿಯ ಉದ್ದೇಶ ಏನು? ಎನ್ನು ವ ತಿಳಿವಳಿಕೆ ಬೇಕು. ಅಕ್ಕ ಪರಮಾತ್ಮನನ್ನು ಗಂಡನನ್ನಾಗಿ ಪಡೆಯಬೇಕೆಂದು ಹೊರಟರು. ಶಿವೆ, ಶಿವನನ್ನು ಪಡೆದಂತೆ ಪಡೆಯಬಹುದೆಂದು ಭಾವಿಸಿದ್ದರು. ಆದರೆ ಅದು ಕಥೆ ಅಷ್ಟೆ. ಜನ ಇಂತಹ ಕಥೆಗಳನ್ನೆ ನಿಜ ಎಂದು ನಂಬಿದ್ದಾರೆ ಇದು ಸತ್ಯದೂರ ವಾದ ಕಥೆ ಎಂದು ನಂತರ ತಿಳಿಯಿತು. ಬಿರಿದ ಪರಿಮಳ ಸ್ಥಿರವಾಗಬಲ್ಲುದೆ? ಹೂವು ಅರಳಿಪರಿಮಳ ಚೆಲ್ಲುತ್ತದೆ. ಈಪರಿಮಳ ಹಚ್ಚೆಂದರೆ ಒಂದು ದಿನ ಇರುತ್ತದೆ. ಹೂ ಬಾಡುತ್ತದೆ. ಚೆನ್ನಮಲ್ಲಿಕಾರ್ಜುನನರಿಯದವರಿಗೆ ಆಚಾರವಿಲ್ಲಕಾಣಿರಣ್ಣ. ಚೆನ್ನಮಲ್ಲಿ ಕಾರ್ಜುನನನ್ನು ಯಾರು ತಿಳಿದಿಲ್ಲ. ಅವರಿಗೆ ಆಚಾರವೂ ಇಲ್ಲ. ಆಚಾರ ಅರಿವಿನಿಂದ ಕೂಡಿದಾಗಲೆ ಭಕ್ತಿ ಪೂರ್ಣವಾಗುವುದು.

24) ಅಯ್ಯಾ ಶ್ರೀಪಾದವಿತ್ತಿತ್ತ ಪಾತಾಳವತ್ತತ್ತ

ದಶದಿಕ್ಕು ಇತ್ತಿತ್ತ ದಶಭುಜಂಗಳತ್ತತ್ತ

ಬ್ರಹ್ಮಾಂಡವಿತ್ತಿತ್ತ ಮಣಿಮಕುಟವತ್ತತ್ತ ಚೆನ್ನಮಲ್ಲಿಕಾರ್ಜುನಯ್ಯ ನೀವೆನ್ನ

ಕರಸ್ಥಲಕ್ಕೆ ಬಂದು ಚುಳುಕಾದಿರಲ್ಲ.

ಪದಗಳ ಅರ್ಥ

ಪಾತಾಳ-ಕೆಳಗಿನ ಏಳನೇಲೋಕ (ಪುರಾಣದ ನಂಬಿಕೆ) ಶ್ರೀಪಾದ-ಪರಮಾತ್ಮನ ಅಗೋಚರ ಪಾದ.

ದಶದಿಕ್ಕು-ಹತ್ತು ದಿಕ್ಕುಗಳು. ದಶಭುಜ-ಹತ್ತುಭುಜಗಳು.

ಬ್ರಹ್ಮಾಂಡ-ಸಚರಾಚರ ಜಗತ್ತನ್ನು ಮೀರಿದಾಕಾಶ, ಮಣಿಮಕುಟ-ರುದ್ರಾಕ್ಷ ಧಾರಣಮುಡಿ, ಶಿರ, ಚುಳುಕು-ನಿರಾಕಾರ ಸ್ವರೂಪದ ಸಾಕಾರ ರೂಪ, ಇಷ್ಟಲಿಂಗ.

ವಚನದ ಅರ್ಥ

ಅಯ್ಯಾ ಪಾತಾಳವಿತ್ತಿತ್ತ ಶ್ರೀಪಾದವತ್ತು. ನಿನ್ನ ಪಾದ ಗಳು ಎಷ್ಟು ಅವ್ಯಕ್ತ ಅಗೋಚರ ಎಂದರೆ ಅತಿ ಕೆಳಗೆ ಇರುವ ಪಾತಾಳ ಕೂಡ ಇತ್ತಿತ್ತ ಇದೆ. ಅಂದರೆ ನಿನ್ನ ಪಾದಗಳು

ಪಾತಾಳಕ್ಕಿಂತ ಆಚೆ, ಕಾಣದಂತೆ ಅತ್ತ ದೂರ ಇವೆ. ನಾವು ಕಾಣಲಾರೆವು. ಬ್ರಹ್ಮಾಂಡ ವಿತ್ತಿತ್ತ ಮಣಿಮಕುಟವತ್ತು ಮಣಿ ಎಂದರೆ ರುದ್ರಾಕ್ಷ ಮಕುಟ ಎಂದರೆ ಕಿರೀಟ. ರುದ್ರಾಕ್ಷ ಧಾರಣವಾದ ನಿನ್ನ ಶಿರವು ಬ್ರಹ್ಮಾಂಡದಿಂದಾಚೆ

ಇದೆ. ಸೂರ್ಯ ಮಂಡಲ, ನಕ್ಷತ್ರ ಮಂಡಲ ಇವನ್ನೆಲ್ಲ ವ್ಯಾಪಿಸಿರುವ ಆಕಾಶವನ್ನು ಮೀರಿ ನಿನ್ನ ಮಣಿಮಕುಟಗಳಿವೆ. ರುದ್ರಾಕ್ಷಗಳನ್ನು ಮುಡಿಗೆ ಏರಿಸಿರುವ ಶಂಕರನೆ ನೀನು ಮಾತ್ರ ಅಗೋಚರನಾಗಿರುವೆ. ದಶದಿಕ್ಕು ಇತ್ತಿತ್ತ ದಶಭುಜಂಗಳ ತತ್ವ. ದಿಕ್ಕುಗಳಮೂಲ ತಿಳಿದವರಾರೂ ಇಲ್ಲ. ದಶದಿಕ್ಕುಗಳನ್ನು ಮೀರಿ ನಿನ್ನ ದಶ ಭುಜಗಳಿವೆ. ಚೆನ್ನಮಲ್ಲಿಕಾರ್ಜುನಯ್ಯ ನೀವೆನ್ನ ಕರಸ್ಥಲಕ್ಕೆ ಬಂದು ಚುಳುಕಾದಿರಲ್ಲಾ. ಇಂತಹ ಪಾದ, ತಲೆ, ಭುಜಗಳನ್ನು ಉಳ್ಳ ನೀನು ನನ್ನ ಕರಸ್ಥಲದಲ್ಲಿ ಇಷ್ಟಲಿಂಗವಾಗಿ ಪೂಜೆಗೊಳ್ಳುತ್ತಿರುವೆ. ಈ ವಚನದಲ್ಲಿ ಪಾದ, ತಲೆ, ದಶಭುಜಗಳ ಪ್ರಸ್ತಾಪ ಇದೆ.

ಇದಕ್ಕೆ ಶಿವಪುರಾಣದ ಉರಿಲಿಂಗೋದ್ಭವ ಲೀಲೆ ಕಥೆಯ ವಿವರಗಳಿಗೆ ಹೋಗಬೇಕು. ಕಥೆಯ ಪ್ರಕಾರ ಬ್ರಹ್ಮ ಮತ್ತು ವಿಷ್ಣು ಇವರ ನಡುವೆ ಯಾರು ಹೆಚ್ಚು ಎಂಬ ವಾದ ಉಂಟಾಯಿತು. ಆಗ ಒಂದು ವಾಣಿ ಕೇಳಿಸಿತು. ಒಬ್ಬರು ನನ್ನ ಪಾದವನ್ನು ಇನ್ನೊಬ್ಬರು ನನ್ನ ತಲೆಯನ್ನು ಯಾರು ಮೊದಲು ನೋಡಿ ಬರುವಿರೊ ಅವರೆ ಹೆಚ್ಚು. ಎಂದು ತಿಳಿಸಿತು. ಬ್ರಹ್ಮನು ಹಂಸ ಪಕ್ಷಿಯನ್ನೇರಿ ಆಕಾಶದ ಕಡೆಗೂ, ವಿಷ್ಣುವು ವರಾ ಹವಾಗಿ ಪಾತಾಳದ ಕಡೆಗೂ ಪಾದ ನೋಡಿ ಬರಲು ಹೋದ. ತಲೆ ಪಾದಗಳು ಅಗೋಚರವಾಗಿಯೇ ಉಳಿದವು. ಬ್ರಹ್ಮನು ತನ್ನ ಆಧಿಕ್ಯವನ್ನು ಸ್ಥಾಪಿಸುವ ಸಲುವಾಗಿ ಪರಮಾತ್ಮನ ತಲೆ ನೋಡಿ ಬಂದೆನೆಂದು ಸುಳ್ಳು ಹೇಳಿದನು. ಫಲವಾಗಿ ಬ್ರಹ್ಮನು ತನ್ನ ನಾಲ್ಕನೆಯ ತಲೆ ಕಳೆದು ಕೊಂಡನು. ವಿಷ್ಣುವು ಸತ್ಯವನ್ನೆ ಹೇಳಿದುದ ರಿಂದ ಶಿವ ಭಗವಾನನ ಅನುಗ್ರಹದಿಂದ' ಲೋಕಪೂಜ್ಯತೆಯನ್ನು ಪಡೆದನು. ಇದು ಶಿವಪುರಾಣದ ಕಥೆ. ಇದೆ ಕಥೆಯನ್ನು

ವಚನಗಳು ಪ್ರತಿಪಾದಿಸಿವೆ. ಕಥೆ ಯಲ್ಲಿ ತಲೆ, ಪಾದ, ಭುಜ. ಕಣ್ಣು. ರೂಪಅಗೋಚರವೆಂದು ವರ್ಣಿಸಲಾಗಿದೆ. ಈ ಶಿವನು ಸಾಕಾರನೂ ಹೌದು ನಿರಾಕಾರನೂಹೌದು. ಈತನೆ ಕರಸ್ಥಲದಲ್ಲಿ ಇಷ್ಟ ಲಿಂಗವಾಗಿ ಪೂಜೆಗೊಳ್ಳುತ್ತಿದ್ದಾನೆ. ಇದು ಉರಿಲಿಂಗೋದ್ಭವದ ಕಥೆ.

25) ಅರಲುಗೊಂಡ ಕೆರೆಗೆ ತೊರೆ ಬಂದು ಹಾಯ್ದಂತೆ ಬರಲುಗೊಂಡ ಸಸಿಗೆ ಮಳೆ ಸುರಿದಂತಾಯಿತ್ತು.

ಇಹದ ಸುಖ ಪರದ ಗತಿ ನಡೆದುಬಂದಂತಾಯಿತ್ತು

. ಚೆನ್ನಮಲ್ಲಿಕಾರ್ಜುನಾ ಗುರುಪಾಕವ ಕಂಡು ಧನ್ಯಳಾದೆನು.

ಪದಗಳ ಅರ್ಥ

ಆಲುಗೊಂಡ-ಕೆಸರಾದ, ಬತ್ತಿಹೋದ,

ಬರಲುಗೊಂಡ -ಒಣಗಿ ಹೋದ,

ಇಹದ ಸುಖ-ಭೂಲೋಕದ ಸುಖ,

ಪರದಗತಿ-ಮೋಕ್ಷ,

ಧನ್ಯ-ಕೃತಾರ್ಥ.

ವಚನದ ಅರ್ಥ

ಅರಲು ಗೊಂಡ ಕೆರೆಗೆ ತೊರೆ ಬಂದು ಹಾಯ್ದಂತೆ. ಬರಲುಗೊಂಡ ಸಸಿಗೆ ಮಳೆ ಸುರಿದಂತಾಯಿತ್ತು. ಕೆಸರಾಗಿ ಒಣಗಿಹೋದ ಕೆರೆಗೆ ತುಂಬಿದ ಹೊಳೆ ಬಂದ ಹಾಗಾಯಿತು. ಒಣಗಿ ಬರಲಾದ ಸಸಿಗೆ ಮಳೆಯೆ ಸುರಿದ ಹಾಗಾಯಿತು. ಇಹದ ಸುಖ'ಪರದಗತಿ ನಡೆದು ಬಂದಂತಾಯಿತ್ತು. ಗುರು ಬಂದರೆ ಭೂಲೋಕದ ಪುಣ್ಯ ಪರಲೋಕದ ಮೋಕ್ಷ ನಡೆದು ಬಂದ ಹಾಗಾಯಿತು. ಗುರು ಪಾದವ ಕಂಡು ಧನ್ಯಳಾದೆನು. ಗುರುವಿನ ದರ್ಶನದಿಂದ ನಾನು ಕೃತಾರ್ಥಳಾದೆನು ಅಕ್ಕಮಹಾದೇವಿಯವರ ಜೀವನದಲ್ಲಿ ಅನುಭಾವ, ಗುರುವಿನ ಪಾತ್ರ ತುಂಬ ದೊಡ್ಡದು. ಅಕ್ಕಮಹಾದೇವಿಯವರಿಗೆ ಅನುಭಾವದ ಹಂಬಲ ಬೆಳೆಸಿದವರೆ ಗುರುಗಳು. ಮಹಾದೇವಿಯವರು ತೊಂದರೆಗೆ ಸಿಕ್ಕಿದಾಗ ಗುರುವಿನ ದರ್ಶನವಾಯಿತು. ಶ್ರೀ ಗುರುಲಿಂಗ ದೇವರ ಆಗಮನದಿಂದ ಈ ಅಡ್ಡಿನಿವಾರಣೆಯಾಗುವುದೆಂಬ ಭರವಸೆ ಮೂಡಿತು. ಗುರುವಿನ ದರ್ಶನ ಏನೆಲ್ಲ ಆನಂದಾತಿಶಯವನ್ನು ತರುವುದೆಂಬ ಆನಂದದಿಂದ ಈ ವಚನವನ್ನು ಗುರುವಿನ ಚರಣದಲ್ಲಿ ಹಾಡುತ್ತಿದ್ದಾರೆ. ಗುರುವಿನ ದರ್ಶನದ ಅನಂದವನ್ನು ಎರಡು ದೃಷ್ಟಾಂತದ ಮೂಲಕ ವಿವರಿಸಿದ್ದಾರೆ 1. ಒಣಗಿ ಹೋದ ಕೆರೆಗೆ ತೊರೆಯ ಪ್ರವಾಹವೇ ಬಂದಂತೆ ಆಯಿತು. 2. ಒಣಗಿಹೋದ ಮರಕ್ಕೆ ಮಳೆ ಸುರಿದಂತಾಯಿತ್ತು. ಅಕ್ಕ ಮಹಾದೇವಿಯವರ ಬದುಕು ಈ ಕಾಲಕ್ಕೆ ಒಣಗಿದ ಕೆರೆ ಒಣಗಿದ ಮರದಂತೆ ಆಗಿತ್ತು. ಅನುಭಾವ ಜೀವನವೆ ಕಮರಿಹೋಗುವಂತಹ ದುಃಖ ಬಂದೊದಗಿದೆ. ಗುರುವಿನ ಆಗಮನ ಹೊಳೆ, ಮಳೆಯಂತೆ ಬಂದು, ಸಸಿ ನಳನಳಿಸಿ ಬೆಳೆಯುವಂತೆ ಮಾಡಿದೆ. ಲೌಕಿಕವು ಅನುಭಾವದೊರತೆಯನ್ನು ಬತ್ತಿಸಿ ಬಿಡುತ್ತದೆ. ಅದು ಮನಸ್ಸಿಗೆ ಅಪಾರ ವೇದನೆಯನ್ನು ದುಃಖವನ್ನು ಕೊಡುತ್ತದೆ. ಈಘೋರ ವೇದನೆಗೆ ಬಿಡುಗಡೆಯ ದಾರಿ ಗುರುವಿನ ದರ್ಶನದಿಂದಾಯಿತು.

26) ಅರಸಿ ಮೊರೆ ಹೊಕ್ಕಡೆ ಕಾವ ಗುರುವೆ. ಜಯಜಯ ಗುರುವೆ.

ಆರೂ ಅರಿಯದ ಬಯಲೊಳಗೆ ಬಯಲಾಗಿ ನಿಂದ

ನಿಲವ ಹಿಡಿದೆನ್ನ ಕರದಲ್ಲಿ ತೋರಿದ ಗುರುವೇ. ಚೆನ್ನಮಲ್ಲಿಕಾರ್ಜುನದೇವ ಗುರುವೆ ಜಯಜಯಗುರುವೆ.

ಪದಗಳ ಅರ್ಥ

ಅರಸಿ-ಹುಡುಕಿ,

ನಿಲವು-ಘನ,

ಹಿಡಿದು-ರೂಹುಗೊಳಿಸಿ,

ವಚನದ ಅರ್ಥ

ಈ ವಚನದಲ್ಲಿ ಲಿಂಗದೀಕ್ಷೆ ನೀಡಿದ ಗುರುಲಿಂಗದೇವರನ್ನು ಸ್ಮರಿಸಿದ್ದಾರೆ. ಅರಸಿ ಮೊರೆಹೊಕ್ಕಡೆ ಕಾವ ಗುರುವೆ ಜಯಜಯಗುರುವೆ ನಿನ್ನ ಹುಡುಕಿ ಬಂದು ಮೊರೆಹೊಕ್ಕ ಕಾಲಕ್ಕೆ ಕಾಪಾಡುವ ಗುರುವೆ, ನಿನಗೆ ಜಯವಾಗಲಿ. ಆರೂ ಆರಿಯದ ಬಯಲೊಳಗೆ ಬಯಲಾಗಿ ನಿಂದ ನಿಲವ ಹಿಡಿದೆನ್ನ ಕರದಲ್ಲಿ ತೋರಿದೆ. ಗುರುವೆ. ಯಾರೂ ತಿಳಿಯದ ಬಯಲಿಗೆ ಬಯಲಾದ ಪರಮಾತ್ಮನನ್ನು ರೂಹುಗೊಳಿಸಿದೆ. ಅದರ ನಿಲವನ್ನು ತಿಳಿಯುವಂತೆ ನನ್ನ ಕರದಲ್ಲಿಟ್ಟು, ತಿಳಿಸಿದ ಗುರುವೆ ನಿನಗೆ ನಮಸ್ಕಾರಗಳು. ಬಯಲನ್ನು ಹಿಡಿದು ಇಷ್ಟಲಿಂಗ ರೂಪದಲ್ಲಿ ನನ್ನ ಕರಸಸ್ಥಲಕ್ಕೆ ಆಕಾರಗೊಳಿಸಿ ನೀಡಿದ ಗುರುವೆ ನಿನಗೆ ನಮಸ್ಕಾರಗಳು. ಚೆನ್ನಮಲ್ಲಿ ಕಾರ್ಜುನ ದೇವ ಗುರುವೆ ಜಯಜಯಗುರುವೆ. ಚೆನ್ನಮಲ್ಲಿಕಾರ್ಜುನನ ಸ್ವರೂಪವಾಗಿರುವ ಗುರುವೆ ನಿನಗೆ ಜಯವಾಗಲಿ ಶರಣು ಶರಣಾರ್ಥಿ. ಈವಚನದಲ್ಲಿ ಆರೂ ಅರಿಯದ ಬಯಲೊಳಗೆ ಬಯಲಾಗಿ ನಿಂದ ನಿಲವ ಹಿಡಿ ದೆನ್ನ ಕರದಲ್ಲಿ ತೋರಿದ ಗುರುವೆ ಎಂದು ಹೇಳಿರುವುದನ್ನು ವಿಶೇಷವಾಗಿ ಗಮನಿಸಬೇಕು. ಇಷ್ಟಲಿಂಗ ಕೊಟ್ಟವರು ಯಾರು ಎಂದು ಚರ್ಚೆ ಮಾಡುವವರು ಈವಚನವನ್ನು ಗಮನಿಸಬೇಕು. ಸಾಕ್ಷಾತ್ಕಾರಮಾಡಿಕೊಂಡ ಎಲ್ಲ ಗುರುಗಳು ದೇವರ ನಿಜದರಿವು ಮಾಡಿಕೊಡುವವರಾಗಿರುತ್ತಾರೆ.

27) ಅಮೇಧ್ಯದ ಮಡಕೆ, ಮೂತ್ರದ ಕುಡಿಕೆ ಎಲುವಿನ ತಡಿಕೆ, ಕೀವಿನ ಹಡಿಕೆ,

ಸುಡಲಿ ದೇಹನ. ಒಡಲು ವಿಡಿದು ಕೆಡದಿರು. ಚೆನ್ನಮಲ್ಲಿಕಾರ್ಜುನನರಿ ಮರುಳೆ.

ಪದಗಳ ಅರ್ಥ

ಅಮೇಧ್ಯ- ಹೊಲಸು,

ಎಲವು-ಮೂಳೆ,

ಒಡಲು-ದೇಹ,

ಮರುಳ-ಹುಚ್ಚ

ವಚನದ ಅರ್ಥ

ಅಮೇದ್ಯದ ಮಡಕೆ. ಮೂತ್ರದ ಕುಡಿಕೆ. ಈ ದೇಹವು ಹೊಲಸಿನ ಮಡಕೆ ಮೂತ್ರದ ಕುಡಿಕೆ. ಎಲುವಿನ ತಡಿಕೆ ಕೀವಿನ ಹಡಿಕೆ. ಈ ದೇಹ ಮೂಳೆಯ ಹಂದರ ಕೀವು ತುಂಬಿಕೊಂಡಿರುವ ಮಾಂಸದ ಮುದ್ದೆ. ಸುಡಲಿ ದೇಹವ. ಈ ದೇಹವು ಸುಟ್ಟುಹೋಗಲಿ. ಒಡಲುವಿಡಿದು ಕೆಡದಿರು. ಚೆನ್ನಮಲ್ಲಿಕಾರ್ಜುನನರಿ ಮರುಳೆ. ಈ ದೇಹವನ್ನು ನಂಬಿ ನಾಶವಾಗಬೇಡ.

ಏ ಹುಚ್ಚ ಪರಮಾತ್ಮ ಚೆನ್ನಮಲ್ಲಿಕಾರ್ಜುನ ನನ್ನು ತಿಳಿ. ಒತ್ತಾಯದಿಂದ ಅರಮನೆಗೆ ಕರೆಸಿದ. ಬಂಧನದಲ್ಲಿಟ್ಟ. ಅಂಗ ಸುಖ ಕೊಡು ಬಾ. ಸೆರಗು ಹಿಡಿದ. ಆಗ ಅಕ್ಕನವರು ನೀಡಿದ ಉತ್ತರ ಈ ವಚನ. ಅಕ್ಕಮಹಾದೇವಿಯವರು ಇಷ್ಟಲಿಂಗಪೂಜೆಯಲ್ಲಿದ್ದ ಕಾಲಕ್ಕೆ ಗೂಳಿಯಂತೆ ಒಳ

ನುಗ್ಗಿದ ರಾಜ ಕೌಶಿಕ, ಅಂಗಸುಖಕ್ಕಾಗಿ ಸೆರಗು ಹಿಡಿದ. ಅವನ ತಪ್ಪಿನ ಅರಿವು ಮಾಡಿಕೊಟ್ಟು, ಅರಮನೆಯಿಂದ ಪಾರಾದರು. ಈ ದೇಹದಲ್ಲಿ ಏನು ಚೆಲುವು ಇದೆ ಎಂದು ಕಾಮ ಪರವಶನಾಗಿ ಬಂದಿರುವೆ. ತಿಳಿದು ನೋಡಿದರೆ ಈದೇಹದ ತುಂಬ ಹೊಲಸು ತುಂಬಿ ಕೊಂಡಿದೆ. ಒಂದು ಕಡೆ ಹೊಲಸು ಇನ್ನೊಂದು ಕಡೆ ಮೂತ್ರದ ಚೀಲ ಈದೇಹವೊ ಎಲುವಿನ ತಡಿಕೆ. ಹೊರಗೆ ಮಾಂಸದ ಹೊದಿಕೆ. ತುಸು ಗಾಯವಾದರೂ ಕೀವು ತುಂಬಿ ನಾರುತ್ತದೆ. ಈ ದೇಹದಲ್ಲಿ ಏನಿದೆ ಎಂದು ಮೋಹ ಪರವಶನಾಗಿ ಬಂದೆ. ಇಂತಹ ಕೆಡುವ ಒಡಲನ್ನು ನಚ್ಚಿ ಮಾಯಾವಶನಾಗ ಬೇಡ, ಇದು ಬಿದ್ದು ಹೋಗುವ ದೇಹ. ಸರ್ವನಾಶವಾಗದ ಮುನ್ನ ಭಕ್ತಿ ಮಾಡು. ಹದಿನೆಂಟುವರ್ಷದ ತರುಣಿ, ಧರೆಯಾಳುವ ರಾಜ ಕಾಮಾಂಧನಾಗಿ ಬಂದಾಗ ಕೊಟ್ಟ ಉತ್ತರ ಅಮೋಘ. ಅಕ್ಕಮಹಾದೇವಿಯವರ ವ್ಯಕ್ತಿತ್ವ ಎತ್ತರ, ಧೈಯ್ಯ, ಭಕ್ತಿ ಜ್ಞಾನ, ವೈರಾಗ್ಯ ಅಪೂರ್ವ. ಈ ತಾರುಣ್ಯದಲ್ಲಿಎಲ್ಲರೂ ಕಾಮಾಂಧ ರಾಗಿ ರಾಗ, ಭೋಗಗಳಲ್ಲಿ ಕೊಚ್ಚಿ ಹೋಗುತ್ತಾರೆ ಆ ಪ್ರವಾಹದಿಂದ ಪಾರಾದವರೇ ಇಲ್ಲ. ವಿರಾಗದ ಎತ್ತರದಲ್ಲಿ ನಿಂತ ಅಕ್ಕನವರ ವ್ಯಕ್ತಿತ್ವ ಉಜ್ವಲ, ಅಮೋಘ.

28) ಅಕ್ಕಟಕ್ಕಟಾ, ಸಂಸಾರದ ಹಗರಣ ಬಂದಾಡಿತ್ತಲ್ಲಾ?

ಅಪ್ಪಾ ಬೊಪ್ಪಾ ಎಂಬ ಚೋಹವು

ಅದು ಮೊಟ್ಟಮೊದಲಲ್ಲಿ ಬಂದಾಡಿತ್ತು.

ತುಪ್ಪುಳು ತೊಡೆದಂತೆ ಮೀಸೆಯ ಚೋಹವು

ಅದು ನಟ್ಟನಡುವೆ ಬಂದಾಡಿತ್ತು.

ಮುಪ್ಪು ಮುಪ್ಪು ಎಂಬ ಚೋಹವು

ಅದು ಕಟ್ಟಕಡೆಯಲಿ ಬಂದಾಡಿತ್ತು.

ನಿಮ್ಮ ನೋಟವು ತೀರಲೊಡನೆ

ಜಗದಾಟವು ತೀರಿತ್ತು ಕಾಣಾ ಚೆನ್ನಮಲ್ಲಿಕಾರ್ಜುನಾ.

ಪದಗಳ ಅರ್ಥ

ಅಕಟಕಟ-ಅಯ್ಯೋ ವಿಧಿಯೆ,

ಹಗರಣ-ಪಾತ್ರ, ನಾಟಕ, ವೇಷ.

ಚೋಹ-ವೇಷ

ವಚನದ ಅರ್ಥ

ಬಹಳ ಮಾರ್ಮಿಕವಾದ ವಚನವಿದು. ಮನುಷ್ಯನ ಬದುಕಿನಲ್ಲಿಬಾಲ್ಯ ಯೌವನ, ಮುಪ್ಪು ಸಂಬಂಧಗಳು ತರುವ ಜೀವನವನ್ನು ಹಾಸ್ಯಲೇಪಿತ ವಿಷಾದದಲ್ಲಿ ಚಿತ್ರಿಸಿದ್ದಾರೆ. ನನ್ನ

ಜೀವನದಲ್ಲಿ ಸಂಸಾರದ ಪಾತ್ರಹೇಗೆ ಸುಳಿದು ಹೋಯಿತು ಏನೆಲ್ಲ ಆಟ ಆಡಿಸಿತು ಎಂಬುದು ಈ ವಚದಲ್ಲಿದೆ. ಅಕಟಕಟಾ ಸಂಸಾರದ ಹಗರಣ ಬಂದಾಡಿತ್ತ ಲ್ಲಾ. ಅಯ್ಯಯ್ಯ ವಿಧಿಯೆ. ಸಂಸಾರದ ನಾಟಕವೂ ನಡೆದು ಹೋಯಿತು. ಎಷ್ಟು ವಿಷಾ ದಯೋಗದಲ್ಲಿ ಅದು ನಡೆದುಹೋಯಿತಲ್ಲಾ. ಅಪ್ಪ ಬೊಪ್ಪ ಎಂಬ ಚೋಹವು ಮೊದಲಲ್ಲಿ ಬಂದಾಡಿತ್ತು. ತಂದೆ, ತಾತ ಎನ್ನುತ್ತ ಮಗುವಿನ ಪಾತ್ರವನ್ನು ಅಭಿನಯಿಸಿದೆ. ತುಪ್ಪವ ತೊಡೆದಂತೆ ಮೀಸೆಯ ಚೋಹವು ನಡುವೆ ಬಂದಾಡಿತ್ತು. ತುಪ್ಪ ಚೆಲ್ಲಿದಂತೆ ಮೀಸೆಯ ಪಾತ್ರದವನನ್ನೂ ಚೆಲ್ಲಿದ್ದಾಯಿತು ತಾರುಣ್ಯದಲ್ಲಿ ಮೀಸೆಯ ಪಾತ್ರದವನೂ ಬಂದು ಹೋದ. ತುಪ್ಪ ತೊಡೆದಂತೆ ಎಂಬುದು ಗಮನಿಸಬೇಕು. ರಾಜನನ್ನು ಚೆಲ್ಲಿ ಬಂದುದನ್ನು ತುಪ್ಪ ಚೆಲ್ಲಿದ್ದಕ್ಕೆ ಹೋಲಿಸಿರುವುದು ವಿಶೇಷ. ತುಪ್ಪ ಅಮೂಲ್ಯ. ಬೆಲೆ ಬಾಳುವಂಥದು. ಅನಿವಾರ ಚೆಲ್ಲಲೆ ಬೇಕಾಯಿತು. ತುಪ್ಪದ ಗಡಿಗೆ ಒಡೆದಂತೆ ಅವನನ್ನು ಚೆಲ್ಲಿದ್ದಾಯಿತು. ಮುಪ್ಪು ಮುಪ್ಪು ಎಂಬ ಚೋಹ ಕಡೆಯಲ್ಲಿ ಬಂದಾಡಿತ್ತು. ಇನ್ನು ವೃದ್ದಾಪ್ಯ, ಮಬ್ಬುಗತ್ತಲ ಜೀವನ ಕೊನೆಗೆ ಬರಲಿದೆ. ನಿಮ್ಮ ನೋಟವು ತೀರಲೊಡನೆ ಜಗದಾಟವು ತೀರಿತ್ತು. ಪರಮಾತ್ಮನೆ ನಿನ್ನ ದೃಷ್ಟಿ ಹೊರಳುತ್ತಿದ್ದಂತೆ ಜಗತ್ತಿನ ಆಟವೆ ಮುಗಿಯುತ್ತದೆ: ಎಲ್ಲ ಆಟ ಆಡಿಸುತ್ತಿರುವವ ನೀನು. ಯಾವಾಗ ಈ ವಿನೋದದ ಆಟ ಸಾಕು ಎನ್ನಿಸುತ್ತದೆ. ಆಗ ಜಗತ್ತೆ ಕಂತೆ ಒಗೆಯುತ್ತದೆ. ನಮ್ಮ ಜೀವನದಲ್ಲಿ ಬೇರೆಯವರು ಏನೇನೊ ಆಟ ಆಡಲು ಬರುತ್ತಾರೆ. ಪರಮಾತ್ಮನ ಆಟ ಜಗತ್ತಿನ ಆಟವನ್ನೆ ಮುಗಿಸಿಬಿಡುತ್ತದೆ. ಎಂಬುದು. ಪಾತ್ರ ಆಡುವ ನಮಗೆ ಗೊತ್ತಿದೆಯೆ? ಮನುಷ್ಯನ ಬಾಲ್ಯ, ಯೌವನ, ವೃದ್ದಾಪ್ಯಗಳಿಗೆ. ಬರೆದ ಭಾಷ್ಯ ಈ ವಚನ. ಅಕ್ಕಮಹಾದೇವಿಯವರು ತಮ್ಮ ಹಿಂದಿನ ಜೀವನದ

ನೆನಪುಗಳು: ಸುಳಿದುಹೋದಾಗ ವ್ಯಕ್ತಪಡಿಸಿದ ವಚನವಿದು.

29) ಅವಾಗಳೂ ಎನ್ನ ಮನ ಉದರಕ್ಕೆ ಹರಿವುದು ಕಾಣಲಾರೆನಯ್ಯ ನಿಮ್ಮುವನು

ಭೇದಿಸಲಾರೆನಯ್ಯ ನಿಮ್ಮ ಮಾಯೆಯನು.

ಮಾಯದ ಸಂಸಾರದಲ್ಲಿ ಸಿಲುಕಿದೆನು.

ಎನ್ನ ದೇವ ಚೆನ್ನ ಮಲ್ಲಿ ಕಾರ್ಜುನಯ್ಯ ನಿಮ್ಮ

ಹೊದ್ದು ವಂತೆ ಮಾಡಾ ಧರ್ಮಿ

ಪದಗಳ ಅರ್ಥ

ಉದರ-ಹೊಟ್ಟೆ, ಹಸಿವು.

ನಿಮ್ಮುವನು-ನಿಮ್ಮನ್ನು,

ಮಾಯದ ಸಂಸಾರ-ಮೂರು ಶ್ರೀವಿಧಗಳು;

ಹೊನ್ನು ಹೆಣ್ಣು, ಮಣ್ಣು, ಆಚಿರ ವಿಷಯಗಳು

ವಚನದ ಅರ್ಥ

ಇದು ಆತ್ಮಾವಲೋಕನದ ವಚನ. ಬಿಟ್ಟ ಬಾಣದಂತೆ ಗುರಿತಲುಪುವುದೊಂದೇ ಅಕ್ಕಮಹಾದೇವಿಯವರ ಜೀವನದ ಗುರಿ. ಅದಕ್ಕಾಗಿ ಮತ್ತೆ ಮತ್ತೆ ಪರಮಾತ್ಮನ ಹಂಬಲದಲ್ಲಿ

ಪ್ರಾರ್ಥಿಸುತ್ತಾರೆ. ತಪಸ್ಸು ಮಾಡುತ್ತಾರೆ. ತಾವು ಎಷ್ಟೆಲ್ಲ ಸಾಧನೆ ತಪಸ್ಸು ಮಾಡಿದರೂ ಸಾಲದು ಎನ್ನುವ ಅತೃಪ್ತಿಯಿಂದ ತಮ್ಮ ಮನ ಅಂತರಂಗವನ್ನು ಆತ್ಮಾವ ಲೋಕನ ಮಾಡಿಕೊಳ್ಳುತ್ತಾರೆ. ಅವಾಗಳೂ ಎನ್ನ ಮನ ಉದರಕ್ಕೆ ಹರಿವುದು. ನನ್ನ ಮನಸ್ಸು ಯಾವಾಗಲೂ ಹೊಟ್ಟೆಯ ಚಿಂತೆಯನ್ನೇ ಮಾಡುತ್ತದೆ. ಖಂಡಿತ ಇಲ್ಲ. ಅಕ್ಕಮಹಾದೇವಿಯವರಿಗೆ ಪರಮಾತ್ಮನದೆ ಚಿಂತೆ ಇದೆ. ಆದರೂ ಮನಸ್ಸು, ದೇಹವನ್ನು ಜರಿದು ಕೊಳ್ಳುತ್ತಿದ್ದಾರೆ. ಇದನ್ನೆ ಸಂಸಾರ ಹೇಯಸ್ಥಲ ಎನ್ನುವುದು. ಯಾರಿಗೆ ಪರಮಾತ್ಮನ ಹಂಬಲ ಇರುತ್ತದೆ. ಅವರಿಗೆ ವಿಷಯ ಜಿಗುಪ್ಸೆ ತರುತ್ತದೆ. ಆಗ ಸಾಧಕರು ತಮ್ಮನ್ನು ಜರಿದು ಕೊಳ್ಳುತ್ತಾರೆ. ಮನಸ್ಸು ದೇಹದ ಕಡೆಗೆ ಇರುವುದರಿಂದಲೇ ನಿಮ್ಮ ದರ್ಶನಭಾಗ್ಯ ನಮಗಾಗಲಿಲ್ಲ. ಭೇದಿಸಲಾರೆನಯ್ಯ ನಿಮ್ಮ ಮಾಯೆಯನು. ನೀನು ಯಾವ ಮಾಯೆಯನ್ನು ಹರವಿರುವೆಯೇ ಅದನ್ನು ಭೇದಿಸಿ. ನೋಡುವ ಶಕ್ತಿ ನನಗಿಲ್ಲ. ನಿನ್ನ ಮಾಯೆಯು ಸತ್ಯವನ್ನು ಸುಳ್ಳುಮಾಡಿ, ಸುಳ್ಳನ್ನು ಸತ್ಯ ಮಾಡಿ ತೋರಿಸುತ್ತದೆ. ನನಗೆ ನಿಜ ದರ್ಶನ ಆಗಲೊಲ್ಲದು. ನೀನು ಹರಡಿದ ಜಗತ್ತಿನ ಮೂರು ದಿನದ ಸಂಸಾರದಲ್ಲಿ ನಾನು ಸಿಕ್ಕಿಕೊಂಡಿದ್ದೇನೆ. ಇದು ಆಕರ್ಷಣೆ ಮಾಡಿ ನನ್ನನ್ನು ಇಲ್ಲಿ ಎಳೆದಿಟ್ಟುಕೊಂಡಿದೆ. ನಿಮ್ಮ ಹೊದ್ದುವಂತೆ ಮಾಡಾ ಧರ್ಮಿ. ನೀನು ದಯಾಮಯ ಕರುಣಾಸಾಗರ ಎಂದೆಲ್ಲ ಹೇಳುತ್ತಾರೆ. ನನ್ನನ್ನು ನಿನ್ನ ಹತ್ತಿರ ಕರೆದುಕೊ. ಪರಮಾತ್ಮನ ಹಂಬಲ ಅಪಾರವಾಗಿದೆ. ದೇವರು ಸಾಕಾರ, ಸಗುಣ, ಭಕ್ತರನ್ನು ತಾನಿದ್ದಲ್ಲಿಗೆ ಕರೆದುಕೊಳ್ಳುತ್ತಾನೆ. ಎನ್ನುವ ಭಕ್ತಿಯಲ್ಲಿದ್ದಾರೆ ಅಕ್ಕ. ಈ ನೆಲೆಯಲ್ಲಿ ಭಕ್ತನಿಗೆ ದೊಡ್ಡ ಆಘಾತ ಉಂಟಾಗುತ್ತದೆ. ದೇವರು ಏನು? ಎಂಬುದು ಈ ಆಘಾತದ ನಂತರ ಅರಿವಿಗೆ ಬರುತ್ತದೆ. ಸಗುಣದಿಂದ ನಿರ್ಗುಣ ಭಕ್ತಿಗೆ ಮನಸ್ಸು ಅಡಿ ಇಡುತ್ತದೆ. ಪುರಾಣಗಳು, ಹಿರಿಯರು ಕಲಿಸಿದ ಸಗುಣ ಭಕ್ತಿಯ ಮಿತಿಗಳು ಕಣ್ಣೆದುರು ಬಂದು ಘಾತವೂ ಆಶ್ಚರವೂ ಆಗುತ್ತದೆ ಈ ಆಘಾತದಿಂದ.

30)ಅಯ್ಯಾ ನಿನ್ನ ಮುಟ್ಟಿ ಮುಟ್ಟದೆನ್ನ ಮನ ನೋಡಾ.

ಬೀಸರ ವಾಯಿತ್ತೆನ್ನ ಮನ.

ಹೊಳಲ ಸುಂಕಿಗನಂತೆ ತೊಳಲಿತ್ತೆನ್ನ ಮನ. ಎರಡೆಂಬುದ ಮರೆದು ಬರಿದಾಗದನ್ನ ಮನ.

ನಾನು ನೀನಪ್ಪ ಪರಿ ಎಂತು ಹೇಳಾ? ಚೆನ್ನಮಲ್ಲಿಕಾರ್ಜುನಾ.

ಪದಗಳ ಅರ್ಥ

ಮುಟ್ಟಿ-ತಲುಪಿ, ಸೇರಿ,

ಬೆಚ್ಚು-ಹೆದರು,

ಬೀಸರ-ಹಿಂದೆ ಸರಿ,

ಹೊಳಲು-ಪಟ್ಟಣ.

ಸುಂಕಿಗ- ತೆರಿಗೆ ಎತ್ತುವವನು.

ಎರಡು-ಬೇರೆ, ಬೇರೆಂಬ ಭಾವ,

ಬರಿದು-ಶುದ್ಧವಾಗುವುದು. ಅಭಿನ್ನಭಾವ ಹೊಂದುವುದು.

ಪರಿ-ರೀತಿ.

ವಚನದ ಅರ್ಥ

ಸಾಧಕಾವಸ್ಥೆಯ ದಾರಿಯಲ್ಲಿಬಹಳ ದೂರ ಸಾಗಿದ್ದಾರೆ. ಪರಮಾತ್ಮನನ್ನು ಸಾಕ್ಷ ತ್ಕಾರ ಮಾಡಿಕೊಳ್ಳಲೇಬೇಕೆಂಬ ಹಂಬಲ ಹೆಚ್ಚಾಗಿದೆ. ವಿಕಳಾವಸ್ಥೆಯ ವಚನವಿದು. ಅಯ್ಯನಿಮ್ಮಮುಟ್ಟ ಮುಟ್ಟದೆನ್ನ ಮನ ನೋಡಾ. ಕಣ್ಣು ನಿನ್ನನ್ನು ನೋಡುತ್ತದೆ. ಕರ ನಿನ್ನನ್ನು ಮುಟ್ಟಿ ಮುಟ್ಟಿ ಪೂಜಿಸುತ್ತದೆ. ಆದರೆ ಅದೇಕೊ ಮನಸ್ಸು ಮಾತ್ರನಿನ್ನನ್ನು ಮುಟ್ಟಲಾಗಿಲ್ಲ. ಬೆಚ್ಚುಬೀಸರವಾಯಿತ್ತೆನ್ನ ಮನ. ನಿನ್ನ ವಿಚಾರದಲ್ಲಿ ಮನ ಹೆದರಿದೆ. ಹೊಳಲಸುಂಕಿಗನಂತೆ ತೊಳಲಿತ್ತೆನ್ನ ಮನ. ನಿನ್ನನ್ನು ಹುಡುಕಿ ಹುಡುಕಿ ಸಾಕಾಗಿದೆ. ಸುಂಕ ವಸೂಲಿ ಮಾಡುವವನು ಬಿಡದೆ ಹುಡುಕಿ ಸುಂಕ ವಸೂಲಿ ಮಾಡುವಂತ ನಾನು ಪರಮಾತ್ಮನನ್ನು ಮತ್ತೆ ಮತ್ತೆ ಹುಡುಕುತ್ತಿದ್ದೇನೆ. ಬಳಲುತ್ತಿದ್ದೇನೆ. ಎರಡೆಂಬುದ ಮರೆದು ಬರಿದಾಗದೆನ್ನ ಮನ. ನಾನು ಬೇರೆ ಪರಮಾತ್ಮ ಬೇರೆ ಎಂಬ ಭಾವ ಇನ್ನೂ ಮರೆಯಾಗಿಲ್ಲ. ನನ್ನ ಮನಸ್ಸು ಭಿನ್ನ ಭಾವದಿಂದ ದೂರವಾಗಿಲ್ಲ. ನಾನು ನೀನಪ್ಪ ಪರಿ ಎಂತು ಹೇಳಾ. ನಾನು ನೀನಾಗುವದಾರಿಯಾವುದು? ನಾನು ನಿನ್ನ ಎತ್ತರ ಏರುವುದು ಯಾವಾಗ? ನಾನು ಈದೇಹದ ಎಲ್ಲ ಮಿತಿಗಳನ್ನು ದಾಟುವುದುವುದು ಯಾವಾಗ? ಇದು ಅನುಭಾವ ಚಿಂತನೆಯ ವಚನ, ತಾತ್ವಿಕನೆಲೆಯಲ್ಲಿ ಜಗತ್ತನ್ನು ವಸ್ತು ನಿಷ್ಠ ನೋಡುವ ಪರಿಭಾವನೆಗಳು ಇಲ್ಲಿ ದಾಂಗುಡಿಯಿಟ್ಟಿವೆ.

31) ಅಯ್ಯಾ, ನಿಮ್ಮ ಅನುಭಾವಿಗಳ ಸಂಗದಿಂದ

ಎನ್ನ ತನು ಶುದ್ಧವಾಯಿತ್ತು.

ಅಯ್ಯಾ, ನಿಮ್ಮ ಅನುಭಾವಿಗಳ ಸಂಗದಿಂದ

ಎನ್ನ ಮನ ಶುದ್ಧವಾಯಿತ್ತು.

ಅಯ್ಯಾ, ನಿಮ್ಮ ಅನುಭಾವಿಗಳ ಸಂಗದಿಂದ

ಎನ್ನ ಪ್ರಾಣ ಶುದ್ಧವಾಯಿತ್ತು.

ಅಯ್ಯಾ, ನಿಮ್ಮ ಅನುಭಾವಿಗಳುಎನ್ನ ಒರೆದೊರೆದು ಆಗುಮಾಡಿದ ಕಾರಣ
ಚೆನ್ನಮಲ್ಲಿಕಾರ್ಜುನಯ್ಯಾ, ನಿಮಗಾನು ತೊಡಿಗೆಯಾದೆನು.

ವಚನದ ಅರ್ಥ

ಅಕ್ಕಮಹಾದೇವಿಯವರ ವಚನಗಳ ಶ್ರೇಷ್ಠತೆ ನಿಚ್ಚಳವಾಗಿ ಎದ್ದು ಕಾಣುತ್ತದೆ. ಬಹುಶಃ ಅನುಭಾವಗೋಷ್ಠಿ ನಡೆಯುತ್ತಿದ್ದ ಕಾಲಕ್ಕೆ ಅಕ್ಕಮಹಾದೇವಿಯವರ ವಚನದ ಅಪೂರ್ವ ಅಭಿವ್ಯಕ್ತಿ ಮತ್ತು ತನ್ಮಯವಾಗಿ ಹಾಡಿದ್ದು, ಅವರ ವೈರಾಗ್ಯ ಇವೆಲ್ಲವೂ

ಅಕ್ಕಮಹಾದೇವಿಯವರು ಅದೆಷ್ಟು ಶ್ರೇಷ್ಠ ವಚನಕಾರರಾಗಿದ್ದರು ಎಂಬುದು ವೇದ್ಯವಾಗುತ್ತದೆ.

ಅಕ್ಕಮಹಾದೇವಿಯವರ ವಚನದ ಶ್ರೇಷ್ಠತೆ, ಅಭಿವ್ಯಕ್ತಿ ಪರಿಣಾಮಕಾರಿ ಶಕ್ತಿ, ಅನುಭಾವಕ್ಕಾಗಿ ಪ್ರತಿಯೊಬ್ಬ ಸದ್‌ಭಕ್ತರು ತಮ್ಮ ತನು, ಮನ, ಪ್ರಾಣ ಅಥವಾ ಧನದ ಅಶುದ್ಧತೆಯನ್ನು ಒರೆ ಹಚ್ಚಿಕೊಳ್ಳುತ್ತಿದ್ದರು. ತಾವು ಪರಿಶುದ್ಧರಾಗುವುದು ಮಹಾತ್ಮರ ಸನ್ನಿಧಿಯಿಂದ ಅವರ ಅರಿವಿನಿಂದ, ಅನುಗ್ರಹದಿಂದ ಎಂದು ತಿಳಿದಿದ್ದರು. ಒಬ್ಬ ವ್ಯಕ್ತಿ ಪರಿಶುದ್ಧ ನಾಗುವುದು ಹೇಗೆ? ಶರಣರು ಅದನ್ನು ಈ ರೀತಿಯಾಗಿ ವಿವರಿಸಿದ್ದಾರೆ. ನಮ್ಮ ಎಲ್ಲ ಅಶುದ್ಧತೆಗಳು ದೇಹದಲ್ಲಿರುತ್ತವೆ. ಮನಸ್ಸಿನಲ್ಲಿ ರುತ್ತವೆ. ದೇಹ ಮನಸ್ಸು ಪ್ರಾಣಗಳನ್ನು ಪರಿಶುದ್ಧ ಮಾಡಿಕೊಂಡಾಗ ನಾವು ಪರಿಪೂರ್ಣರಾಗುತ್ತೇವೆ. ಈ ಪರಿಪೂರ್ಣತೆಯ ದಾರಿ ಅನುಭಾವಿಗಳ ಸಂಗ. ನನ್ನ ತನು, ಮನ, ಪ್ರಾಣಗಳು

ಅನುಭಾವಿಗಳ ಸಂಗದಿಂದ ಶುದ್ಧವಾಯಿತ್ತು ಎಂದು ಅಕ್ಕಮಹಾದೇವಿಯವರು ಹಾಡಿಕೊಂಡಿದ್ದಾರೆ. ನಿಮ್ಮ ಅನುಭಾವಿಗಳು ಎನ್ನ ಒರೆದೊರೆದು ಆಗು ಮಾಡಿದ ಕಾರಣ ನಿಮಗಾನು ತೊಡಿಗೆಯಾದೆನು. ಶರಣರು ತಮಗೆ ಸಜ್ಜನರು ಎನಿಸಿದವರ ಅಂತರಂಗ ಬಹಿರಂಗಗಳನ್ನು ನಿರ್ಮಲ ಮಾಡುತ್ತಾರೆ. ಗುರು ತನ್ನ ಶಿಷ್ಯನನ್ನು ಪರಿಪೂರ್ಣತೆಯ ಕಡೆಗೆ ಕರೆದುಕೊಂಡು ಹೋಗುವಂತೆ, ಶರಣರು ಸಜ್ಜನರನ್ನು ಪರಿಪೂರ್ಣತೆಯ ಕಡೆಗೆ ಕರೆದುಕೊಂಡು ಹೋಗುತ್ತಾರೆ. ಹಾಗೆ ತಮಗೆ ಪ್ರೀತಿಪಾತ್ರರಾದವರ ದೋಷಗಳನ್ನು, ದೌರ್ಬಲ್ಯಗಳನ್ನು ನಿರ್ಮೂಲನ ಮಾಡಿ ಶುದ್ಧಗೊಳಿಸುತ್ತಾರೆ. ಇದು ಅಕ್ಕಮಹಾದೇವಿಯವರು ಶರಣರಿಂದ ತಮಗೆ ಉಂಟಾದ ಪೂರ್ಣತೆಯನ್ನು ವಿವರಿಸಿದ ರೀತಿ.

ಅಕ್ಕಮಹಾದೇವಿಯರ ವಚನದ ಸಾಲು ಒಳ್ಳೆಯ ಅರ್ಥ ಕೊಡುವುದರ ಜೊತೆಗೆ ಶರಣರಿಂದ ನಾನು ಪರಿಶುದ್ಧಳಾದೆ ಎನ್ನುವ ಮೂಲಕ ಶರಣರು ನನ್ನನ್ನು ಪರಿಪೂರ್ಣರನ್ನಾಗಿ ಮಾಡಿದರು ಎನ್ನುವ ತುಂಬು ಗೌರವವು ಶರಣರ ಬಗೆಗೆ ಇದೆ. ಹೀಗೆ ಅಕ್ಕಮಹಾದೇವಿಯರ ವಚನದಲ್ಲಿ ಇಡೀ ವಚನ, ಶರಣರು ಮಹಾತ್ಮರ ಬಗೆಗೆ ತುಂಬು ಗೌರವವನ್ನು ಅಭಿವ್ಯಕ್ತಿಸುತ್ತದೆ. ಅಕ್ಕಮಹಾದೇವಿಯವರು ವೈಯಕ್ತಿಕವಾಗಿ ತಮ್ಮ ಮನಸ್ಸನ್ನು ತಾವು ಪರಿಪೂರ್ಣರಾಗುವ ಕಡೆಗೆ ಹೊರಳಿಸಿದ್ದರಿಂದ ಅವರು ಎಲ್ಲ ಶರಣರಿಂದಲೂ ತಾವು ಪರಿಶುದ್ಧರಾಗುವ ಪೂರ್ಣತೆಯ ದಾರಿಯನ್ನೇ ಗಮನದಲ್ಲಿಟ್ಟುಕೊಂಡಿದ್ದಾರೆ. ಇದು ಸ್ವತಃ ಅಕ್ಕನವರ ಉನ್ನತ ವ್ಯಕ್ತಿತ್ವ. ಶರಣರಿಂದ ತಾನು ಶುದ್ಧಳಾದೆ ಎನ್ನುವ ಮೂಲಕ ಅಕ್ಕನವರಲ್ಲಿಯೇ ಆ ಪರಿಶುದ್ಧವಾಗುವ ಯೋಗ್ಯತೆಯು ಅಪಾರವಾಗಿ ಇತ್ತು. ಆದುದರಿಂದಲೇ ಅವರು ಪರಿಪೂರ್ಣರಾದರು. ಇದು ನಾವು ಗಮನಿಸಬೇಕಾದ ಅಂಶ. ನಾನು ಪರಿಶುದ್ಧಳಾದೆ ಎನ್ನುವ ಪೂರ್ಣತೆಯ ದಾರಿ ಅವರಲ್ಲಿದೆ. ವಚನದ ಶ್ರೇಷ್ಠತೆ ಎದ್ದು ಕಾಣುತ್ತದೆ. ಸುಂದರ ವಚನದ ಭಾವಾಭಿವ್ಯಕ್ತಿಯೂ, ಭಾವಗೀತ ಪ್ರಕಾರದ ಮಾದರಿಗಳೂ, ಸುಂದರ ಶಬ್ದಗಳ ಪದ ಸಂಯೋಜನೆಯೂ ನಿಚ್ಚಳವಾಗಿ ಕಾಣಬರುತ್ತದೆ. ಅಲ್ಲದೇ, ಅಕ್ಕಮಹಾದೇವಿಯವರ ವಚನಗಳಲ್ಲಿ ಧ್ವನಿ ಮತ್ತು ಅರ್ಥ ಪರಂಪರೆಗಳು ಶ್ರೇಷ್ಠ ಕಾವ್ಯದಲ್ಲಿಯಂತೆ ಧ್ವನಿಸುತ್ತದೆ.

ಅಕ್ಕನವರಾಗಲೇ ಪ್ರಸಿದ್ಧ ರಾಗಿದ್ದರು. ಅವರ ಕೀರ್ತಿ ನಾಡಿನುದ್ದಕ್ಕೂ ಹಬ್ಬಿತ್ತು. ಅದೇ ಅಕ್ಕಮಹಾದೇವಿಯವರು ಜಗದ ಜಂಗಮರಾಗಿ, ಸಂಚಾರಿಯಾಗಿ ಕಲ್ಯಾಣಕ್ಕೆ ಬಂದಿದ್ದರಿಂದ ಅಪರಿಚಿತ ಶರಣರು ಒರೆ ಹಚ್ಚುವುದಕ್ಕೆ ಕಾರಣವಾಯಿತು. ಈ ಸಮೃದ್ಧವಾದ ಕಟು ಅನುಭವಗಳು ಅಕ್ಕಮಹಾದೇವಿಯವರ ಶ್ರೇಷ್ಠ ವಚನ ರಚನೆಗೆ ಮೂಲ ದ್ರವ್ಯವಾಗಿದೆ. ಆ ನೆಲೆಯಲ್ಲಿ ಜೀವನಾನುಭವ ದ್ರವ್ಯದಲ್ಲಿಯೂ ಅಕ್ಕಮಹಾದೇವಿಯವರು ಬಸವಣ್ಣನವರಿಗಿಂತ ಮಿಗಿಲಾಗಿದ್ದಾರೆ. ಅಕ್ಕಮಹಾದೇವಿಯವರು ತಾನು ಮಹಿಳೆಯಾಗಿರುವುದೊಂದು ಕಾರಣ ಅಪೂರ್ವ ಚೆಲುವೆಯೂ ಆಗಿ ತನ್ನ ಯೌವನದಲ್ಲಿಯೇ ದುಷ್ಟ ರಾಜನ ದರ್ಪವನ್ನೆದುರಿಸಬೇಕಾದ ವಿಷಮ ಸಂದರ್ಭ ಮತ್ತೊಂದು ಕಾರಣ. ಕಲಾತ್ಮಕ ಅಭಿವ್ಯಕ್ತಿ ಸಾಧಿಸಿಕೊಂಡಿರುವ ಮತ್ತೊಂದು ಕಾರಣವಾಗಿ ಅಕ್ಕಮಹಾದೇವಿಯವರು ಜಗತ್ತಿನ ಸರ್ವಕಾಲದ ಮಹಾನ್ ಕವಿಯಿತ್ರಿಯಾಗಿದ್ದಾರೆ. ಚಕ್ರವರ್ತಿಯಾಗಿ "ಅಲೆಕ್ಸಾಂಡರ್ ದಿ ಗ್ರೇಟ್'

ಎಂದು ಆತ ಕರೆಸಿಕೊಂಡಂತೆ ಅಕ್ಕಮಹಾದೇವಿಯವರು ಭಾವಗೀತ, ಕಾವ್ಯ ಮತ್ತು ವಚನ ಪ್ರಕಾರಕ್ಕೆ, ಶಿವಾನುಭವದ ದಿವ್ಯ ಜೀವನಕ್ಕೆ ಅಕ್ಕಮಹಾದೇವಿ ದಿಗ್ರೇಟ್ ಆಗಿ ವಿಶ್ವಕ್ಕೆಲ್ಲಾ ಏಕಮೇವಾದ್ವಿತೀಯರಾಗಿದ್ದಾರೆ. ಆದುದರಿಂದಲೇ ಬಸವಣ್ಣನವರಂತಹವರು ಲೀಲಾಜಾಲವಾಗಿ ಅಕ್ಕಮಹಾದೇವಿಯವರ ವ್ಯಕ್ತಿತ್ವ, ವಚನಗಳಿಗೆ ಬಹುಬೇಗ ಪ್ರಭಾವಿತರಾಗಿ ಬಿಡುತ್ತಾರೆ. ಸೌರಮಂಡಲದಲ್ಲಿದ್ದವರಿಗೆ ಸೂರ್ಯನೆದುರು ನಕ್ಷತ್ರ ಮರೆಯಾದಂತೆ ಅಕ್ಕಮಹಾದೇವಿಯವರ ಪರಿಪೂರ್ಣತೆ, ಶಿವಾನು ಭಾವ, ವಚನಾಭಿವ್ಯಕ್ತಿಯ ಮುಂದೆ ಬಸವಣ್ಣನವರು ಮಬ್ಬಾಗಿಬಿಡುತ್ತಾರೆ.

## 32)ಅಲ್ಲೆಂದಡೆ ಉಂಟೆಂಬುದೀ ಮಾಯೆ

## ಒಲ್ಲೆನೆಂದಡೆ ಬಿಡದೀ ಮಾಯೆ ಎನಗಿದು ವಿಧಿಯ ಚೆನ್ನಮಲ್ಲಿಕಾರ್ಜುನಯ್ಯಾ, ಒಪ್ಪಿ ಮರೆವೊಕ್ಕಡೆ ಮತ್ತುಂಟೆ ಕಾಯಯ್ಯಾ ಶಿವಧೋ!

ವಚನದ ಅರ್ಥ

ಈ ಮಾಯೆ ಇಲ್ಲ ಎಂದರೆ ಉಂಟು ಎಂದು ಹೇಳುತ್ತದೆ. ಬೇಡ ಎಂದರೆ ಬಿಡುವು ದಿಲ್ಲ ಎನ್ನುತ್ತದೆ. ಇದ್ದು ನನಗೆ ವಿಧಿಯೆ. ಚೆನ್ನ ಮಲ್ಲಿಕಾರ್ಜುನನೆ ನಾನು ನಿನ್ನನ್ನು... ಒಪ್ಪಿಕೊಂಡಿದ್ದೇನೆ. ನಿನ್ನ ಪ್ರೀತಿಯ ಪತ್ನಿ ನಾನು. ಹೀಗಿದ್ದರೂ ಈ ಮಾಯೆ ನನ್ನನ್ನು ಕಾಡುತ್ತಿದೆ. ನೀನು ನನ್ನ ಪತಿ ರಕ್ಷಣೆ ಗಂಡನಾದ ನಿನ್ನ ಕರ್ತವ್ಯ. ಕಾಪಾಡು.

33) ಅಯ್ಯಾ ನಿಮ್ಮ ಶರಣರು ಕೂಡಿದ

ಸುಖವನುಪಮೆಗೆ ತರಬಾರದಯ್ಯ.

ಅಯ್ಯಾ ನಿಮ್ಮ ಮಹಾಂತರ ಕೂಡಿ ಅಗಲುವ ಧಾವತಿಗಿಂತ ಸಾವುದೇ ಕರ ಲೇಸಯ್ಯ. ಚೆನ್ನಮಲ್ಲಿಕಾರ್ಜುನಯ್ಯ. ನಿಮ್ಮನರುಹಿದ ಮಹಿಮರನಗಲಿ ನಾನಿರಲಾರೆನಯ್ಯ.

ವಚನದ ಅರ್ಥ

ಉಪಮೆ-ಹೋಲಿಕೆ .

ಮಹಾಂತರು-ಶರಣರು.

ಧಾವತಿ-ದುಃಖ .

ಅರುಹಿ-ತಿಳುಹಿ

ಮಹಿಮ-ಶರಣ.

ಕರ-ಶ್ರೇಷ್ಠ

ಲೇಸು-ಒಳ್ಳೆಯದು.

ವಚನದ ಅರ್ಥ

ಅಯ್ಯ ನಿಮ್ಮ ಶರಣರು ಕೂಡಿದ ಸುಖವ ಉಪಮೆಗೆ ತರಬಾರದಯ್ಯ. ಪರಮಾತ್ಮನೆ ನಿಮ್ಮಶರಣರು ಸೇರಿದ ಗೋಷ್ಠಿಯ ಅನುಭಾವ ಏನಿದೆ ಅದಕ್ಕೆ ಇನ್ನೊಂದು ಹೋಲಿಕೆ ಸಾಧ್ಯವಿಲ್ಲ.ಅಯ್ಯ ನಿಮ್ಮ ಮಹಂತರ ಕೂಡಿ ಅಗಲುವ ಧಾವತಿಗಿಂತ ಸಾವುದೆ ಕರ ಲೇಸಯ್ಯ. ಇಂತಹ ಶರಣರ ಜೊತೆ ಅನುಭಾವಗೋಷ್ಟಿ ನಡೆಸಿದ ಮೇಲೆ ಅಗಲುವ ದುಃಖಕ್ಕಿಂತ ಸಾಯುವುದೆ ಬಹಳ ಒಳ್ಳೆಯದು.ಚೆನ್ನಮಲ್ಲಿಕಾರ್ಜುನಯ್ಯ

ನಿಮ್ಮನರುಹಿದ ಮಹಿಮರನಗಲಿ ನಾನಿರಲಾರೆನಯ್ಯ. ಪರಮಾತ್ಮನೆ ನಿಮ್ಮ ಬಗೆಗೆ ಪರಿಚಯ ಮಾಹಿತಿ ನೀಡಿದ ಶರಣರನ್ನು ನಾನು ಅಗಲಿ ಬದುಕಲಾರೆನು. ಅಕ್ಕಮಹಾ' ದೇವಿಯವರಿಗೆ ಪರಮಾತ್ಮ ಬೇಕಾಗಿತ್ತು. ಅದಕ್ಕಾರಿ ತಪಸ್ಸಿಗೆ ತೊಡಗಿದರು. ದಾರಿ ಕಾಣಲಿಲ್ಲ. ಆಗ ಶರಣರು ತಪಸ್ಸಿನ ರೀತಿ, ಕ್ರಮ ಪರಮಾತ್ಮ ಎಂದರೆ ಏನು? ಈ ಸೃಷ್ಟಿ ಎಂದರೆ ಏನು? ತುಸು ಪರಿಚಯಾತ್ಮಕ ಮಾಹಿತಿ ನೀಡಿದರು. (ಶ್ರೀ ಶೈಲದ ಗುಹೆಯಲ್ಲಿ,)

ಅಕ್ಕನವರಿಗೆ ಜ್ಞಾನದ ಹಂಬಲ ಬಹಳವಾಗಿತ್ತು. ಈ ಜ್ಞಾನ ವಿಚಾರವನ್ನು ಶರಣರು ತಿಳಿಸಿದರು. ಒಳ್ಳೆಯ ಆಚಾರ,ವಿಚಾರಗಳ ಸಮ್ಮಿಲನವಾಗಿದ್ದ ಶರಣರ ಶುದ್ಧತೆ ಅಕ್ಕಮಹಾದೇ ವಿಯವರಿಗೆ ಒಪ್ಪಿಗೆಯಾಯಿತು. ಇದರಿಂದ ಇಂತಹ ಮಹಾತ್ಮರ ಸಾನ್ನಿಧ್ಯ ಬೇಕು. ಇವರನ್ನು ಅಗಲುವುದಕ್ಕಿಂತ ಸಾವೆ ವಾಸಿ ಎನ್ನಿಸಿತು ಅಕ್ಕನವರಿಗೆ.

ಈ ವಚನದಿಂದ ಕೆಲವು ಮುಖ್ಯ ಸಂಗತಿಗಳು ಹೊಳಹುದೋರುತ್ತವೆ.ಈವ ಚನದಲ್ಲಿ ಎರಡು ಸಂಗತಿಗಳ ಪ್ರಸ್ತಾಪವಿದೆ. 1. ಶರಣರ ಜೊತೆ ಗೋಷ್ಠಿ ನಡೆಸುವುದು 2. ಗೋಷ್ಠಿ ಮುಗಿದ ಬಳಿಕ ಬೇರೆಬೇರೆಯಾಗುವುದು.

(ಅಕ್ಕಮಹಾದೇವಿಯ ಗುಹೆ ಯಿಂದ, ಕದಳಿವದ ಇನ್ನೊಂದು

ಗುಹೆಗೆ ಹೊಗುವಾಗ)

ಅನುಭಾವಜೀವ ನವನ್ನು ಹಲವರು ಜೀವನವಿಧಾನವಾಗಿ ರೂಪಿಸಿಕೊಂಡಿದ್ದರು. ಇಂತಹ ಶರಣರು ಅಲ್ಲಲ್ಲಿ ಊರುಗಳಲ್ಲಿ ಅನುಭಾವ ಹೇಳುತ್ತಿದ್ದರು. ಹಾಗೆ ಅಕ್ಕನವರು ಕೂಡ ನಾಡಿನ ಉದ್ದಗಲಕ್ಕೆ ಅನುಭಾವ ಹೇಳುತ್ತ ಸಂಚರಿಸಿದರು. ಹೀಗೆ ಅನುಭಾವ ಹೇಳುವವರು ಅವರವರ ತಂಡಗಳಲ್ಲಿ ವಾಸಿಸುತ್ತಿದ್ದರು. ಒಂದು ಊರಿನಲ್ಲಿ ಅನುಭಾವ ನಡೆದರೆ ಅಕ್ಕಪಕ್ಕ ಸಮೀಪದ ಊರವರೆಲ್ಲ ಬಂದು ಅನುಭಾವ ಕೇಳುತ್ತಿದ್ದರು. ಇಂತಹ ಕಾರ್ಯಕ್ರಮಗಳಲ್ಲಿ ಕೆಲ ವೃತ್ತಿಪರರು ರೂಪಕ,ನಾಟಕ,ಕಲೆ,ಲಾವಣಿ,

ಬೊಂಬೆಯಾಟ,ಬಹುರೂಪ, ಢಕ್ಕೆ ಮೇಳ ಇತ್ಯಾದಿ ರೂಪಕಗಳನ್ನು ಪ್ರದರ್ಶಿಸು ತ್ತಿದ್ದರು. ಮಹಾತ್ಮರ , ಶರಣರ,ಪುರಾತನರ ಜೀವನಕಥೆಗಳು ಇಲ್ಲಿ ಪ್ರದರ್ಶಕ ಕಲೆ ಗಳಲ್ಲಿ ಪ್ರದರ್ಶನವಾಗುತ್ತಿದ್ದವು. ಇಂತಹ ಕಲಾಪ್ರಕಾರಗಳಲ್ಲಿ ಅಕ್ಕಮಹಾದೇವಿಯ ವರ

ಜೀವನವನ್ನೂ, ಪ್ರಭುದೇವರಜೀವನವನ್ನೂ ಪ್ರದರ್ಶನಮಾಡುತ್ತಿದ್ದರು. ಅಕ್ಕ ಮಹಾದೇವಿಯವರು ನಾಡಿಗೆಲ್ಲ ಸುವಿಖ್ಯಾತರಾಗಿದ್ದರು. ಅದರಲ್ಲು ಬಹುರೂಪ ದವರು ಪ್ರದರ್ಶಿಸುವ ಅಕ್ಕಮಹಾದೇವಿಯವರ ರೂಪಕ ಬಹಳ ಸುವಿಖ್ಯಾತವಾ ಗಿತ್ತು. ಇಂತಹ ರೂಪಕವನ್ನು ಸ್ವತಃ ಅಕ್ಕಮಹಾದೇವಿಯವರೆ ತಾನೆ ಕಥೆಯಾಗಿರುವ ರೂಪಕವನ್ನು ಪ್ರತ್ಯಕ್ಷ ನೋಡುವ ಅವಕಾಶ ಅವರಿಗೆ ಒದಗಿಬಂತು.ಪರಮಾತ್ಮ ನನ್ನೆ ಲಗ್ನಮಾಡಿಕೊಳ್ಳುವ ಹಂಬಲದ ಮಹಾದೇವಿಯಕ್ಕನನ್ನು ಒಬ್ಬರಾಜ ಹಿಡಿತ ರಿಸಿ ಲಗ್ನಕ್ಕೆ ಒತ್ತಾಯ ಹಾಕಿದ ಸಂದರ್ಭವನ್ನು ಪ್ರದರ್ಶಿಸಿ ಇವನೆ ಕೌಶಿಕರಾಜ ನಮ್ಮ ತಾಯಿಯವರಿಗೆ ಬಹಳ ಕಿರುಕುಳ ಕೊಟ್ಟ ವಿಚಾರಿಸಿಕೊ ಎಂದು ಟಗರಿಗೆ ಹೇಳಿ ದಾಗ ಅದು ಕೌಶಿಕ ಪಾತ್ರಧಾರಿಗೆ ಅಟ್ಟಿಸಿಕೊಂಡು ಹೋಗಿ ಗುದ್ದುವುದು,ಅವನು ತಪ್ಪಾಯಿತು ಎಂದು ಅಕ್ಕಮಹಾದೇವಿ ಪಾತ್ರಧಾರಿಯಬಳಿ ಬಂದು ಕ್ಷಮೆ ಕೇಳಿದ ಮೇಲೆ ಟಗರು ಸುಮ್ಮನಾಗುವುದು ಇವೆಲ್ಲ ಜನರಲ್ಲಿಕುತೂಹಲ, ಆಸಕ್ತಿ ಹುಟ್ಟಿಸು ತ್ತಿದ್ದವು ಧರ್ಮದ ಬಗೆಗೆ ಕಥಾನಕಗಳ ಪರಿಚಯವೂ ಆಗುತ್ತಿತ್ತು. ಹೀಗೆ ಅಕ್ಕಮ ಹಾದೇವಿಯವರು ಇಂತಲ್ಲಿ ಊರುಗಳಲ್ಲಿ ಶರಣರನ್ನು, ತಪಸ್ವಿಗಳನ್ನು ಭೇಟಿಯಾ ಗುವ ಸಂದರ್ಭಗಳು ಬರುತ್ತಿದ್ದವು. ಇಂತಹ ಅನುಭಾವಗೋಷ್ಠಿಗಳನ್ನು ಈಗ ನಡೆ ಸುವ ಪ್ರವಚನಗೋಷ್ಠಿಗಳಿಗೆ ಹೋಲಿಸಬಹುದು. ಹೀಗಾಗಿ ಅಕ್ಕಮಹಾದೇವಿಯ ವರು ಒಂಟಿಯಾಗಿ ಬದುಕಬೇಕಾದ ಸಂದರ್ಭ ಇರಲಿಲ್ಲ. ಶೂನ್ಯ ಸಂಪಾದನೆಗ ಳಾಗಲಿ, ಹರಿಹರನಾಗಲಿ, ಇತರ ಶರಣರ ಕಾವ್ಯಗಳು ಚಿತ್ರಿಸುವಂತೆ ಶರಣರು, ಅ ಕ್ಕಮಹಾದೇವಿಯವರು ಒಬ್ಬೊಬ್ಬರೇನೂ ಇರುತ್ತಿರಲಿಲ್ಲ. ಅಲ್ಲಲ್ಲಿ ಊರುಗಳಲ್ಲಿ ಶರಣರು ಭಕ್ತರ ಮನೆಗಳಲ್ಲಿ ಅಥವಾ ತಮಗೆಂದೆ ಸಿದ್ದ ಪಡಿಸಿದ ಕುಟೀರಗಳಲ್ಲಿ ಇದ್ದು ಕೊಂಡು ಅನುಭಾವ ಸಾಧನೆ, ಅನುಭಾವಗೋಷ್ಠಿ ನಡೆಸಿಕೊಂಡು ಜೀವನ ಮುಂದುವರಿಸಿದ್ದಾರೆ.

34) ಅಕ್ಕ ಕೇಳವ್ವ ನಾನೊಂದ ಕನಸ ಕಂಡೆ.

ಅಕ್ಕಿ, ಅಡಕೆ, ಎಲೆ ತೆಂಗಿನಕಾಯಿ ಕಂಡೆ.

ಚಿಕ್ಕ ಚಿಕ್ಕ ಜಡೆಗಳ ಒಪ್ಪುವ 'ಸುಲಿಪಲ್ಲ ಗೊರವನು

ಭಿಕ್ಷಕ್ಕೆ ಮನೆಗೆ  ಬಂದುದ ಕಂಡೆನವ್ವಾ.

ಮಿಕ್ಕುಮೀರಿ ಹೋಹನ ಬೆಂಬತ್ತಿ ಕೈಹಿಡಿದೆನು. ಚೆನ್ನಮಲ್ಲಿಕಾರ್ಜುನನ ಕಂಡು ಕಣ್ದೆರೆದೆನು.

ಪದಗಳ ಅರ್ಥ

ಸುಲಿಪಲ್ಲ-ಎಳೆಯ ದಂತಪಂಕ್ತಿಗಳು. ತಾರುಣ್ಯ ಸೂಸುವ ಹಲ್ಲುಗಳು.

ಗೊರ ವ-ತಪಸ್ವಿ, ಶಿವ, ಶಂಕರ.

ಅಕ್ಕಿ, ಅಡಕೆ, ಎಲೆ, ತೆಂಗಿನಕಾಯಿ-ಮಂಗಳದ್ರವ್ಯಗಳು. ಮಿಕ್ಕು ಮೀರಿ -ನನ್ನನ್ನು ತಪ್ಪಿಸಿ ಹೋಗುತ್ತಿದ್ದ.

ಬೆಂಬತ್ತಿ- ಬೆನ್ನ ಹಿಂದೆ ಓಡಿಹೋಗಿ .

ಪದಗಳ ಅರ್ಥ

ಆಕ್ಕ ಕೇಳವ್ವ ನಾನೊಂದ ಕನಸ ಕಂಡೆ. ಅಕ್ಕ ಕೇಳು ನಾನು ಒಂದು ಕನಸನ್ನು ಕಂಡೆ ಅಕ್ಕಿ, ಅಡಕೆ, ಎಲೆ, ತೆಂಗಿನಕಾಯಿ ಕಂಡ ಅಕ್ಕಿಯನ್ನು ಕಂಡೆ ಅಡಕೆಯನ್ನು ಕಂಡೆ ಎಲೆಯನ್ನು ಕಂಡೆ .ತೆಂಗಿನಕಾಯಿಯನ್ನು ಕಂಡೆ. ಚಿಕ್ಕಚಿಕ್ಕ ಜಡೆಗಳ ಒಪ್ಪುವ ಸುಲಿಪಲ್ಲ ಗೊರವನು ಭಿಕ್ಷಕ್ಕೆ ಬಂದುದ ಕಂಡೆನವ್ವ. ಪುಟ್ಟದಾದ ಜಡೆಗಳು ಆ ಮುಖಕ್ಕೆ ಒಪ್ಪುವ ಎಳೆಯ ದಂತಪಂಕ್ತಿಗಳು ಒಬ್ಬ ತಪಸ್ವಿ ಭಿಕ್ಷಕ್ಕೆ ಬಂದದ್ದು ಕಂಡೆ. ಮಿಕ್ಕು ಮೀರಿ ಹೋಹನ ಬೆಂಬತ್ತಿ ಕೈಹಿಡಿದೆನವ್ವ. ನನ್ನನ್ನುಕಣ್ಣುತಪ್ಪಿಸಿ ಹೋಗುವ ಆತನನ್ನು ಬೆನ್ನಹಿಂದೆ ಓಡಿಹೋಗಿ ಅವನ ಕೈಹಿಡಿದು ಬಿಟ್ಟೆ ಚೆನ್ನಮಲ್ಲಿಕಾರ್ಜುನನ ಕಂಡು ಕಣ್ಣ ರೆದೆನವ್ವ. ನಾನು ಪರಮಾತ್ಮ ಚೆನ್ನಮಲ್ಲಿಕಾರ್ಜುನ ದೇವರನ್ನು ಕಂಡೆ ಎಚ್ಚರಗೊಂಡೆ. ಇದು ನಾನು ಕಂಡ ಕನಸು. ಇದು ಅಕ್ಕಮಹಾದೇವಿಯವರು ಕಂಡ ಕನಸು. ಗೆಳತಿಯರು ಕೇಳುತ್ತಿದ್ದಾರೆ . ಅಕ್ಕಮಹಾದೇವಿಯವರು ಹೇಳುತ್ತಿದ್ದಾರೆ. ಮಹಾದೇವಿ ನೀನು ಏನು ಕನಸು ಕಂಡೆ ಹೇಳು. ಎಲ್ಲರಿಗೂ ಕುತೂಹಲ. ಮಹಾದೇವಿ ಈ ತಾರುಣ್ಯದಲ್ಲಿ ಏನು ಕನಸು ಕಂಡಿರಬಹುದು ? ಗೆಳತಿಯರ ಈ ಪ್ರಶ್ನೆಗೆ ಅಕ್ಕನವರು ಉತ್ತರಿಸುತ್ತಿದ್ದಾರೆ. ಅಕ್ಕ ಕೇಳವ್ವ ನಾನೊಂದ ಕನಸು ಕಂಡೆ. ಏನು ಆ ಕನಸು? ಅಕ್ಕಿಅಡಕೆ ಎಲೆ ತೆಂಗಿನಕಾಯಿ ಕಂಡೆ. ಅಕ್ಕಿಯನ್ನು ಕಂಡೆ ಅಡಕೆಯನ್ನು ಕಂಡೆ. ಎಲೆಯನ್ನು ಕಂಡೆ. ತೆಂಗಿನಕಾಯಿಯನ್ನು ಕಂಡೆ. ಇವೆಲ್ಲ ಏನು? ಹಬ್ಬ,ಮದುವೆ, ಜಾತ್ರೆ, ಉತ್ಸವ, ಶುಭಸಮಾರಂಭಗಳಲ್ಲಿ ಉಪಯೋಗಿಸುವ ಮಂಗಳದ್ರವ್ಯಗಳು. ಇದು ಶುಭಸೂಚನೆಯ ಕನಸು. ಸರಿ. ಆಮೇಲೆ. ಮಹಾದೇವಿ ಮತ್ತೇನು ಕನಸು ಕಂಡೆ. ಗೆಳತಿಯರು ಕೇಳಿದ್ದಾರೆ. ಅಕ್ಕಮಹಾದೇವಿಯವರು ಮುಂದುವರಿಸಿದ್ದಾರೆ.

ಚಿಕ್ಕ ಚಿಕ್ಕ ಜಡೆಗಳ ಒಪ್ಪುವ ಸುಲಿಪಲ್ಲ ಗೊರವನು ಭಿಕ್ಷಕ್ಕೆ ಬಂದುದ ಕಂಡೆನವ್ವ ಆತನಿಗೆ ಪುಟ್ಟ ಪುಟ್ಟ ದಾದ ಜಡೆಗಳು, ಯಾಕೆ ಪುಟ್ಟಪುಟ್ಟದಾದ ಜಡೆಗಳು ಉದ್ದ ಹಿಮ್ಮಡಿಯವರೆಗೆ ಇಳಿಬಿದ್ದ ಕೂದಲನ್ನು ಮುಡಿಕಟ್ಟಿದ್ದಾನೆ. ಆ ಮುಡಿಯಲ್ಲಿ ಚಂದ್ರ, ಗಂಗಾ, ಸರ್ಪಇವನ್ನು ಸೇರಿಸಿಕಟ್ಟಿದ್ದಾನೆ.ಆ ಮುಖಕ್ಕೆ ಒಪ್ಪುವ ಸುಲಿಪಲ್ಲು, ಏನು ಹಾಗೆಂದರೆ ? ಎಳೆಪ್ರಾಯದ ತರುಣ ಚೆಲುವನ ಹಲ್ಲುಗಳು,ಸಿಹಿದಾಳಿಂಬರ ಬೀಜ ದಂತಹ ದಂತಪಂಕ್ತಿಗಳು. ನಕ್ಕರೆ ಹೂವರಳಿದಂತೆ. ಮುಗುಳ್ನಕ್ಕರೆ ಜಗತ್ತೆ ಬೆಳಗಿ ದಂತೆ.ಆತ ಯಾರು? ಸುಲಿಪಲ್ಲ ಗೊರವನು ಭಿಕ್ಷಕ್ಕೆ ಬಂದುದ ಕಂಡೆನವ್ವ ಸುಲಿ ಪಲ್ಲ ಗೊರವ ಎಂದರೆ ಯಾರು? ಆತ ತಪಸ್ವಿ ಮಹಾತ್ಮ ಯಾರು ಆ ತಪಸ್ವಿ? ಕೈಲಾಸದೊಡೆಯನಾದ ಶಂಕರನು ಭಿಕ್ಷಕ್ಕೆ ಬಂದಿದ್ದಾನೆ. ಪರಮಾತ್ಮ ನಮ್ಮ ಮನೆಗೆ ಭಿಕ್ಷಕ್ಕೆ ಬರುತ್ತಾನೇನು? ಬಂದರೆ ನಾವು ಏನು ಮಾಡುತ್ತೇವೆ. ಅಕ್ಕಮಹಾದೇವಿ ಯವರು ಹೇಗೆ ನಡೆದುಕೊಂಡಿದ್ದಾರೆ. ಹೋಲಿಸಿಕೊಳ್ಳೋಣ. ನಮ್ಮ ಮನೆಗೆ ಯಾರಾದರೂ ಸನ್ಯಾಸಿಗಳು ಭಿಕ್ಷಕ್ಕೆ ಬಂದರೆ ಬಂತು ದುಡ್ಡಿಗೆ ವಕ್ರ ಎಂದುಕೊ ಳ್ಳುತ್ತೇವೆ. ಹೋಗಿ ದುಡಿ. ಭಿಕ್ಷೆ ಕೇಳಲು ನಾಚಿಕೆ ಆಗುವುದಿಲ್ಲವ ಎನ್ನುತ್ತೇವೆ. ಅಥವಾ ತಂಗಳು, ಒಣರೊಟ್ಟಿ, ಅಕ್ಕಿ ಬೊಗಸೆ ೞ ಜಾಸ್ತಿಯಾಯಿತು ಹಾವಳಿ ಭಿಕ್ಷುಕರ ಈ ಇಲ್ಲವಾದರೆ. ಕಳಿಸುತ್ತೇವೆ ಹಾಕಿ ಇದ್ದರೆ ಏನಾದರೂ , ಸಿನಿಮಾ ನೀನು ಬಂದರೆ ನಿಜವಾಗಿ ಮಾತ್ಮನೇನಾದರೂ ಪರ. ಕೊಳ್ಳುತ್ತೇವೆ ಎಂದು . ಬಿಡುತ್ತೇವೆ ಎಂದು ಹೋಗು ಬಂದೆ ಯಾಕೆ ಇಲ್ಲಿ. ತಾನೆ ಹಾಕುವವನಲ್ಲ ಪಾತ್ರ ನಾಟಕದಲ್ಲಿ . ಎನ್ನುವುದು ಸೃಷ್ಟಿ ದೃಷ್ಟಿಯಂತೆ ಇದನ್ನೆ. ನೋಡಿರಿ ವಿಚಾರಮಾಡಿದ್ದಾರೆ ಹೇಗೆ ನವರು ಅಕ್ಕ ಏನು ಅವನಿಗೆ. ಕಾಣುತ್ತದೆ ಒಳ್ಳೆಯದೆ ನಮಗೆ ಭಾವನೆಗಳಿದ್ದರೆ,ಆಚಾರ, ವಿಚಾರ ಒಳ್ಳೆಯ ಜಗದೊಡೆಯನೊ ಕಾರಣೀಕರ್ತನಾದ ಲಯಗಳಿಗೆ, ಸ್ಥಿತಿ ಸೃಷ್ಟಿ ಯಾರು. ನೀಡುವುದು ಭಿಕ್ಷ ಅವನಿಗೆ? ನೀಡುವುದು ಭಿಕ್ಷೆ ಏನು ಅವನಿಗೆ.  ಬಂದಿದ್ದಾನೆ ಭಿಕ್ಷಕ್ಕೆ ಪರಮಾತ್ಮನು ಅಂತಹ . ಬಂದಿದ್ದಾನೆ ಭಿಕ್ಷಬೇಡಲು ಆದರು -.ಬೇಕಾಗಿಲ್ಲ ಏನೂ. ? ಬೇಕು ಭಿಕ್ಷೆ ಏನು ನಮ್ಮಿಂದ ಅಕ್ಕ. ಬೇಕು ತೇರ್ಗಡೆಯಾಗಲೆ ಪರೀಕ್ಷೆಯಲ್ಲಿ ಈ ಆತಬಂದಿದ್ದಾನೆ ಪರೀಕ್ಷೆಗೆ ನಮ್ಮ ಅಂದರೆ . ಕೇಳಿದ್ದಾರೆ ಗೆಳತಿಯರು?  ಭಿಕ್ಷನೀಡಿದೆ ಏನು ನೀನು. ನಿರ್ಧರಿಸಿದ್ದಾರೆ . ಬಂದಿದ್ದಾರೆ ಹೊರಗೆ ಮೇಲೆ ನಿಂತಕಾಲ ಭಿಕ್ಷನೀಡಲು ಅಕ್ಕಮಹಾದೇವಿಯವರು ನನ್ನಿಂದ ಆತ ಹಿಡಿದೆನವ್ವ ಕೈ ಬೆಂಬತ್ತಿ ಹೋಹನ ಮಿಕ್ಕುಮೀರಿ?ಆದರೇನಾಯಿತು . ಬಂದೆ ನೀಡಲು ಭಿಕ್ಷೆ ಏನು ನೀನು?ಯಾಕೆ. ಗುತ್ತಿದ್ದಾನೆ ಓಡಿಹೋ ಭಿಕ್ಷತೆಗೆದುಕೊಳ್ಳದೆ ಆತ. ಕೇಳಿದ್ದಾರೆ ಮತ್ತೆ ಕುತೂಹಲದಿಂದ ಗೆಳತಿಯರು ಹೋದ ಓಡಿ ಯಾಕೆ ಆತ

ನನ್ನನ್ನು ನಾನು. ಬೇಕು ಭಿಕ್ಷೆ ಏನು ನನ್ನಿಂದ ಅವನಿಗೆ ಶಂಕರ ಜಗದೊಡೆಯನಾದ
. ಹೆಣ್ಣುಮಗಳಲ್ಲ ಸಾಮಾನ್ಯ ಈಕೆ. ತಿಳಿಯಿತು ಇದು ಆತನಿಗೆ. ಸಿದೆ ನಿರ್ಧರಿ ಕೊಟ್ಟುಕೊಳ್ಳಲು
ಬಳಿಗೆ ನನ್ನ ಮಹಾದೇವಿಯನ್ನು ಬೇಗ ಇಷ್ಟು. ನೀಡಲಿದ್ದಾಳೆ ಭಿಕ್ಷೆ ನನಗೆ ತನ್ನನ್ನೆ ಈಕೆ
ಪ್ರಕಟಮಾಡಿ ಜಗತ್ತಿಗೆ ವೈರಾಗ್ಯವನ್ನು ಶಕ್ತಿ ಭಕ್ತಿ ಈಕೆಯ. ಬೇಡ ಕೊಳ್ಳುವುದು ಕರೆದು
ಮಿಕ್ಕುಮೀರಿ. ಹೋಗುತ್ತಿದ್ದಾನೆ ಓಡಿ ಬೀಸಿ ಕೈ ಮುಂದೆ ಹಿಂದೆ ಎಂದು. ತೋರಿಸಬೇಕು
ದರ್ಶನಕ್ಕಾಗಿ ಆತನ ಅಕ್ಕಮಹಾದೇವಿಯವರು, ಹಿಡಿದೆನವ್ವ ಕೈ ಬೆಂಬತ್ತಿ ಹೋಹನ
ಇರುಳು. ಳದಲ್ಲಿಪ್ಪೆನು ಕಳವ ನಿಮ್ಮ ಜಾವ ನಾಲ್ಕು ಹಗಲು. ಭಕ್ತಿಮಾಡಿದ್ದಾರೆ ಹಗಲಿರುಳು
ಗಂಟೆ ಹನ್ನೆರಡು ಹಗಲು ಹೀಗೆ. ವಿಕಳಾವಸ್ಥೆಯಲ್ಲಿಪ್ಪೆನು ಲಿಂಗದ ಜಾವ ನಾಲ್ಕು
. ಭಕ್ತಿಮಾಡಿದ್ದಾರೆ ಯಲ್ಲಿ ಚಿಂತೆ ಪರಮಾತ್ಮನ ಗಂಟೆ ಹನ್ನೆರಡು ರಾತ್ರಿ ಚಿಂತೆ ಪರಮಾತ್ಮನ
ಅಕ್ಕಮಹಾದೇವಿಯವರು ಹೋದರೆ ಓಡಿ ಹಾಗೆ ದರ್ಶನಕೊಟ್ಟು ಹೀಗೆ ಪರಮಾತ್ಮ ಆ ಈಗ
ಆ ಓಡುವ ಕೈಬೀಸಿ ಮುಂದೆ ಹಿಂದೆ. ಓಡಿದ್ದಾರೆ ವೇಗವಾಗಿ ಅವನಿಗಿಂತ? ಬಿಡುತ್ತಾರೇನು
ಪರಮಾತ್ಮ? ಯಾರು ಹಿಡಿದವರು ಕೈ ನನ್ನ. ದಿದ್ದಾರೆ ಎಳೆ ಜಗ್ಗಿ ಹಿಡಿದು ಕೈ ಪರಮಾತ್ಮನ
ಮುಖ ಚೆನ್ನಮಲ್ಲಿಕಾರ್ಜುನನ ಅಕ್ಕಮಹಾದೇವಿಯವರಿಗೆ. ನೋಡಿದ್ದಾನೆ ತಿರುಗಿ ಹಿಂದೆ
ನಾನು ಕಣ್ತೆರೆದೆನವ್ವ ಕಂಡು ಮಲ್ಲಿಕಾರ್ಜುನನ ಚೆನ್ನ. ದರ್ಶನವಾಯಿತು
.ಕನಸು ಕಂಡ ಅಕ್ಕ ಇದು.  ಎಚ್ಚರಗೊಂಡೆ ಕಂಡು ಕಂಡೆ' ಚೆನ್ನಮಲ್ಲಿಕಾರ್ಜುನನನ್ನು

ಈಗ ಈ ಕನಸನ್ನು ವಿವರವಾಗಿವಿಶ್ಲೇಷಣೆಗೆ ಒಳಪಡಿಸೋಣ.ಈ ಕನಸು ನಾಲ್ಕು ಘಟ್ಟಗಳನ್ನು ಒಳಗೊಂಡಿದೆ. 1.ಶಂಕರ ಭಗವಾನ್ ಅಕ್ಕನವರ ಮನೆಗೆ ಭಿಕ್ಷಕ್ಕೆ ಬಂದ. 2. ಅಕ್ಕನವರು ತಮ್ಮನ್ನೆ ಭಿಕ್ಷವಾಗಿ ನೀಡಲು ಮುಂದಾದರು. 3. ಆತ ಭಿಕ್ಷ ಪಡೆಯದೆ ಓಡಿ ಹೋದ. 4. ಅಕ್ಕನವರು ಅವನ ಬೆನ್ನತ್ತಿ ಹೋಗಿ ಅವ ನನ್ನು ಹಿಡಿದು ಬಿಟ್ಟರು.೧.ಅಕ್ಕನವರಿಗೆ ಬಾಲ್ಯದಿಂದಲೂ ಪರಮಾತ್ಮನ ಬಗೆಗೆ ಹಿರಿ ದಾದ ಕನಸು. ಅವನನ್ನು ಕಾಣಬೇಕು. ಹಂಬಲ ಬೆಳೆಯಿತು. ಫಲವಾಗಿ ಗೌರಿಶಂಕ ರನನ್ನು ಲಗ್ನ ಮಾಡಿಕೊಂಡಂತೆ ನಾನು ಶಿವನನ್ನು ಲಗ್ನ ಮಾಡಿಕೊಳ್ಳಬೇಕೆಂಬ ಹಂಬಲ ಅವರ ಮನದಾಳದಲ್ಲಿ ಬೇರೂರಿತು. ತಾರುಣ್ಯ 17ನೆಯ ವಯಸ್ಸು ಆಗ ಅವರು ಕನಸು ಕಂಡರು. ಪರಮಾತ್ಮನೆ ಮನೆಗೆ ಭಿಕ್ಷಕ್ಕೆ ಬಂದ ಮಹಾದೇವಿಯ ವರ ಭಕ್ತಿ ಕಾರಣ ಪರಮಾತ್ಮನ ದರ್ಶನವಾಯಿತು. ಇಷ್ಟಕ್ಕೆ ಸುಮ್ಮನಿರಬಹುದಿತ್ತು. ಕನಸಿನಲ್ಲಿ ದೇವರದರ್ಶನವಾಯಿತು.ದೇವರ ಅನುಗ್ರಹವಾಯಿತು. ಎಂದು ಕೊಂಡು ಸುಮ್ಮನಿರಬಹುದಿತ್ತು. ಆದರೆ ಅಕ್ಕ ಅಷ್ಟಕ್ಕೆ ಬಿಡಲಿಲ್ಲ. ಅವರ ಭಕ್ತಿ ಮುಂದು ವರಿಯಿತು. ಭಕ್ತಿ ಅರ್ಪಣೆಯಾಗಿ ಬೆಳೆಯಿತು.೨.ಅಕ್ಕಮಹಾದೇವಿಯವರು ತಮ್ಮನ್ನೆ ಭಿಕ್ಷವಾಗಿ ಅರ್ಪಣೆ ಮಾಡಿಕೊಳ್ಳಲು ಮುಂದಾದರು. ಪರಮಾತ್ಮನಿಗೆ ನನ್ನನ್ನೆ ಭಿಕ್ಷ ವಾಗಿ ನೀಡಬೇಕು ಎಂದು ಹೊರಟರೆ ಆತ ಓಡಿ ಹೋದ. ಕನಸು ಬೇರೆ. ವಾಸ್ತವ ಬೇರೆ. ಅಕ್ಕಮಹಾದೇವಿಯವರು ಕನಸಿನಲ್ಲಿ ಕಂಡದ್ದನ್ನು ನನಸು ಮಾಡಿಕೊಳ್ಳಲು ಮುಂದಾದರು. ಇದೆ ನಮಗೂ ಅಕ್ಕಮಹಾದೇವಿಯವರಿಗೂ ಇರುವ ಅಂತರ. ನಾವು ಇಲ್ಲಿಗೆ ತೃಪ್ತರಾದರೆ, ಮಹಾದೇವಿಯವರು ಇನ್ನೂ ಮುಂದುವರಿದರು. ಇಲ್ಲೆ ವಾಸ್ತವ ಜಗತ್ತು ಏನು ಎಂದು ಅರ್ಥವಾಗತೊಡಗಿದ್ದು. ಇದು ಬದುಕಿನ ನಿಜ ವಾದ ಘಟ್ಟ ೩ಮಿಕ್ಕು ಮೀರಿ ಹೋಹನ ಬೆಂಬತ್ತಿ ಕೈಹಿಡಿದೆನವ್ವ. ನನ್ನನ್ನು ತಪ್ಪಿಸಿ ಹೋಗುತ್ತಿದ್ದ. ನಾನು ಅವನ ಬೆನ್ನು ಹಿಡಿದು ಹೋಗಿ ಅವನನ್ನು ಹಿಡಿದೆ. ಸಾಕ್ಷಾ ತ್ಕಾರ ಸುಲಭವಾದುದಲ್ಲ. ಪರಮಾತ್ಮನ ದರ್ಶನವು ನಿಜ ಜೀವನದಲ್ಲಿ ಸುಲಭ ದಲ್ಲಿ ಆಗುವುದಿಲ್ಲ ಎಂಬುದನ್ನು ಆತ ಓಡಿಹೋಗುತ್ತಿದ್ದ ಚಿತ್ರ ಹೇಳುತ್ತದೆ.

ಸಾಧನೆಯ ಈ ಹಂತದಲ್ಲಿ ಸಾಕ್ಷಾತ್ಕಾರಕ್ಕೆ ಬಹಳ ಸಾಧನೆ ಮಾಡಬೇಕಾ ಗುತ್ತದೆ ಎನ್ನುವುದನ್ನು ಈ ಕನಸಿನ ಘಟ್ಟ ವಿವರಿಸುತ್ತದೆ. ಆದರೂ ಅಕ್ಕ ಅವನ ಬೆನ್ನು ಹತ್ತಿ ಹೋಗಿ ಅವನನ್ನು ಜಗ್ಗಿ ಹಿಡಿದು ಬಿಟ್ಟಿದ್ದಾರೆ. ಎಷ್ಟೆ ಕಷ್ಟವಾದರೂ ಅವರು ಪರ ಮಾತ್ಮನನ್ನು ಸಾಕ್ಷಾತ್ಕಾರ ಮಾಡಿಕೊಳ್ಳುವರೆಂಬುದನ್ನು ಈ ಕನಸು ಹೇಳುತ್ತದೆ. ೪. ಚೆನ್ನಮಲ್ಲಿಕಾರ್ಜುನನ

ಕಂಡು ಕಣ್ತೆರೆದೆನವ್ವ. ಸತ್ಯದ ಸಾಕ್ಷಾತ್ಕಾರ ಅಕ್ಕನವರಿಗೆ ಆಗುತ್ತದೆ ಎಂಬುದನ್ನು ಕನಸು ಹೇಳುತ್ತದೆ. ಅದು ಜ್ಞಾನೋದಯ. ಆ ಸಾಕ್ಷಾತ್ಕಾ ರವು ಅವರೊಬ್ಬ ಮಹಾತ್ಮರಾಗುವರೆಂಬುದನ್ನು ಧ್ವನಿಸುತ್ತದೆ. ಹೀಗೆ ಈ ಕನಸು - ಅವರ ಜೀವನ ಮುಂದೆ ಏನಾಗುತ್ತದೆ ಎಂಬುದನ್ನು ದರ್ಶನ ಮಾಡಿಸುತ್ತದೆ. ಎನ್ನ ಭಾವನೆ ಎನಗಿದು ಜೀವನ ಕೇಳಾ ತಂದೆ ಎಂದು ಭಾವನೆಯಲ್ಲಿ ಬದುಕಿದ ಅಕ್ಕ ಮಹಾದೇವಿಯವರು ಬಾಲ್ಯದಲ್ಲಿಯೆ ತಮ್ಮ ಗುರಿಯನ್ನು ಖಚಿತ ಮಾಡಿಕೊಂಡ ಮಹಾ ತಪಸ್ವಿ, ಗುರು. ಮಹಾತ್ಮರು.

35) ಅಪಾರ ಘನಗಂಭೀರದ ಅಂಬುಧಿಯಲ್ಲಿ

ತಾರಾಪಥವ ನೋಡಿ ನಡೆಯೆ

ಭೈತ್ರದಿಂದ ದ್ವೀಪ ದ್ವೀಪಾಂತರಕ್ಕೆ

ಸಕಲ ಪದಾರ್ಥವನೆಯ್ದಿಸುವುದು.

ಎನ್ನ ದೇವ ಚೆನ್ನಮಲ್ಲಿಕಾರ್ಜುನಯ್ಯನ

ಸಮೀಪ ತೂರ್ಯಸಂಭಾಷಣೆಯನರಿದಡೆ

ಮುನ್ನಿನಲ್ಲಿಗೆಯ್ದಿಸುವನು.

ಭೈತ್ರ-ಹಡಗು, ದೋಣಿ,

ತುರ-ಅಂತರಂಗ

ಅಪಾರ ಘನಗಂಭೀರದ ಅಂಬುಧಿಯಲ್ಲಿ ತಾರಾಪಥವ ನೋಡಿ ನಡೆಯೆ, ವಿಸ್ತಾರವೂ ದೊಡ್ಡದೂಗಂಭೀರವೂ ಆದ ಸಮುದ್ರದಲ್ಲಿ ನಕ್ಷತ್ರ ದಾರಿಯನ್ನು ನೋಡಿ ನಡೆಯಲು ಭೈತ್ರದಿಂದ ದ್ವೀಪ ದ್ವೀಪಾಂತರಕ್ಕೆ ಸಕಲ ಪದಾರ್ಥವನೆಯ ಸುವುದು.ಹಡಗು ದ್ವೀಪದಿಂದ ದ್ವೀಪಕ್ಕೆ ಸಕಲವಸ್ತುಗಳನ್ನು ಒಯ್ದು ಮುಟ್ಟಿಸುವುದು. ಎನ್ನ ದೇವ ಚೆನ್ನಮಲ್ಲಿಕಾರ್ಜುನಯ್ಯ ತುರ ಸಂಭಾಷಣೆಯನರಿದಡೆ ಮುನ್ನಿನಲ್ಲಿಗೆ: ಸುವನು.ನನ್ನ ದೇವನಾದ ಚೆನ್ನಮಲ್ಲಿಕಾರ್ಜುನದೇವನು ನಮ್ಮ ಭಕ್ತಿ ಅವನಿಗೆ ಮುಟ್ಟದರೆ ನಮ್ಮನ್ನು ಬಂದಲ್ಲಿಗೆ ಕರೆದುಕೊಳ್ಳುವನು. ಸಮುದ್ರ ವಿಶಾಲವಾದುದು. ಅದನ್ನು ಹಡಗಿನಲ್ಲಿ ದಾಟುವಾಗ ಅನೇಕ ಹಗಲು ರಾತ್ರಿಗಳನ್ನು ಕಳೆದು ಸಾಗಬೇಕು. ಇರುಳಿನಲ್ಲಿ ಸಾಗುವಾಗ ನಕ್ಷತ್ರಗಳನ್ನು ಗುರುತಿಟ್ಟುಕೊಂಡು ಸಾಗಲಾಗುತ್ತದೆ. ಪಕ್ಷಿ ಗಳು ದೇಶದಿಂದ ದೇಶಕ್ಕೆ ಸಂಚರಿಸುವಾಗ ಇರುಳಿನಲ್ಲಿ ನಕ್ಷತ್ರಗಳನ್ನು ಗಮನಿಸಿ ಗುರುತಿಟ್ಟುಕೊಂಡು ಹಾರುತ್ತವೆ ಎಂದು ಪಕ್ಷಿ ವೀಕ್ಷಕರು ಇಂದು ಗುರುತಿಸಿ ದ್ದಾರೆ.ಇದೆ ಸಂಗತಿಯನ್ನು ಹಡಗಿನ ಪ್ರಯಾಣದ ರಾತ್ರಿ ಸಂಚಾರ ಕಾಲಕ್ಕೆ ನಕ್ಷತ್ರ. ಗಳನ್ನು ಗುರುತಿಟ್ಟು ಕೊಂಡು ಸಾಗುತ್ತಿದ್ದರು ಎಂದು ಇಲ್ಲಿ ಅಕ್ಕನವರು ಹೇಳಿದ್ದಾರೆ. ಹಡಗು ದ್ವೀಪದಿಂದ ದ್ವೀಪಕ್ಕೆ ಸರಕು,ಮನುಷ್ಯರನ್ನು ಸಾಗಿಸುವ ಹಾಗೆ, ಪರಮಾತ್ಮ ನಿಗಾಗಿ ಕಟ್ಟೇಕಾಂತದಲ್ಲಿ ಅನುಭಾವ ನಡೆಸಿದರೆ ಆ ಪರಮಾತ್ಮನು ನಮ್ಮನ್ನು ಬಂದಲ್ಲಿಗೆ ಕರೆದೊಯ್ಯುವನು. ಹುಟ್ಟುಸಾವು ಒಂದು ದೊಡ್ಡ ಸಮುದ್ರ. ಇದನ್ನು ದಾಟಬೇಕಾದರೆ ಪರಮಾತ್ಮ ಎನ್ನುವ ಹಡಗನ್ನು ಆಶ್ರಯಿಸಬೇಕು.

36). ಅಳುತನದ ಮಾತನೇರಿಸಿನುಡಿದರೆ ಆಗಳೆ ಕಟ್ಟಿದೆನು ಗಂಡುಗಚ್ಚೆಯ.

ತಿಗುರನೇರಿಸಿ ತಿಲಕವನಿಟ್ಟು ಕೈದುವ ಕೊಂಡು ಕಳನೇರಿದ ಬಳಿಕ

ಕಟ್ಟಿದ ನಿರಿ ಸಡಿಲಿದರೆ ಇನ್ನು ನಿಮ್ಮಾಣೆ ಚೆನ್ನಮಲ್ಲಿಕಾರ್ಜುನ.

ಪದಗಳ ಅರ್ಥ

ಆಳುತನ-ವೀರತ್ವದ ಮಾತು. ಸೇವಾನಿಷ್ಠೆಯ ಮಾತು. ಏರಿಸಿ-ಪ್ರಸ್ತಾಪಿಸಿ,

ಗಂಡು ಗಚ್ಚೆ-ವೀರ ಉಡುಗೆ,

ತಿಗುರು-ಧ್ವಜ,

ತಿಲಕ-ವಿಭೂತಿ ಧಾರಣೆ,

ಕೈದು-ಖಡ್ಗ,

ಕಳ- ಯೋಧ, ಯುದ್ಧಭೂಮಿ.

ಏರು- ಹೋರಾಟಕ್ಕೆ ಹೊರಡು,

ನಿರಿ-ವೀರ ಗಚ್ಚಿ

ಆಣೆ- ಭಾಷೆ, ಪ್ರತಿಜ್ಞೆ,

ವಚನದ ಅರ್ಥ

ಅಕ್ಕಮಹಾದೇವಿಯವರ ಕಾಲ. ವೀರ ಯುಗ. ಶರಣರು ಹೇಡಿಗಳಲ್ಲ. ವೀರರು. ಅನುಭಾವ ಹೇಡಿಗಳಿಗಲ್ಲ. ಪಲಾಯನವಾದಿಗಳಿಗೂ ಅಲ್ಲ. ವೀರರಿಗೆ ಜೀವನ ಬಾಳಲಾರದ ಹೇಡಿಗಳಿಗಲ್ಲ. ಈವಚನವು ವೀರತ್ವದ

ಅನುಭಾವದ ಮಾತನ್ನಾಡುತ್ತದೆ.

ಅಕ್ಕಮಹಾದೇವಿಯವರ ವಚನಗಳಲ್ಲಿ ಮತ್ತೆ ಮತ್ತೆ ಇಂತಹ ವೀರ ಯುದ್ಧದ ಮಾತುಗಳು ಪ್ರಸ್ತಾಪವಾಗುತ್ತವೆ. ಅನುಭಾವ ಜೀವನಕ್ಕೆ ಬಂದದ್ದಾಗಿದೆ. ಇಡೀ ವಚನ ವೀರನ ಪ್ರತಿಜ್ಞೆಯ ಯುದ್ಧದ ಚಿತ್ರ ರೂಪಕವಾಗಿದೆ.ಈವಚನವು ವೀರನ ಯುದ್ಧ ಹೋರಾಟದ ಪ್ರಸಂಗವನ್ನು ವಿವರಿಸು ಇದೆ . ವೀರಭೀಷ್ಮನನ್ನು ಕೆಣಕಿದಾಗ ನಾನು ಹೇಗೆ ಯುದ್ಧಮಾಡುತ್ತೇನೆ ಎಂಬ ಪ್ರತಿ ಜ್ಞೆಮಾಡುತ್ತಾನೆ. ಹಾಗೆ ಅನುಭಾವಯುದ್ಧದ ಪ್ರತಿಜ್ಞೆಯನ್ನು ಇಲ್ಲಿ ಚಿತ್ರಿಸಿದ್ದಾರೆ. ಅಕ್ಕನವರೂ ವೀರರೂ ಹೌದು, ಅನುಭಾವಿಯೂ ಹೌದು. ಕವಿಯೂ ಹೌದು. ಭೀಷ್ಮನ ಪ್ರತಿಜ್ಞೆಯನ್ನು ಪಂಪಕವಿ ಚಿತ್ರಿಸಿದರೆ ಇಲ್ಲಿ ಅಕ್ಕನವರೆ ವಚನದಲ್ಲಿ ಚಿತ್ರಿಸಿದ್ದಾರೆ. ಈ ವಚನವು ವೀರನ ಪ್ರತಿಜ್ಞೆರೂಪದಲ್ಲಿ ಆರಂಭವಾಗುತ್ತದೆ. ಅಕ್ಕನವರು ಈವೀರ ವಾತಾವರಣವನ್ನು ತಮ್ಮ ಊರಿನಲ್ಲಿ, ಬೀದಿಯಲ್ಲಿ ಅಕ್ಕಪಕ್ಕದ ಮನೆಗಳಲ್ಲಿ ಕಂಡಿದ್ದರು . ಜನರು ವೀರರಾಗಿ ಬದುಕುವುದು ಅನಿವಾರವಾಗಿದ್ದಕಾಲವೂ ಹೌದು. ಯುದ್ಧಗೆಲ್ಲುವಲ್ಲಿ ವೀರನಿಗೆ ಆತ್ಮವಿಶ್ವಾಸ, ಕೆಚ್ಚು, ಪರಾಕ್ರಮವಿದ್ದಂತೆ ಅನುಭಾವಿಗೂ ಆತ್ಮವಿಶ್ವಾಸ, ಸಾಧಿಸುವ ಧೈಯ್ಯ,ಪ್ರಯತ್ನಗುರಿಮುಟ್ಟುವ ಧೀಶಕ್ತಿ ಮನೋಬಲ ಬೇಕು. ಆಳುತನದ ಮಾತನೇರಿಸಿ ನುಡಿದರೆ ಆಗಳೆ ಕಟ್ಟಿದೆನು ಗಂಡುಗ ಚ್ಚೆಯ. ನೀನು ವೀರನ? ಯೋಧನ? ಹೀಗೆ ಮಾತು ತೆಗೆದರೆ, ಗಂಡುಗಚ್ಚಿ ಹಾಕಿ ಯುದ್ಧಕ್ಕೆ ಸಿದ್ಧಳಾಗಿನಿಲ್ಲುತ್ತೇನೆ.ತಿಗುರನೇರಿಸಿ ತಿಲಕವನಿಟ್ಟು ಕೈದುವ ಕೊಂಡು ಕಳ ನೇರಿದ ಬಳಿಕ ಕಟ್ಟಿದ ನಿರಿ ಸಡಿಲಿದಡೆ ಇನ್ನು ನಿಮ್ಮಾಣೆ.

ರಥಸಿದ್ಧಗೊಳಿಸಿ ಭಸ್ಮಧಾರ ಣೆಮಾಡಿ ಆಯುಧವಿಡಿದು ಯುದ್ಧರಂಗಕ್ಕೆ ತೆರಳಿದ ಬಳಿಕ, ವೀರಗಚ್ಚೆ ಸಡಿಲಿದರೆ ಆಣೆ. ಯುದ್ಧದಲ್ಲಿ ಜಯಶಾಲಿಯಾಗಿಯೆ ಹಿಂದಿರುಗುವವಳು. ಹೇಡಿಯಾಗಿ ಓಡಿ ಬರುವವಳಲ್ಲ, ವೀರಾವೇಷದಿಂದ ಕಾದಾಡುತ್ತೇನೆ. ಇದು ಪ್ರತಿಜ್ಞೆ. ಹಾಗೆ ಅನು ಭಾವ ಯುದ್ಧಕ್ಕೆ ದುಮುಕಿದ್ದೇನೆ. ಪರಮಾತ್ಮನನ್ನು ಸಾಧಿಸಿಯೆ ತೀರುತ್ತೇನೆ. ಅನು ಪಮವಾದ ಆತ್ಮವಿಶ್ವಾಸ ಇಲ್ಲಿದೆ. ಇಂದು ಆತ್ಮಹತ್ಯೆಮಾಡಿಕೊಳ್ಳುತ್ತಿರುವ ವಿದ್ಯಾ ರ್ಥಿಗಳು, ರೈತರು, ನಿರುದ್ಯೋಗಿಗಳು, ನಷ್ಟ ಅನುಭವಿಸಿದ ಉದ್ಯಮಿಗಳು ಅಕ್ಕಮ ಹಾದೇವಿಯವರು ವ್ಯಕ್ತಪಡಿಸಿರುವ ಈ ಆತ್ಮವಿಶ್ವಾಸವನ್ನು ಮನನಮಾಡಬೇಕು. ಹದಿನೆಂಟು ವರುಷದ ತರುಣಿ ರಾಜನನ್ನೆ ಎದುರಿಸಿ,ಏಕಾಂಗಿಯಾಗಿ ಜಿವನ ಸಮು ದ್ರಕ್ಕೆ ದುಮುಕಿ, ಜೀವನವನ್ನು ಗೆದ್ದು ತೋರಿಸಿಕೊಟ್ಟಿದ್ದಾರೆ. ಬದುಕಿನಲ್ಲಿ ಏನು ಗುರಿ ಇರಿಸಿಕೊಂಡಿದ್ದರೊ ಅದನ್ನು ಅವರು ಅಪೂರ್ವವಾದ ರೀತಿಯಲ್ಲಿ ಸಾಧಿಸಿ ತೋರಿಸಿದ್ದಾರೆ. ಅಕ್ಕನವರ ಆತ್ಮವಿಶ್ವಾಸ ಎಲ್ಲರಿಗೂ ಮಾದರಿಯಾಗಿದೆ. ಸ್ತ್ರೀವಾದ ಸ್ತ್ರೀವಿಮೋಚನೆ, ಸ್ತ್ರೀ ಸ್ವಾತಂತ್ರ್ಯ, ಎಂದು ಮಾತನಾಡುವ ಮಹಿಳೆಯರು, ಕುಂಗ್ ಫೂ.ಕರಾಟೆ,ಕುಸ್ತಿ ಜಮ್ನಾಸಿಯಂ,ಯೋಗ ವ್ಯಾಪಾರ,ಉದ್ಯಮ ಇತರ ವೀರ ಕಲೆಗಳಲ್ಲಿ ತೊಡಗಿಸಿಕೊಳ್ಳುವ ಮಹಿಳೆಯರು ಅಕ್ಕಮಹಾದೇವಿಯವರ ಈ ವೀರತ್ವದ ಚಿಂತನೆಗಳನ್ನು ಮನನಮಾಡಬೇಕು.

37).ಅರ್ಥ ಸನ್ಯಾಸಿಯಾದಡೇನಯ್ಯ.

ಆವಂಗದಿಂದ ಬಂದಡೂ ಕೊಳದಿರಬೇಕು. ರುಚಿಸನ್ಯಾಸಿಯಾದಡೇನಯ್ಯ?

ಜಿ.ಹ್ವೆಯ ಕೊನೆಯಲ್ಲಿ ಮಧುರವನರಿಯದಿರಬೇಕು. ಸ್ತ್ರೀಸನ್ಯಾಸಿಯಾದಡೇನಯ್ಯ?

ಜಾಗ್ರಸ್ವಪ್ನಸುಷುಪ್ತಿಯಲ್ಲಿ ತಟ್ಟಿಲ್ಲದಿರಬೇಕು. ದಿಗಂಬರಿಯಾದಡೇನಯ್ಯ?

ಮನ ಬತ್ತಲೆ ಇರಬೇಕು.

ಇಂತೀ ಚತುರ್ವಿಧದ ಹೊಲಬನರಿಯದೆ ವೃಥಾ ಕೆಟ್ಟರು

ಕಾಣ ಚೆನ್ನಮಲ್ಲಿಕಾರ್ಜುನಾ.

ಪದಗಳ ಅರ್ಥ

ಅರ್ಥ-ಸಂಪತ್ತು

ಸನ್ಯಾಸಿ-ತ್ಯಾಗಿ

ರುಚಿ-ನಾಲಿಗೆ ಇಷ್ಟವಾದುದು.

ಜಾಗ್ರ-ಎಚ್ಚರ,

ಸ್ವಪ್ನ-ಕನಸು,

ಸುಷುಪ್ತಿ-ನಿದ್ರೆ,

ಬಯಕೆ-ಆಶೆ,

ದಿಗಂಬರ-ಬಯಲು, ನಿರ್ಮಲತ್ವ,

ಚತುರ್ವಿಧ-ನಾಲ್ಕುವಿಧ ಫಲಹಳು. ಧರ್ಮ,ಅರ್ಥ,ಕಾಮ,ಮೋಕ್ಷ

ಹೊಲಬು-ಪಥ, ದಾರಿ,

ವೃಥಾ-ಸುಮ್ಮನೆ.

ವಚನದ ಅರ್ಥ

ಅರ್ಥಸನ್ಯಾಸಿಯಾದಡೇನಯ್ಯ? ಆವಂಗದಿಂದ ಬಂದರೂ ಕೊಳದಿರಬೇಕು. ಹಣ ಬೇಡ ಎನ್ನುವ ಸನ್ಯಾಸಿಯಾದರೇನು? ಸಂಪತ್ತು ಯಾವ ಸ್ವರೂಪದಿಂದ ಬಂದರೂ ಸ್ವೀಕರಿಸದಿರಬೇಕು.ರುಚಿ ಸನ್ಯಾಸಿಯಾದರೇನಯ್ಯ? ಜಿಯಕೊನೆಯಲ್ಲಿ ಮಧುರವನರಿಯದಿರಬೇಕು, ಉಪ್ಪು ಹುಳಿ, ಕಾರ ಹೇಗಿದ್ದರೂ ನಡೆಯುತ್ತದೆ. ರುಚಿಗೆ ಮಹತ್ವ ಕೊಡುವುದಿಲ್ಲ. ಎನ್ನುವುದಕ್ಕಿಂತ ನಾಲಗೆಯು ಸಿಹಿಯನ್ನರಿಯದಂತೆ ಊಟ ಮಾಡುವುದನ್ನು ಕಲಿಯಬೇಕು. ಅಪೇಕ್ಷೆಯಿಲ್ಲದಿರಬೇಕು. ಸ್ತ್ರೀಸನ್ಯಾಸಿಯಾದರೇ

ನಯ್ಯಜಾಗ್ರ, ಸ್ವಪ್ನ, ಸುಷುಪ್ತಿಯಲ್ಲಿ ಬಯಕೆಯನರಿಯದಿರಬೇಕು. ಸ್ತ್ರೀ ಯಿಂದ ದೂರ ವಿದ್ದೇನೆ ಎಂದರಾಗಲಿಲ್ಲ. ಎಚ್ಚರ, ನಿದ್ರೆ, ಕನಸುಗಳಲ್ಲಿಯೂ ಹೆಣ್ಣಿನ ಅಪೇಕ್ಷೆಯಿಲ್ಲ ದಂತೆ ಇರಬೇಕು. ದಿಗಂಬರಿಯಾದರೇನಯ್ಯ ಮನ ಬತ್ತಲೆ ಯಿರಬೇಕು. ಬಟ್ಟೆತೊಡ ದಿದ್ದರಾಗಲಿಲ್ಲ, ಮನಸ್ಸು ಈ ಬಟ್ಟೆ ತೊಡುವುದರ ಭಾವನೆಗಳಿಂದ ಮುಕ್ತವಾಗ ಬೇಕು. ಇಂತೀ ಚತುರ್ವಿಧ ಹೊಲಬನರಿಯದೆ ಕೆಟ್ಟರು ಚೆನ್ನಮಲ್ಲಿಕಾರ್ಜುನಾ. ಈ ನಾಲ್ಕು ದಾರಿಯನ್ನರಿಯದೆ ಸುಮ್ಮನೆ ಕೆಟ್ಟರು ಸನ್ಯಾಸತ್ವ ಎಂದರೆ ಹೆಣ್ಣು ಹೊನ್ನು ಮಣ್ಣು ಇವುಗಳ ಆಶೆಗಳು ಎಚ್ಚರ, ನಿದ್ರೆ, ಕನಸುಗಳಲ್ಲಿ ಕೂಡ ಬರದಂತೆ ಮನಸ್ಸು,

ಭಾವಜೀವನಕ್ಕೆ ಬಂದ ಅಕ್ಕನವರಿಗೆ ಸನ್ಯಾಸಿಗಳ ಅಂತರಂಗ, ಬಹಿರಂಗಗಳು ಚೆನ್ನಾಗಿ ತಿಳಿದವು. ಒಳಗೊಂದು ಹೊರಗೊಂದಾದವರನ್ನು ಇಲ್ಲಿ ತರಾಟೆಗೆ ತೆಗೆದುಕೊಂಡಿ ದ್ದಾರೆ. ಹೊರಗೆ ಅಬ್ಬರದಲ್ಲಿರುವವರು ಕೋಗಿಲೆ ಪುಚ್ಛ ಧರಿಸಿದ ಕೆಂಬೂತ ಎಂದು ಅವರಿಗೆ ತಿಳಿಯಿತು. ಸನ್ಯಾಸತ್ವ ಹೇಗಿರಬೇಕು ಎಂಬುದಕ್ಕೆ ನಾಲ್ಕು ಉದಾಹರಣೆ ನೀಡಿದ್ದಾರೆ. ಹಣ, ಭೋಗ, ವಿಷಯ, ಆಶೆ ಇವುಗಳನ್ನು ದಾಟಿದವರು ಮಾತ್ರ ಸನ್ಯಾ ಸಿಗಳು. ಅರ್ಥಸನ್ಯಾಸಿಯಾದವರು ಸಂಪತ್ತು ಯಾವ ವಿಧದಲ್ಲಿ ಬಂದರೂ ಸ್ವೀಕರಿ ಸಬಾರದು. ರುಚಿ, ನಾಲಗೆ ಭೋಗವನ್ನು ಮೀರಿದವರು ಯಾವ ವಿಧದ ರುಚಿ ಯನ್ನೂ ಅನುಭವಿಸದಂತೆ ಅಪೇಕ್ಷೆಯಿಲ್ಲದಿರಬೇಕು. ಉಪ್ಪು ಹುಳಿ, ಸಿಹಿ,ಮಧುರ , ಕಹಿ ಹೀಗೆ ಪರೀಕ್ಷಿಸುವುದಾಗಲಿ ಅಪೇಕ್ಷಿಸುವುದಾಗಲಿ ಕೂಡದು. ಹೆಣ್ಣು ಬೇಡ ವೆಂದವರು ತ್ರಿವಿಧಾವಸ್ತೆಯಲ್ಲು ಅದನ್ನು ಅಪೇಕ್ಷಿಸಬಾರದು. ಯಾರು ದಿಗಂಬರ ಇರುತ್ತಾರೆ ಅವರು ನಿರ್ಮಲತ್ವ ವನ್ನು ಮನಸ್ಸಿನಲ್ಲಿ ಸಾಧಿಸಿಕೊಳ್ಳಬೇಕು.ಇದನ್ನು ಸಾಧಿಸದೆ ಏನನ್ನು ಸಾಧಿಸಿದರೂ ಉಪಯೋಗವಿಲ್ಲ.